ಉಡುಪಿ

(ಕ್ಷೇತ್ರಪರಿಚಯ)

ಶ್ರೀ ಕೃಷ್ಣಾಪುರ ಮಠ,

ಉಡುಪಿ

ವಿಷಯಸೂಚಿ

ಉಡುಪಿ

(ಕ್ಷೇತ್ರಪರಿಚಯ)

ಶ್ರೀ ಕೃಷ್ಣಾಪುರ ಮಠ,

ಉಡುಪಿ, ದ. ಕ.

[ಬೆಲೆ: ಮೂವತ್ತೊಂದು ಪೈಸೆ.

Publishers

SRI KRISHNAPUR MUTT,

Post Box No. 4

UDIPI, S. K.

First Edition	1957,	5,000	Copies
Second Edition	1958,	5,000	Copies
Third Edition	1961,	5,000	Copies
Fourth Edition	1965,	5,000	Copies
Fifth Edition	1969,	10,000	Copies

Printers

Manipal Power Press, Manipal





ಲೋಕಗುರುಗಳಾದ

ಶ್ರೀಮಧ್ವಾನಂದತೀರ್ಥಭಗವತ್ಪಾದಾಚಾರ್ಯರು.

॥ ಶ್ರೀಃ ॥

ಉಡುಪಿ


೧. ಪರಶುರಾಮ ಕ್ಷೇತ್ರ

ಶ್ರೀಮನ್ನಾರಾಯಣನು ಪರಶುರಾಮನಾಗಿ ಅವತರಿಸಿ ಇಪ್ಪತ್ತೊಂದು ಸಲ ಕ್ಷತ್ರಿಯರನ್ನೆಲ್ಲ ಸಂಹರಿಸಿದ ತರುವಾಯ ಒಂದು ಯಾಗವನ್ನು ಮಾಡಿ ಭೂಮಂಡಲವನ್ನೆಲ್ಲಾ ಬ್ರಾಹ್ಮಣರಿಗೆ ದಾನವಾಗಿ ಇತ್ತನು. ದಾನಕೊಟ್ಟ ಭೂಮಿಯಲ್ಲಿ ಪುನಃ ನೆಲೆಸುವುದು ಸರಿಯಲ್ಲವೆಂದು ಬಗೆದು ಸಮುದ್ರಕ್ಕೆ ಬಾಣವನ್ನು ಎಸೆದು ಗೋಕರ್ಣದಿಂದ ಕನ್ಯಾಕುಮಾರಿಯ ವರೆಗಿನ ಹೊಸ ಪ್ರದೇಶವನ್ನೇ ಸೃಷ್ಟಿಸಿದನು. ಪರಶುರಾಮನು ವರುಣನಿಂದ ಪಡೆದ ಈ ಪ್ರದೇಶವೆ ಪರಶುರಾಮ ಕ್ಷೇತ್ರವೆಂದು ಪ್ರಸಿದ್ಧವಾಗಿದೆ. ಈ ಪ್ರದೇಶಕ್ಕೆ ತನ್ನ ಭಕ್ತನಾದ ರಾಮಭೋಜನೆಂಬವನನ್ನು ಅರಸನನ್ನಾಗಿ ಮಾಡಿದನು.

ರಾಮಭೋಜರಾಜನು ಅಶ್ವಮೇಧಯಾಗವನ್ನು ಮಾಡಬೇಕೆಂದು ಬಯಸಿ ಯಾಗಭೂಮಿಯನ್ನು ಉಳುವಾಗ ನೇಗಿಲಿಗೆ ಸಿಕ್ಕಿ ಒಂದು ಸರ್ಪವು ಮೃತಿಯನ್ನೈದಿತು. ಅದು ವಸ್ತುತಃ ಸರ್ಪವಾಗಿರದೆ ಯಾಗಕ್ಕೆ ವಿಘ್ನವನ್ನುಂಟು ಮಾಡಲು ಸರ್ಪದ ಆಕಾರದಲ್ಲಿ ಅಡಗಿ ಕುಳಿತ ಅಸುರನೇ ಆಗಿದ್ದರೂ ರಾಮ ಭೋಜನಿಗೆ ಸರ್ಪಹತ್ಯೆಯ ಕುರಿತು ಚಿಂತೆಯುಂಟಾಯಿತು. ಇದರ ಪರಿಹಾರ ಕ್ಕಾಗಿ ವಿಶಾಲವಾದ ಬೆಳ್ಳಿಯ ಪೀಠವನ್ನು ಮಾಡಿಸಿ ಅದರ ನಾಲ್ಕೂ ಮೂಲೆ ಗಳಲ್ಲಿ ಸರ್ಪಾಕೃತಿಯನ್ನು ಇರಿಸಿಪೂಜಿಸುವಂತೆಯೂ, ಮಧ್ಯದಲ್ಲಿ ತಾನೇ ಆವಿರ್ಭವಿಸುವೆನೆಂದೂ ಆತನ ತೂಕದಷ್ಟು ಬಂಗಾರವನ್ನು ತುಲಾಭಾರವಮಾಡಿ ದಾನವೀಯುವಂತೆಯೂ ಪರಶುರಾಮನೆ ಸೂಚನೆ ಮಾಡಲು ಅರಸನು ಅದರಂತೆಯೆ ಮಾಡಿದನು. ಯಾಗಾಂತ್ಯದಲ್ಲಿ ಪರಶುರಾಮನು ಪ್ರತ್ಯಕ್ಷನಾಗಿ "ಈ ಯಾಗಭೂಮಿಯು ರೂಪ್ಯಪೀಠವೆಂಬ ಪುಣ್ಯಕ್ಷೇತ್ರವಾಗಿ ಪ್ರಖ್ಯಾತ ವಾಗಲಿ" ಎಂದು ಹರಸಿದನು. ರಾಮಭೋಜನು ಅಪೂರ್ವ ತುಲಾಭಾರವನ್ನು

ಮಾಡಿದುದರಿಂದ ಈ ದೇಶಕ್ಕೆ ತೌಳವದೇಶವೆಂದು ಹೆಸರುಂಟಾಯಿತು. ಇದಿಷ್ಟು ಈ ಸ್ಥಳದ ಕುರಿತು ದೊರೆಯುವ ಪ್ರಾಚೀನ ಚರಿತ್ರೆ.

೨. ಉಡುಪಿಯೆಂದಾದುದು




ಚಂದ್ರಮೌಳೀಶ್ವರ ದೇವರು

ರೂಪ್ಯಪೀಠ ಕ್ಷೇತ್ರಕ್ಕೆ ಉಡುಪಿ ಎಂಬ ಹೆಸರು ಪ್ರಸಿದ್ಧವಾಗಿರುವುದು. ಹೀಗೆ ಹೆಸರು ಬರಲು ಚಂದ್ರನು ಕಾರಣನಾದನು. ದಕ್ಷಪ್ರಜಾಪತಿಯ ಶಾಪಕ್ಕೊಳಗಾದ ಚಂದ್ರನು ಶಾಪ ನಿವೃತ್ತಿಗಾಗಿ ಈ ಕ್ಷೇತ್ರದ ಅರಣ್ಯದಲ್ಲಿ ಪರಮೇಶ್ವರನನ್ನು ಕುರಿತು ತಪಸ್ಸನ್ನು ಆಚರಿಸಿದನು. ತಪಸ್ಸಿಗೆ ಒಲಿದ ಪರಮೇಶ್ವರನು ಪ್ರತ್ಯಕ್ಷನಾಗಿ ಆತನ ಶಾಪ ವಿಮೋಚನೆಗೊಳಿಸಿದನು. ಈ ಸ್ಥಳವೆ ಚಂದ್ರಮೌಳೀಶ್ವರ ದೇವಾಲಯವೆಂದು ಪ್ರಸಿದ್ಧವಾಗಿದೆ. ಚಂದ್ರನು ತಪಸ್ಸು ಮಾಡಿದ ಸ್ಥಳವು ಅಬ್ಜಾರಣ್ಯವೆಂದು ಹೆಸರು ಪಡೆದಿದೆ. ಅಲ್ಲಿ ಚಂದ್ರ ಪುಷ್ಕರಣೀ ಎಂಬ ಪವಿತ್ರ ತೀರ್ಥವಿದೆ. ಉಡುಪ (ಉಡು – ನಕ್ಷತ್ರಗಳಿಗೆ, ಪ– ಎಂದರೆ ಸ್ವಾಮಿ) ಎಂದರೆ ಚಂದ್ರನೆಂದು ಅರ್ಥ. ಉಡುಪನು ತಪಸ್ಸು ಮಾಡಿ ಸಿದ್ಧಿಯನ್ನು ಹೊಂದಿದುದರಿಂದ ಈ ಸ್ಥಳವು ಉಡುಪಿ ಎಂದು ಹೆಸರು ಪಡೆಯಿತು.

೩. ಅನಂತಾಸನನ ಪ್ರಾದುರ್ಭಾವ

ಉಡುಪಿಯ ಪುರಾತನ ದೇವಾಲಯವಾದ ಅನಂತಾಸನ (ಅನಂತೇಶ್ವರ) ಕ್ಷೇತ್ರದಲ್ಲಿ ರಾಮಭೋಜರಾಜನಿಗೆ ವರವಿತ್ತಂತೆ ಪರಶುರಾಮನು ಪದ್ಮನಾಭ ಸ್ವರೂಪದಲ್ಲಿ ಸನ್ನಿಹಿತನಾಗಿರುತ್ತಾನೆ. ಪದ್ಮನಾಭದೇವರು ಭಕ್ತರ ಕಾಮಧೇನುವಾಗಿ ಈ ಸ್ಥಳದಲ್ಲಿ ನೆಲೆಸಿರುವ ಕುರಿತಾದ ಪುರಾಣಕಥೆಯಿಂತಿದೆ:



ಅನಂತಾಸನ ದೇವರು

ಹಿಂದೆ ವೇದಾರಣ್ಯವೆಂಬ ಪುಣ್ಯಸ್ಥಳದಲ್ಲಿ ಭಾರದ್ವಾಜ ಗೋತ್ರದ ವಿಪ್ರ ಶ್ರೇಷ್ಠನೊಬ್ಬನು ತನ್ನ ಪತ್ನಿಯೊಡನೆ ವಾಸವಾಗಿದ್ದನು. ಪುತ್ರಲಾಭವಾಗಬೇಕೆಂಬ ಆಸೆಯಿಂದ ಆ ಬ್ರಾಹ್ಮಣನು ಚಿರಕಾಲ ವೇದ ಪ್ರತಿಪಾದ್ಯನಾದ ನಾರಾಯಣನನ್ನು ಸೇವಿಸುತ್ತಿದ್ದಾಗ ಒಂದು ದಿನ ದೇವರು ಸ್ವಪ್ನದಲ್ಲಿ ಸೂರ್ಯಕೋಟಿ ಪ್ರಕಾಶಮಾನನಾಗಿ ಕಾಣಿಸಿಕೊಂಡನು. ಬಲ ತೊಡೆಯ ಮೇಲೆ ಅಭಯ ಹಸ್ತವನ್ನೂ ಎಡತೊಡೆಯ ಮೇಲೆ ಎಡಗೈಯನ್ನೂ ಇಟ್ಟು ಆದಿಶೇಷನ ಮೇಲೆ ಅನಂತಾಸನರೂಪದಿಂದ ಕುಳಿತಿರುವ ಸ್ವಾಮಿಯು ಬ್ರಾಹ್ಮಣನೊಡನೆ– "ಬ್ರಾಹ್ಮಣಶ್ರೇಷ್ಠನೆ, ಇಲ್ಲಿಂದ ಎರಡು ಕ್ರೋಶ ದೂರದಲ್ಲಿ ಪಶ್ಚಿಮ ಸಮುದ್ರದ ತೀರದಲ್ಲಿ ರೂಪ್ಯಪೀಠವೆಂಬ ಕ್ಷೇತ್ರವೊಂದಿದೆ. ಮೋಕ್ಷಪ್ರದವಾದ ಆ ಕ್ಷೇತ್ರಕ್ಕೆ ನೀನು ಪತ್ನೀ ಶಿಷ್ಯರಿಂದೊಡಗೂಡಿದವನಾಗಿ ಹೋಗಿ ಅಲ್ಲಿರುವ

ತೀರ್ಥದಲ್ಲಿ ಸ್ನಾನವನ್ನು ಮಾಡಿ ದೇವ ಪಿತೃಗಳನ್ನು ಸಂತೃಪ್ತಿಗೊಳಿಸಿ ಹಿರಣ್ಯ ಶ್ರಾದ್ಧವನ್ನು ಮಾಡಿ ಚಂದ್ರಮೌಳೀಶ್ವರನನ್ನು ಆರಾಧಿಸು, ಮತ್ತು ಆತನ ಹಿಂಬದಿಯಲ್ಲಿರುವ ಯಜ್ಞಕುಂಡವಾಗಿದ್ದ ನಾಗ ಪೀಠದಲ್ಲಿ ಕ್ಷೀರವನ್ನು ಅಭಿಷೇಕ ಮಾಡು. ಅಲ್ಲಿ ನಾನು ಲಿಂಗಾಕಾರದಿಂದ ಪ್ರಾದುರ್ಭವಿಸುವೆನು. ನಾನು ಪರಶುರಾಮನಾಗಿರುವಾಗ ನನ್ನ ಅಂಶವನ್ನೆ ಮಹಾರುದ್ರನಲ್ಲಿರಿಸಿ ಆತನಿಂದ ಧನುರ್ವಿದ್ಯೆಯನ್ನು ಕಲಿತೆನು. ಆಗ ಮಹಾರುದ್ರನು 'ನೀನು ನನ್ನ ಅಂತರ್ಯಾಮಿಯಾಗಿದ್ದುದರ ಜ್ಞಾಪಕಾರ್ಥವಾಗಿ ಲಿಂಗಾಕಾರದಲ್ಲಿರುವ ನಿನ್ನ ಅಂಶರೂಪವನ್ನು ಪೂಜಿಸುವಂತಾಗಬೇಕೆಂದು' ಕೋರಿಕೊಂಡ ಮೇರೆಗೆ ನಾನು ಆತನ ಅಭಿಲಾಷೆಯನ್ನು ಮನ್ನಿಸುವುದಾಗಿ ವರವಿತ್ತಿರುವೆನು. ಆ ವರದಂತೆ ನಾನು ಲಿಂಗಾಕಾರದಲ್ಲಿ ಪ್ರಕಟವಾಗಿ ನಿನಗೆ ಪುತ್ರಲಾಭವೆ ಮೊದಲಾದ್ದನ್ನು ಕರುಣಿಸುವೆನು" ಎಂದು ಆಜ್ಞೆಯಿತ್ತನು. ಬ್ರಾಹ್ಮಣನು ಎಚ್ಚರವಾಗಿ ಆನಂದದಿಂದ ಪುಲಕಗೊಂಡು ಸ್ವಾಮಿಯು ಅಪ್ಪಣೆಕೊಡಿಸಿದಂತೆ ಪತ್ನೀ ಶಿಷ್ಯರಿಂದೊಡಗೂಡಿ ರೂಪ್ಯಪೀಠ ಕ್ಷೇತ್ರಕ್ಕೆ ಬಂದು ಸ್ವಪ್ನದಲ್ಲಿ ಹೇಳಿರುವಂತೆಯೇ ಮಾಡಿದನು. ಸ್ವಪ್ನದ ಸೂಚನೆಯಂತೆಯೆ ಲಿಂಗಾಕಾರದಲ್ಲಿ ಸ್ವಾಮಿ ಕಾಣಿಸಿಕೊಂಡು ಆ ವಿಪ್ರನಿಗೆ ಪುತ್ರಲಾಭಾದಿಗಳನ್ನು ಕರುಣಿಸಿದನು. ಮಹಾರುದ್ರನ ಅಪೇಕ್ಷೆಯಂತೆಯೆ ಶ್ರೀಮನ್ನಾರಾಯಣನು ಲಿಂಗಾಕಾರದಲ್ಲಿ ಪ್ರಕಟನಾಗಿ ಅರ್ಚಿತನಾಗುವುದರಿಂದ ಮೊದಲು ಚಂದ್ರಮೌಳೀಶ್ವರ ದರ್ಶನ ಮಾಡಿ ತದನಂತರ ಅನಂತೇಶ್ವರನ ದರ್ಶನವನ್ನು ಪಡೆಯಬೇಕೆಂಬ ಪದ್ಧತಿಯುಂಟಾಗಿದೆ. ಅನಂತನೆಂದರೆ ಮಹಾಶೇಷನೆಂದು ಅರ್ಥ. ಆತನೆ ಆಸನವಾಗಿ ಉಳ್ಳವನು ಎಂಬುದ



ಶ್ರೀ ಅನಂತಾಸನ ದೇವರ ಬಲಿಮೂರ್ತಿ

ರಿಂದ ಅನಂತಾಸನನೆಂದೂ, ಅನಂತನಿಗೆ ಸ್ವಾಮಿ ಎಂಬುದರಿಂದ ಅನಂತೇಶ್ವರನೆಂದೂ ಪ್ರಖ್ಯಾತನಾಗಿರುವ ಈ ಸ್ವಾಮಿಯು ಅನಂತಪದ್ಮನಾಭನೆಂದೂ ಭಜಿಸಲ್ಪಡುತ್ತಿದ್ದಾನೆ.

೪. ಮಯೂರವರ್ಮ—ಶಿವಳ್ಳಿ ಬ್ರಾಹ್ಮಣರು

ರಾಮಭೋಜನ ಅನಂತರದ ಕಾಲದಲ್ಲಿ ಸಪ್ತಪರ್ವತಪ್ರದೇಶದಲ್ಲಿ ಕದಂಬ ರಾಜನು ರಾಜ್ಯವಾಳುತ್ತಿದ್ದನು. ಅವನು ಪರಮೇಶ್ವರನ ಪ್ರಸಾದದಿಂದ ಹುಟ್ಟಿದವನು ಎಂಬ ಪ್ರತೀತಿಯಿತ್ತು. ಅವನ ವಂಶದಲ್ಲಿ ಹುಟ್ಟಿದ ವಸುರಾಜನೆಂಬವನು ತನ್ನ ಪುತ್ರಿಯಾದ ಸುಶೀಲೆಗೆ ಸೂರ್ಯವಂಶೋತ್ಪನ್ನನಾದ ಹೇಮಾಂಗದನೆಂಬವನೊಡನೆ ವಿವಾಹ ಮಾಡಿಸಿದನು. ಈ ದಂಪತಿಗಳಿಗೆ ಮಗನೊಬ್ಬನು ಹುಟ್ಟಿದನು. ಈತನೇ ಮಯೂರವರ್ಮನು. ಈತನು ಪಿತ್ರರಿಷ್ಟ ಯೋಗದಲ್ಲಿ ಹುಟ್ಟಿದುದರಿಂದ ಯುದ್ಧವು ಸಂಭವಿಸಿ ಹೇಮಾಂಗದನು ಮೃತಿಯನ್ನು ಹೊಂದಿದನು. ಆಗ ರಾಣಿ ಸುಶೀಲೆಯು ತನ್ನ ಕುಮಾರನೊಂದಿಗೆ ಶುಕ್ತಿಮತೀ ತೀರಕ್ಕೆ ಬಂದು ಬಹು ಕಷ್ಟದಿಂದ ಜೀವನ ಮಾಡುತ್ತಿದ್ದಳು. ಆಗ ವಸಿಷ್ಠ ಮಹರ್ಷಿಗಳು ಅಲ್ಲಿಗೆ ಬಂದು ಕೋಟೀಶ್ವರನನ್ನು ಆರಾಧಿಸಿದರೆ ಸಂಕಷ್ಟ ಪರಿಹಾರವಾಗುವುದೆಂದು ಸೂಚಿಸಿದರು. ಅದರಂತೆಯೆ ಆಕೆಯು ಕೋಟೀಶ್ವರನನ್ನು ಪ್ರಾರ್ಥನೆ–ಆರಾಧನೆಗಳಿಂದ ಸೇವಿಸುತ್ತಿದ್ದಳು. ಆ ಮಹೇಶ್ವರನ ಅನುಗ್ರಹದಿಂದಲೆ ಮಯೂರವರ್ಮನು ತೌಳವರಾಜ್ಯಕ್ಕೆ ಅರಸನಾದನು.

ಮಯೂರವರ್ಮನು ಧರ್ಮದಿಂದ ರಾಜ್ಯವಾಳುತ್ತಿರುವಾಗ ಕಶ್ಯಪ ಮಹರ್ಷಿಗಳು ಈ ರಾಜ್ಯದ ದಾರಿಯಾಗಿ ಮುಂದಕ್ಕೆ ಪ್ರಯಾಣ ಬೆಳೆಸುತ್ತಿರುವಾಗ ಮಯೂರವರ್ಮನು ತನ್ನ ಅರಮನೆಗೆ ಬಂದು ಆತಿಥ್ಯವನ್ನು ಸ್ವೀಕರಿಸಬೇಕೆಂಬುದಾಗಿ ಆ ತಪೋಧನರನ್ನು ಪ್ರಾರ್ಥಿಸಿದನು. ಆದರೆ ಆ ತಪಸ್ವಿಗಳು ಈ ರಾಜ್ಯದಲ್ಲಿ ಯೋಗ್ಯರಾದ ಬ್ರಾಹ್ಮಣರಿಲ್ಲವಾದುದರಿಂದ ತಾನು ಆತಿಥ್ಯವನ್ನು ಸ್ವೀಕರಿಸಲಾರೆನೆಂದು ಹೇಳಲು ರಾಜನು ತನ್ನ ದೇಶದಲ್ಲಿ ಉತ್ತಮರಾದ ಬ್ರಾಹ್ಮಣರನ್ನು ಆಹ್ವಾನಿಸಿ, ಅವರು ನೆಲೆನಿಲ್ಲುವಂತೆ ಏರ್ಪಾಡು ಮಾಡುವೆನೆಂದೂ, ಅಂತಹ ಬ್ರಾಹ್ಮಣರು ಎಲ್ಲಿರುವರೆಂಬುದನ್ನು ಆಜ್ಞಾಪಿಸಬೇಕೆಂದೂ ಬಿನ್ನವಿಸಿದನು. ಅದಕ್ಕೆ ಕಶ್ಯಪರು ಅಹಿಚ್ಛತ್ರದಲ್ಲಿ ಉತ್ತಮರಾದ ಬ್ರಾಹ್ಮಣರು ಇರುವರೆಂದೂ ಅವರನ್ನು ಕಳೆದು ತರಬಹುದೆಂದೂ ಆಜ್ಞೆಯಿತ್ತರು.

ಅಹಿಚ್ಛತ್ರವೆಂಬುದು ಉತ್ತರ ಪಾಂಚಾಲ ದೇಶದಲ್ಲಿದೆ. ಹಿಂದೆ ಈ ಪ್ರದೇಶವು ದ್ರೋಣಾಚಾರ್ಯರವಶದಲ್ಲಿತ್ತು. ಗೋಮತೀನದಿಯ ಉತ್ತರದಲ್ಲಿ ರೋಹಿಲಖಂಡವೆಂದು ಪ್ರಸಿದ್ಧವಾಗಿರುವ ಅಹಿಚ್ಛತ್ರದಲ್ಲಿ ಸುಬೋಧನೆಂಬ ಒಬ್ಬ ಮಹಾ ಸಾತ್ವಿಕನಾದ ಬ್ರಾಹ್ಮಣಶ್ರೇಷ್ಠನು ಅನೇಕ ಶಿಷ್ಯರಿಂದೊಡಗೂಡಿ ಜೀವಿಸುತ್ತಿದ್ದನು. ಮಯೂರವರ್ಮನು ಅಹಿಚ್ಛತ್ರಕ್ಕೆ ಬಂದು ಈ ಸುಬೋಧಶರ್ಮನನ್ನು ಬಹುಕಾಲ ಸೇವಿಸಿ ಆತನನ್ನು ಸಂತೋಷಪಡಿಸಿದನು. ಆಗ ಪ್ರಸನ್ನನಾದ ಸುಬೋಧನು ತನ್ನಿಂದೇನಾಗಬೇಕೆಂದು ಕೇಳಲು ಮಯೂರವರ್ಮನು ಹೀಗೆ ವಿಜ್ಞಾಪಿಸಿಕೊಂಡನು. "ಗೋರಾಷ್ಟ್ರದೇಶದಲ್ಲಿ ಗೋಕರ್ಣ ಮಂಡಲವೆಂದು ಪ್ರಸಿದ್ಧವಾಗಿರುವ ನಮ್ಮ ತೌಳವದೇಶದಲ್ಲಿ ಶ್ರೇಷ್ಠರಾದ ಬ್ರಾಹ್ಮಣರು ಇಲ್ಲದಿರುವುದು ಕೊರತೆಯಾಗಿದೆ. ತಾವು ಅಲ್ಲಿಗೆ ಯೋಗ್ಯ ಬ್ರಾಹ್ಮಣರನ್ನು ಕಳುಹಿಸುವ ಅನುಗ್ರಹ ಮಾಡಬೇಕು. ಅಲ್ಲಿ ಅವರಿಗೆ ಯಾವ ಬಾಧೆಯೂ ಬಾರದಂತೆ ನಾನು ನೋಡಿಕೊಳ್ಳುವೆನಲ್ಲದೆ ಅವರ ಧರ್ಮ ಕರ್ಮಾನುಷ್ಠಾನಗಳಿಗೆಲ್ಲ ವ್ಯವಸ್ಥೆಗಳನ್ನು ಕಲ್ಪಿಸಿಕೊಡುವೆನು." ಅರಸನ ಬಿನ್ನಹವನ್ನು ಕೇಳಿ ಸುಬೋಧನು ತನ್ನ ಶಿಷ್ಯರನ್ನು ತೌಳವದೇಶಕ್ಕೆ ಹೋಗಿ ನೆಲಸುವಂತೆ ಆಜ್ಞಾಪಿಸಿದನು. ಆತನ ಆಜ್ಞೆಯಂತೆ ಅನೇಕ ಬ್ರಾಹ್ಮಣರು ಪತ್ನೀ ಪುತ್ರರೇ ಮೊದಲಾದ ಸಮಸ್ತ ಕುಟುಂಬ ಪರಿವಾರಗಳೊಡನೆ ಬಂಡಿಯನ್ನೇರಿ ದೂರದ ತೌಳವದೇಶಕ್ಕೆ ಬಂದರು. ಅರಸನು ಅವರಿಗೆ ಎಲ್ಲ ಸೌಕರ್ಯಗಳನ್ನು ಒದಗಿಸಿದನು. ಮುಂದೆ ಮಯೂರವರ್ಮನು ವೃದ್ಧನಾಗಲು ತನ್ನ ಮಗನಾದ ಚಂದ್ರಾಂಗದನಿಗೆ ಪಟ್ಟಾಭಿಷೇಕವನ್ನು ಮಾಡಿ ಮಂತ್ರಿಗಳ ವಶ ಆಡಳಿತವನ್ನು ಒಪ್ಪಿಸಿ ತಪಸ್ಸಿಗಾಗಿ ಅರಣ್ಯಕ್ಕೆ ತೆರಳಿದನು.

ಮಂತ್ರಿಗಳು ಸ್ವಾರ್ಥಪರರೂ, ಚಂದ್ರಾಂಗದನು ಅಪ್ರಬುದ್ಧನೂ ಆಗಿದ್ದುದರಿಂದ ಅಹಿಚ್ಛತ್ರದಿಂದ ಬಂದ ಬ್ರಾಹ್ಮಣರು ತುಂಬ ತೊಂದರೆಗೊಳಗಾಗಬೇಕಾಯಿತು. ಅವರು ಈ ಸಂಕಷ್ಟಗಳನ್ನೆದುರಿಸಲಾರದೆ ತಮ್ಮ ಮೂಲಸ್ಥಳಕ್ಕೆ ಹಿಂತೆರಳಿದರು. ಅರಸು ಕುಮಾರನು ಪ್ರಾಪ್ತವಯಸ್ಕನಾದ ಮೇಲೆ ಈ ವಿಚಾರವನ್ನು ತಿಳಿದು ಬಹಳ ಪಶ್ಚಾತ್ತಾಪಪಟ್ಟು, ತನ್ನ ತಂದೆಯು ಕರೆಸಿದ ಬ್ರಾಹ್ಮಣರನ್ನು ಪುನಃ ಕರೆಯಿಸಿ ನೆಲೆಗೊಳಿಸಬೇಕೆಂದು ನಿಶ್ಚಯಿಸಿ ಅಹಿಚ್ಛತ್ರಕ್ಕೆ ತೆರಳಿ ಅಲ್ಲಿಯ ಬ್ರಾಹ್ಮಣರಲ್ಲಿ ಕ್ಷಮೆಯನ್ನು ಯಾಚಿಸಿ ಮರಳಿ ಬರುವಂತೆ ಪ್ರಾರ್ಥಿಸಿಕೊಂಡನು. ಆ ಬ್ರಾಹ್ಮಣರು ರಾಜನ ಪ್ರಾರ್ಥನೆಯನ್ನು ಮನ್ನಿಸಿ ಸಪರಿವಾರರಾಗಿ ಆತನೊಡನೆ ಮರಳಿ ತೌಳವದೇಶಕ್ಕೆ ಆಗಮಿಸಿದರು. ರಾಜನು

ಅವರೆಲ್ಲರನ್ನೂ ೩೨ ಗ್ರಾಮಗಳಲ್ಲಿ ನೆಲೆಗೊಳಿಸಿದನು. ಶಿವಳ್ಳಿಯಲ್ಲಿ ೧೨೦ ಕುಲಗಳೂ, ಕೋಟ, ನೀಲಾವರ ಮೊದಲಾದ ಗ್ರಾಮಗಳಲ್ಲಿ ಎಂಟೆಂಟು ಕುಲಗಳೂ ಆಗಿ ಆ ಬ್ರಾಹ್ಮಣರು ವಾಸಿಸುತ್ತಿದ್ದರು. ಅವರೆಲ್ಲರೂ ತಾವು ನಿಂತಿರುವ ಸ್ಥಳದ ಹೆಸರಿನಲ್ಲಿ ಕುಲನಾಮಗಳನ್ನು ಧರಿಸಿದರು. ಆಗ ಉಂಟಾದ – ಮೂಡುಮನೆ, ನಡುಮನೆ, ಪುತ್ತೂರಾಯ, ಕಲ್ಲೂರಾಯ, ಮುಂತಾದ ಕುಲಪ್ರಭೇದಗಳೂ, ನಿಯಮ ಆಚಾರಗಳೂ, ಇಂದಿಗೂ ಬಳಕೆಯಲ್ಲಿರುವುವು. ಅಹಿಚ್ಛತ್ರದಿಂದ ಬಂದ ಈ ಬ್ರಾಹ್ಮಣರು ತಮ್ಮ ಸದಾಚಾರ, ವೇದಾಧ್ಯಯನ, ತತ್ತ್ವೋಪದೇಶ ಮೊದಲಾದುವುಗಳಿಂದ ಧರ್ಮನಿಷ್ಠರಾಗಿ ಬಾಳುತ್ತಿದ್ದರು. ರೂಪ್ಯಪೀಠವೆಂಬ ಈ ಸ್ಥಳಕ್ಕೆ ಶಿವಳ್ಳಿ ಎಂದೂ ಹೆಸರಿದೆ. ಅಹಿಚ್ಛತ್ರದಿಂದ ಬಂದ ಬ್ರಾಹ್ಮಣರು ಈ ಪ್ರದೇಶದಲ್ಲಿ ಬಂದು ನೆಲೆಸಿದುದರಿಂದಲೇ ಶಿವಳ್ಳಿ ಬ್ರಾಹ್ಮಣರು ಎಂದು ಪ್ರಸಿದ್ಧರಾದರು. ಈ ದೇಶವು ತೌಳವದೇಶವೆನ್ನಿಸಿದುದರಿಂದ ತೌಳವ ಬ್ರಾಹ್ಮಣರೆಂದೂ ಎನ್ನಿಸಿಕೊಂಡರು.

೫. ಶ್ರೀಮನ್ಮಧ್ವಾಚಾರ್ಯರು

ಉಡುಪಿಯ ಪ್ರಸಿದ್ಧಿಯು ದ್ವೈತಮತ ಪ್ರತಿಷ್ಠಾಪನಾಚಾರ್ಯರಾದ ಶ್ರೀಮನ್ಮಧ್ವಾಚಾರ್ಯರಿಂದ ಹೆಚ್ಚಿತು. ಅವರು ಪ್ರತಿಷ್ಠಿಸಿದ ಶ್ರೀಕೃಷ್ಣನಿಂದ ಹೆಚ್ಚಿತು. ಆದ್ದರಿಂದ ಆ ವಿಷಯವನ್ನೂ ತಿಳಿದುಕೊಳ್ಳುವುದು ಮುಖ್ಯ.

ಶ್ರೀಮನ್ನಾರಾಯಣನ ಸಂಕಲ್ಪದಂತೆ ಶ್ರೀವಾಯುದೇವರು ಮಧ್ವಾಚಾರ್ಯರೆಂಬ ಹೆಸರಿನಿಂದ ಅವತರಿಸಿ ಸಚ್ಛಾಸ್ತ್ರವನ್ನು ಪ್ರಚಾರಮಾಡಿ ಸಜ್ಜನರನ್ನು ಉದ್ಧರಿಸಿದರು ಎಂದು ಶಾಸ್ತ್ರಗಳಲ್ಲೂ ಅಪರೋಕ್ಷಜ್ಞಾನಿಗಳ ಮಾತುಗಳಲ್ಲೂ ಸ್ಫುಟವಾಗಿ ಉಕ್ತವಾಗಿದೆ. ಮಧ್ವಾಚಾರ್ಯರ ಅವತಾರಕಾಲವು ಶಾ. ಶಕ ೧೧೬೦, ಕ್ರಿಸ್ತಶಕ ೧೨೩೮, ಕಲಿವರ್ಷ ೪೩೩೯. ವಿಲಂಬಿ ಸಂವತ್ಸರದ ಆಶ್ವಯುಜ ವಿಜಯದಶಮೀ ಎಂದು ನಿರ್ಣಯಿಸಲ್ಪಟ್ಟಿದೆ.

ಮಧ್ವಾಚಾರ್ಯರ ತಂದೆಯ ಹೆಸರು ನಾರಾಯಣ ಭಟ್ಟರೆಂದು. ಇವರ ಮನೆತನದ ಹೆಸರಾದ ನಡುಮನೆ ಭಟ್ಟರೆಂದು ಪ್ರಸಿದ್ಧರಾಗಿದ್ದರು. ಇವರು ಬಹಳ ಸದಾಚಾರ ಸಂಪನ್ನರೂ ಸಾತ್ತ್ವಿಕರೂ ಆಗಿದ್ದರು. ಉಡುಪಿಯ ಸಮೀಪದ ಕಡಿಯಾಳಿ ಎಂಬಲ್ಲಿ ವೇದವತಿ ಅಥವಾ ಸಾವಿತ್ರಿ ಎಂಬ ಸಾಧ್ವಿಯಾದ ಮಡದಿಯೊಡನೆ ವಾಸಿಸುತ್ತಿದ್ದ ಭಟ್ಟರಿಗೆ ಎರಡು ಗಂಡುಮಕ್ಕಳು ಮೃತ

ರಾದುದರಿಂದ ಮನಸ್ಸಿಗೆ ತುಂಬ ದುಃಖವಾಗಿ ತನ್ನ ಒಬ್ಬಳು ಮಗಳೊಡನೆ ಅವರು ಉಡುಪಿಯ ದಕ್ಷಿಣದಲ್ಲಿ ಏಳು ಮೈಲು ದೂರದಲ್ಲಿರುವ ದುರ್ಗಾ ಬೆಟ್ಟದ ಪೂರ್ವದಲ್ಲಿರುವ ಪಾಜಕಕ್ಷೇತ್ರವೆಂಬಲ್ಲಿಗೆ ತೆರಳಿ ವಾಸಿಸತೊಡಗಿದರು. ತನ್ನ ಕುಲದೇವರಾದ ಶ್ರೀಮದನಂತಾಸನ ದೇವರಲ್ಲಿ ಅವರಿಗೆ ಬಹು ಭಕ್ತಿ ಯಿತ್ತು. ಆದುದರಿಂದಲೆ ತನಗೊಬ್ಬ ವಂಶೋದ್ಧಾರಕನಾದ ಯೋಗ್ಯ ಪುತ್ರ ನನ್ನು ಕರುಣಿಸುವಂತೆ ಅನಂತಾಸನದೇವರನ್ನು ಹನ್ನೆರಡು ವರ್ಷಗಳ ಕಾಲ ನಿಯಮನಿಷ್ಠರಾಗಿ ಸೇವೆಮಾಡಿದರು. ದೇವರ ಕರುಣೆಯಿಂದ ವೇದವತಿ ಗರ್ಭತಾಳಿ ಸುಮುಹೂರ್ತದಲ್ಲಿ ಪುತ್ರರತ್ನವನ್ನು ಪ್ರಸವಿಸಿದಳು. ಈ ಶಿಶು ಪ್ರಸವವಾಗುವ ಪೂರ್ವದಲ್ಲಿಯೇ ಮಹಾಪುರುಷನೊಬ್ಬನ ಜನನವಾಗುವು ದೆಂಬುದರ ಸೂಚನೆಯಾಗಿತ್ತು. ಪ್ರಸವಕಾಲದಲ್ಲೂ ಶುಭಶಕುನಗಳುಂಟಾ ದುವು. ಭಟ್ಟರು ಮಗುವಿಗೆ ವಾಸುದೇವನೆಂದು ನಾಮಕರಣ ಮಾಡಿದರು. ವಾಸುದೇವನು ತನ್ನ ಅಲೌಕಿಕ ತೇಜಸ್ಸಿನಿಂದ ತಾಯಿ-ತಂದೆಗಳನ್ನು ಆನಂದ ಪಡಿಸುತ್ತ ಬೆಳೆಯುತ್ತಿದ್ದನು. ಗರ್ಭಾಷ್ಟಮದಲ್ಲಿ ಉಪನಯನ ಸಂಸ್ಕಾರವನ್ನು ಜರುಗಿಸಿದರು. ಅನಂತರ ಈ ವಟುವು ಸನಕಾದಿ ಪರಂಪರೆಯವರಾದ ಶ್ರೀ ಅಚ್ಯುತಪ್ರೇಕ್ಷತೀರ್ಥರೆಂಬ ಯತಿಗಳಿಂದ ಪರಮಹಂಸ ಸನ್ಯಾಸದೀಕ್ಷೆಯನ್ನು ಪಡೆದು, ಶ್ರೀ ಮಧ್ವರೆಂಬ ಹೆಸರಿನಿಂದ ಪ್ರಖ್ಯಾತರಾದರು. ಇವರಿಗೆ ಸರ್ವಜ್ಞ, ಆನಂದತೀರ್ಥ, ಪೂರ್ಣಪ್ರಜ್ಞ ಮುಂತಾದ ಹೆಸರುಗಳೂ ಪ್ರಸಿದ್ಧವಾಗಿದ್ದುವು.

ಶ್ರೀಮನ್ಮಧ್ವಾಚಾರ್ಯರು ತನ್ನ ಅವತಾರದ ಉದ್ದೇಶಾನುಗುಣವಾಗಿ ದ್ವೈತಶಾಸ್ತ್ರವನ್ನು ಭರತಖಂಡದಲ್ಲೆಲ್ಲಾ ಪ್ರಚಾರಮಾಡಿ ಸಜ್ಜನರನ್ನು ಅನು ಗ್ರಹಿಸಿ ದ್ವೈತಮತ ಪ್ರತಿಷ್ಠಾಪನಾಚಾರ್ಯರೆಂದು ಬಿರುದಾಂಕಿತರಾದರು.

ದ್ವೈತಮತದ ಮುಖ್ಯ ಸಾರವನ್ನು ಸಂಕ್ಷೇಪವಾಗಿ ಹೀಗೆ ಹೇಳ ಬಹುದು: ಶ್ರೀಮನ್ನಾರಾಯಣನು ಸರ್ವೋತ್ತಮನು. ಸರ್ವಗುಣಪೂರ್ಣನು. ಸರ್ವಜ್ಞನು. ಅನಾದ್ಯನಂತನು. ಬ್ರಹ್ಮಾದಿ ಸಕಲ ಜೀವರೂ ಆತನ ಸೇವಕರು. ಸಕಲ ಜೀವರುಗಳೂ ತಾರತಮ್ಯದಿಂದ ಗುಣ ವ್ಯತ್ಯಾಸವುಳ್ಳವರು. ಈ ಜಗತ್ತು ಸತ್ಯವಾದುದು. ಜೀವೇಶ್ವರ ಭೇದ, ಜೀವ–ಜೀವಭೇದ, ಜೀವ-ಜಡಭೇದ, ಜಡ-ಜಡಭೇದ, ಜಡೇಶ್ವರ ಭೇದವೆಂದು ಐದು ಬಗೆಯ ಭೇದವು ಸತ್ಯ ವಾದುದು. ಅನಾದಿ ಸಂಸಾರಬಂಧನಕ್ಕೆ ಸಿಲುಕಿದ ಜೀವರು ಶಾಸ್ತ್ರಶ್ರವಣ ಮನನಾದಿಗಳನ್ನು ಆಚರಿಸಿ ಧ್ಯಾನ ಭಕ್ತಿಗಳಿಂದ ಶ್ರೀಹರಿಯನ್ನು ಒಲಿಸಿ, ಹರಿಯ ಪ್ರಸಾದದಿಂದ ಸಂಸಾರಬಂಧದಿಂದ ಮುಕ್ತರಾಗಿ ಸ್ವಸ್ವರೂಪಾವಿ

ಭಾವರೂಪ, ಶಾಶ್ವತ ಸುಖಾನುಭವವೆಂಬ ಮೋಕ್ಷವನ್ನು ಪಡೆಯುವರು. ಪ್ರತ್ಯಕ್ಷ, ಅನುಮಾನ, ಆಗಮಗಳೆಂಬವು ಮೂರು ಪ್ರಮಾಣಗಳು. ವೇದಗಳೂ ಸಕಲ ಶಾಸ್ತ್ರಗಳೂ ಶ್ರೀಹರಿಯ ಮಹಿಮೆಯನ್ನು ಸಾರುತ್ತಿವೆ. ಹರಿಭಕ್ತರು ತಪ್ತಮುದ್ರಾಂಕನವನ್ನು ಮಾಡಿಕೊಳ್ಳಬೇಕೆಂಬ ನಿಯಮವಿದೆ.

ಶ್ರೀಮನ್ಮಧ್ವಾಚಾರ್ಯರು ಯಾಥಾರ್ಥವಾದ ಈ ದ್ವೈತಮತವನ್ನು ಪ್ರಚಾರ ಮಾಡುತ್ತಿರುವಾಗ ಅನೇಕ ಪಂಡಿತರು ಅವರೊಡನೆ ವಾದಮಾಡಿ ಸೋತು ತಾವೂ ಶ್ರೀಮನ್ಮಧ್ವಾಚಾರ್ಯರ ಅನುಯಾಯಿಗಳಾದರು. ಶ್ರೀಮನ್ಮಧ್ವಾಚಾರ್ಯರು ಬದರಿಕಾಶ್ರಮಕ್ಕೆ ತೆರಳಿ ಶ್ರೀವೇದವ್ಯಾಸರ ಸಂದರ್ಶನ ಪಡೆದು ಭಾರತದ ಆದ್ಯಂತ ಮತ ಪ್ರಚಾರವನ್ನು ಮಾಡಿದರು. ಅವರು ಬ್ರಹ್ಮಸೂತ್ರ, ಉಪನಿಷತ್ತು, ಗೀತೆಗಳಿಗೆ ಭಾಷ್ಯ, ಭಾಗವತತಾತ್ಪರ್ಯ, ಮಹಾಭಾರತ ತಾತ್ಪರ್ಯ, ಕೃಷ್ಣಾಮೃತಮಹಾರ್ಣವ ಇತ್ಯಾದಿ ಪುರಾಣ ಪ್ರಸ್ಥಾನದ ಗ್ರಂಥಗಳು, ತಂತ್ರಸಾರವೆಂಬ ಆಗಮ ಪ್ರಸ್ಥಾನ, ಹಾಗೂ ದ್ವಾದಶ ಸ್ತೋತ್ರ ಮೊದಲಾದ ಮೂವತ್ತೇಳು ಗ್ರಂಥಗಳನ್ನು ರಚಿಸಿ ತನ್ನ ಸಿದ್ಧಾಂತ ವನ್ನು ನೆಲೆಗೊಳಿಸಿದರು. ಈ ಗ್ರಂಥಗಳು ಸರ್ವಮೂಲಗ್ರಂಥಗಳೆಂದು ಮಾನ್ಯ ವಾಗಿವೆ.

ಶ್ರೀಮಧ್ವಾಚಾರ್ಯರು ಸದ್ಭಕ್ತರ ಅನುಗ್ರಹಕ್ಕಾಗಿ ಸಾಲಿಗ್ರಾಮ ಶಿಲಾನಿರ್ಮಿತವಾದ ಶ್ರೀಕೃಷ್ಣ ಮೂರ್ತಿಯನ್ನು ಉಡುಪಿಯಲ್ಲಿ ಪ್ರತಿಷ್ಠಿ ಸಿದರು. ಸಾಲಿಗ್ರಾಮಶಿಲಾವಿಗ್ರಹವಾದುದರಿಂದ ನಿತ್ಯ ಸಾನ್ನಿಧ್ಯವಿರುವ ಶ್ರೀಕೃಷ್ಣ ಮೂರ್ತಿಯಲ್ಲಿ ತನ್ನ ಪೂಜಾ ವಿಶೇಷದಿಂದ ವಿಶೇಷ ಸನ್ನಿಧಾನವು ನೆಲೆಗೊಳ್ಳುವಂತೆ ಮಾಡಿರುವುದರಿಂದ ಶ್ರೀಕೃಷ್ಣ ಸಂದರ್ಶನ – ಸೇವೆಗಳು ಮೋಕ್ಷಾದಿ ಪುರುಷಾರ್ಥಗಳನ್ನು ಸಾಧಿಸಿಕೊಡುವುವು.

ತನ್ನ ಅನಂತರದಲ್ಲಿ ಶ್ರೀಕೃಷ್ಣಪೂಜೆಯನ್ನು ನಿರಂತರವಾಗಿ ನಡೆಸ ಬೇಕೆಂದೂ, ತನ್ನ ಸಿದ್ಧಾಂತದ ಪ್ರಧಾನ ಪ್ರಚಾರಕರೆಂದೂ ಉಡುಪಿಯಲ್ಲಿ ಎಂಟು ಮಂದಿ ಬಾಲಯತಿಗಳಿಗೆ ಪರಮಹಂಸ ಸನ್ಯಾಸದೀಕ್ಷೆಯನ್ನಿತ್ತು ತನ್ನ ಮುಖ್ಯ ಮೂಲಪೀಠ ಸಿಂಹಾಸನವು ಸ್ಥಿರವಾಗಿ ಭಕ್ತಾಭೀಷ್ಟ ಸಾಧಕವಾಗು ವಂತೆಯೂ ಅಷ್ಟ ಮೂಲಪೀಠಗಳು ಸ್ಥಿರವಾಗಿ ನಡೆದುಬರುವಂತೆಯೂ ಅನುಗ್ರಹಿಸಿದರು. ಆಗಿನ ಕಾಲದಲ್ಲಿ ಪ್ರತಿಯೊಬ್ಬ ಯತಿಗಳೂ ಎರಡೆರಡು ತಿಂಗಳಿಗೊಬ್ಬರಂತೆ ಶ್ರೀಕೃಷ್ಣನ ಪೂಜೆ ಮಾಡುತ್ತಲಿದ್ದರು.

ಹೀಗೆ ಶ್ರೀಮಧ್ವಾಚಾರ್ಯರು ೭೯ ವರ್ಷಗಳ ಕಾಲ ಭೂಮಿಯಲ್ಲಿ ಸಜ್ಜನರಿಗೆ ಉಪದೇಶ ಮಾಡುತ್ತ ವ್ಯಕ್ತರಾಗಿದ್ದು ಶಾ. ಶಕ ೧೨೩೯, ಕ್ರಿ. ಶಕ ೧೩೧೭. ಪಿಂಗಳ ಸಂ।ರದ ಮಾಘ ಶುದ್ಧ ನವಮಿಯಂದು ಶ್ರೀಮದನಂತಾಸನ ದೇವರ ಎದುರು ಶಿಷ್ಯರುಗಳಿಗೆ ಉಪದೇಶ ಮಾಡುತ್ತಿರುವಾಗಲೆ ಅದೃಶ್ಯ ರಾಗಿ ಬದರಿಕಾಶ್ರಮಕ್ಕೆ ತೆರಳಿದರು. ಅವರು ಒಂದು ಅಂಶದಲ್ಲಿ ಅನಂತಾಸನ ದೇವಾಲಯದ ಗುಡಿಯಲ್ಲಿಯೂ, ಒಂದಂಶದಲ್ಲಿ ಶ್ರೀಕೃಷ್ಣಮಠದ ಸಿಂಹಾಸನ ದಲ್ಲಿಯೂ. ಒಂದಂಶದಿಂದ ಪರ್ಯಾಯ ಶ್ರೀಪಾದಂಗಳವರಲ್ಲಿಯೂ ಸನ್ನಿಹಿತ ರಾಗಿದ್ದುಕೊಂಡು ಭಕ್ತರನ್ನು ಸಲಹುತ್ತಿರುವರು.

೬. ಉಡುಪಿ ಶ್ರೀಕೃಷ್ಣ

ಶ್ರೀಮಧ್ವಾಚಾರ್ಯರಿಂದ ಪ್ರತಿಷ್ಠಿತನಾದ ಶ್ರೀಕೃಷ್ಣನ ಮೂಲ ವಿಗ್ರಹ ವನ್ನು ಪೂರ್ವಕಾಲದಲ್ಲಿ ಶ್ರೀಕೃಷ್ಣನೆ ವಿಶ್ವಕರ್ಮನಿಂದ ಸಾಲಿಗ್ರಾಮಶಿಲೆಯಿಂದ ಮಾಡಿಸಿದನು. ದ್ವಾಪರಾಂತ್ಯದಲ್ಲಿ ದೇವಕಿಯು ಶ್ರೀಕೃಷ್ಣನ ಬಾಲಲೀಲೆಗಳನ್ನು ನೋಡಬೇಕೆಂಬ ಬಯಕೆಯನ್ನು ಪ್ರಕಟಪಡಿಸಲು ತಾಯಿಯ ಅಪೇಕ್ಷೆಯಂತೆ ಶ್ರೀಕೃಷ್ಣನು ಬಾಲಲೀಲೆಗಳನ್ನು ತೋರಿ ದೇವಕಿಯನ್ನು ಆನಂದಪಡಿಸಿದನು. ಈ ದಿವ್ಯಾದ್ಭುತ ಲೀಲೆಗಳನ್ನು ಮರೆಯಲ್ಲಿ ನೋಡಿದ ರುಕ್ಮಿಣೀದೇವಿಯು ಮೋಹಿತಳಾಗಿ ಇಂಥ ಮುದ್ದಾದ ಮೂರ್ತಿಯನ್ನು ತನ್ನ ಪೂಜೆಗಾಗಿ ಮಾಡಿಸಿ ಕೊಡಬೇಕೆಂದು ಶ್ರೀಕೃಷ್ಣನೊಡನೆ ಪ್ರಾರ್ಥಿಸಲು ಆತನು ವಿಶ್ವಕರ್ಮನನ್ನು ಕರೆಸಿ ಸಾಲಿಗ್ರಾಮಶಿಲೆಯಿಂದ ಕಡುಗೋಲು-ನೇಣುಗಳನ್ನು ಧರಿಸಿರುವ ಬಾಲಕೃಷ್ಣ ಮೂರ್ತಿಯನ್ನು ಮಾಡಿಸಿಕೊಟ್ಟನು. ಅದನ್ನು ರುಕ್ಮಿಣಿಯು ಅಂತಃಪುರದಲ್ಲಿರಿಸಿ ನಿತ್ಯ ಪೂಜೆ ಸಲ್ಲಿಸುತ್ತಿದ್ದಳು. ಶ್ರೀಕೃಷ್ಣಾವತಾರ ಸಮಾ ಪ್ತಿಯ ತರುವಾಯ ಅರ್ಜುನನು ರುಕ್ಮಿಣಿಯೆ ಮೊದಲಾದ ಅಷ್ಟ ಮಹಿಷಿ ಯರಿಂದ ಪೂಜಿಸಿಕೊಳ್ಳಲ್ಪಡುತ್ತಿದ್ದ ಈ ವಿಗ್ರಹವನ್ನು ರುಕ್ಮಿಣಿಯ ಲೀಲಾ ರಣ್ಯದಲ್ಲಿ ಇರಿಸಿದ್ದನು. ಕಾಲಾನಂತರದಲ್ಲಿ ಅದೇ ವಿಗ್ರಹವು ಗೋಪೀಚಂದನ ದಲ್ಲಿ ಹುದುಗಿತ್ತು. ಹಡಗಿನವನೊಬ್ಬನು ತನ್ನ ಹಡಗಿನ ಭಾರದ ಸಮತೋಲನ ಕ್ಕಾಗಿ ದ್ವಾರಕಿಯಲ್ಲಿದ್ದ ಗೋಪೀಚಂದನದ ಗಟ್ಟಿಯನ್ನು ಹಡಗಿನಲ್ಲಿರಿಸಿ ಪಶ್ಚಿಮ ಸಮುದ್ರ ತೀರದಲ್ಲಿ ಪ್ರಯಾಣ ಮಾಡುತ್ತಿದ್ದನು.


ಸರ್ವಜ್ಞರಾದ ಮಧ್ವಾಚಾರ್ಯರು ಭಕ್ತರನ್ನು ಉದ್ಧರಿಸಲು ತಕ್ಕ ಸಮಯವೊಂದು ಒದಗಿಬರುತ್ತಿರುವುದನ್ನು ಬಲ್ಲವರಾಗಿ ಒಡಭಾಂಡೇಶ್ವರ

ದಲ್ಲಿ ಧ್ಯಾನಾಸಕ್ತರಾಗಿ ಕುಳಿತಿದ್ದರು. ಆಗ ದೂರದಲ್ಲಿ ಹೋಗುತ್ತಿರುವ ಹಡಗು ಗಾಳಿಗೆ ಸಿಕ್ಕಿ ಮುಳುಗುವಂತಾಗಲು ಹಡಗಿನ ಯಜಮಾನನು ತೀರ ದಲ್ಲಿ ಕುಳಿತಿದ್ದ ಶ್ರೀಮದಾಚಾರ್ಯರನ್ನು ಕಾಪಾಡಬೇಕೆಂದು ಬೇಡಿಕೊಂಡನು. ಆಚಾರ್ಯರು ತಮ್ಮ ಶಾಟಿಯ ತುದಿಯ ಗಾಳಿಯಿಂದ ಹಡಗವು ಸುರಕ್ಷಿತ ವಾಗಿ ಮುಂದುವರಿಯುವಂತೆ ಅನುಗ್ರಹಿಸಲು ಪರಮ ಸಂತುಷ್ಟನಾದ ನಾವಿಕನು ಭಕ್ತಿಯಿಂದ ಕಾಣಿಕೆಯನ್ನರ್ಪಿಸಲು ಅಪೇಕ್ಷಿಸಿದಾಗ 'ನಮಗೆ ಗೋಪೀ ಚಂದನವನ್ನು ಮಾತ್ರ ಕೊಟ್ಟರೆ ಸಾಕೆಂದು' ಆಚಾರ್ಯರು ನುಡಿದರು. ನಾವಿಕನು ಅದನ್ನು ಅರ್ಪಿಸಿದನು. ಆ ಗಟ್ಟಿಯನ್ನು ಒಡೆದು ಚಕ್ರಾಂಕಿತವಾದ ಸಾಲಿಗ್ರಾಮಶಿಲಾನಿರ್ಮಿತವಾದ ಹಾಗೂ ಸುಂದರವಾದ ಬಾಲಕೃಷ್ಣವಿಗ್ರಹ ವನ್ನು ಕಂಡು ಸ್ತೋತ್ರಗೈಯುತ್ತ ಉಡುಪಿಗೆ ತಂದು ಸರೋವರದಲ್ಲಿ ಶುದ್ಧ ಪಡಿಸಿ ಮಠದೊಳಗೆ ಪ್ರತಿಷ್ಠೆಮಾಡಿ ಪೂಜಿಸುತ್ತಿದ್ದರು. ಶ್ರೀಕೃಷ್ಣನ ಪೂಜಾದಿ ಗಳು ಸತತವಾಗಿ ನಡೆಯಲೂ ದ್ವೈತ ಸಿದ್ಧಾಂತದ ಪ್ರಚಾರವು ಅವ್ಯಾಹತವಾಗಿ ಸಾಗಲೂ ತನ್ನ ಪ್ರೀತಿಯ ಎಂಟು ಮಂದಿ ಬಾಲಯತಿಗಳನ್ನು ತನ್ನ ಮೂಲ ಪೀಠಗಳಲ್ಲಿ ನಿಯಮಿಸಿದರು. ಅಂದಿನಿಂದ ಇಂದಿನ ವರೆಗೂ ಶ್ರೀಕೃಷ್ಣನ ಪೂಜಾಧಿಕಾರವು ಉಡುಪಿಯ ಅಷ್ಟ ಮಠಗಳ ಶ್ರೀಪಾದಂಗಳವರಿಗೆ ಮಾತ್ರವೇ ಸೇರಿದುದಾಗಿರುತ್ತದೆ. ಮೂಲವಿಗ್ರಹವನ್ನು ಸ್ಪರ್ಶಿಸುವ ಅಧಿಕಾರ ಕೂಡಾ ಇತರರಿಗಿರುವುದಿಲ್ಲ.

೨. ಶ್ರೀಕೃಷ್ಣಮಠ

ಉಡುಪಿಯ ಪ್ರಾಧಾನ್ಯಕ್ಕೆ ಮೂಲಹೇತುವಾದ ಶ್ರೀಕೃಷ್ಣಮಠವು ಸಣ್ಣದಾದರೂ ಅಚ್ಚುಕಟ್ಟಾಗಿ ಶೋಭಿಸುತ್ತಿದೆ. ದೇವಮಂದಿರದ ಎದುರುಗಡೆ ಪ್ರವೇಶದ್ವಾರವಿರದೆ ಅಲ್ಲಿ ಸದಾಕಾಲವೂ ದೇವರನ್ನು ನೋಡಲು ಅನುಕೂಲ ವಾಗುವಂತೆ 'ಕಿಟಿಕಿ'ಯಿದೆ. ಕಿಂಡಿಯ ಎದುರು ಗೋಪುರವು ಕಂಗೊಳಿಸುತ್ತಿದೆ. ಮಂದಿರದ ಎಡಪಾರ್ಶ್ವದಲ್ಲಿ ಪ್ರವೇಶದ ಮಹಾದ್ವಾರವಿದೆ. ಒಳಗೆ ಪ್ರವೇಶ ವಾದೊಡನೆ ಬಲಬದಿಯಲ್ಲಿ ಮಧ್ವಪುಷ್ಕರಣಿಯು ಸಿಗುವುದು. ಮಧ್ವ ಸರೋವರದ ಸುತ್ತಲೂ ಕಲ್ಲಿನ ಪಾವಟಿಕೆಗಳಿದ್ದು ನಡುವೆ ಮಂಟಪವೊಂದಿದೆ. ಈ ಮಂಟಪದಲ್ಲಿಯೇ ಉತ್ಥಾನದ್ವಾದಶಿಯ ದಿನ ಶ್ರೀಕೃಷ್ಣಾಪುರ, ಶ್ರೀ ಪುತ್ತಿಗೆ, ಶ್ರೀ ಕಾಣೂರು ಮಠಗಳ ಪಟ್ಟದ ದೇವರಿಗೆ ಸಾಯಂಕಾಲ ಕ್ಷೀರಾಬ್ಧಿ ಪೂಜೆಯು ವೈಭವದಿಂದ ನಡೆಯುವುದು. ಈ ಮಂಟಪಕ್ಕೆ ಹೋಗಲು ಕಲ್ಲಿನ

ಸೇತುವೆಯಿದೆ. ಉತ್ಸವ ಕಾಲದಲ್ಲಿ ತೆಪ್ಪೋತ್ಸವವು ಇಲ್ಲಿಯೇ ನಡೆಯುವುದು. ಸರೋವರವನ್ನು ಸುತ್ತುತ್ತಾ ಬರುವಾಗ ನೈಋತ್ಯ ಭಾಗದಲ್ಲಿ ಭಾಗೀರಥಿಯ ಗುಡಿಯಿದೆ. ಮಧ್ವಸರೋವರವು ಪುಣ್ಯಪ್ರದವಾದ ತೀರ್ಥವಾಗಿದ್ದು ಕೃತ ಯುಗದಲ್ಲಿ ವಿರಜಾತೀರ್ಥವೆಂದೂ ತ್ರೇತಾ ಮತ್ತು ದ್ವಾಪರಯುಗಗಳಲ್ಲಿ




ಸದಾಕಾಲವೂ ದೇವರನ್ನು ಸಂದರ್ಶಿಸಬಹುದಾದ ಕಿಟಿಕಿ ಮತ್ತು ಅದರ ಎದುರಿಗಿರುವ ಗೋಪುರ — ಚಂದ್ರಶಾಲೆ.

ಅನಂತಸರಸ್ಸೆಂದೂ ಮಧ್ವಾಚಾರ್ಯರ ತರುವಾಯ ಮಧ್ವಸರಸ್ಸೆಂದೂ ಪ್ರಖ್ಯಾತವಾಗಿದೆ. ಶ್ರೀಮದಾಚಾರ್ಯರ ಕಾಲದಿಂದಲೂ ಹನ್ನೆರಡು ವರ್ಷ ಗಳಿಗೊಮ್ಮೆ ಮಧ್ವಸರೋವರಕ್ಕೆ ಭಾಗೀರಥಿ ಬರುವುದು ಪ್ರಸಿದ್ಧವಾಗಿದೆ. ಶ್ರೀಕೃಷ್ಣನ ಅಭಿಷೇಕಕ್ಕೆ ಈ ಸರಸ್ಸಿನ ಉದಕವನ್ನೇ ಉಪಯೋಗಿಸುತ್ತಾರೆ.

ಮಧ್ವಸರೋವರದಿಂದ ಮೇಲೆ ಬರುವಾಗ ಎದುರಾಗಿ ಶ್ರೀಕೃಷ್ಣ ಮಠದ ಒಳಪ್ರವೇಶದ್ವಾರವಿದೆ. ಗುಡಿಯ ಒಳಪ್ರವೇಶಿಸುವಾಗಲೆ ಒಂದು ವಿಗ್ರಹವು ಕಾಣಸಿಗುವುದು. ಅದೇ ಚೆನ್ನಕೇಶವನ ವಿಗ್ರಹವು. ಅದರ ಹಿಂಬದಿ

ಯಲ್ಲಿ ಗರ್ಭಗುಡಿಗೆ ಪ್ರವೇಶಿಸುವ ದ್ವಾರವಿದೆ. ಆದರೆ ಅದನ್ನು ವರುಷದ ಎಲ್ಲಾ ದಿನಗಳಲ್ಲೂ ಮುಚ್ಚಿದ್ದು ವಿಜಯದಶಮಿಯಂದು ಈ ಬಾಗಿಲಿನಿಂದಲೆ ನೂತನ ಧಾನ್ಯವನ್ನು ಗರ್ಭಗುಡಿಯ ಒಳಗೆ ಒಯ್ಯುವುದು ಸಂಪ್ರದಾಯ. ಗರ್ಭಗುಡಿಯ ದಕ್ಷಿಣ ಭಾಗದಲ್ಲಿ ಸೂರ್ಯಶಾಲೆಯೆಂಬ ಚಾವಡಿಯಿದೆ.




ಮಧ್ವಸರೋವರ ಮತ್ತು ನಡುವಿನ ಮಂಟಪ

ಅದರ ಆಚೆ ಈಚೆ ಪಾರ್ಶ್ವದ ಕೊಠಡಿಗಳಲ್ಲಿ ದೇವರ ಚಿನ್ನದ ಪಾಲಕಿಯೇ ಮೊದಲಾದ ಚಿನ್ನಾಭರಣಗಳನ್ನು ಇರಿಸುತ್ತಾರೆ.

ಗರ್ಭಗುಡಿಯಲ್ಲಿ ಶ್ರೀಕೃಷ್ಣನು ಪಶ್ಚಿಮಾಭಿಮುಖವಾಗಿವಿರಾಜಿಸುತ್ತಿದ್ದಾನೆ. ದೇವರನ್ನು ಗಾಯತ್ರೀ ಯಂತ್ರಬದ್ಧವಾದ ನವಗ್ರಹ ಕಿಟಕಿಯ ಮೂಲಕ ಹಗಲೂ ರಾತ್ರೆ ಸಂದರ್ಶಿಸಬಹುದಾಗಿದೆ. ಈ ಕಿಂಡಿಗೆ ಚತುರ್ವಿಂಶತ್ಯಾದಿ ಮೂರ್ತಿಗಳನ್ನು ಕೆತ್ತಿಸಿರುವ ಬೆಳ್ಳಿಯ ತಗಡನ್ನು ಹೊದಿಸಿರುತ್ತಾರೆ. ದೇವರ ಎದುರುಗಡೆ ಶಿಲೆಗಲ್ಲಿನ ಮುಖಮಂಟಪವಿದೆ. ಇಲ್ಲಿಯೆ ಸಂಧ್ಯಾಕಾಲದಲ್ಲಿ ನಡೆವ ಚಾಮರಸೇವೆಯೂ ರಾತ್ರೆ ಪೂಜಾನಂತರ ನಡೆಯುವ ಮಂಟಪ ಪೂಜೆಯೂ ನಡೆಯುವವು. ಮಂಟಪದ ಎದುರುಗಡೆ ಇರುವುದೇ ಚಂದ್ರ

ಶಾಲೆ. ಚಂದ್ರಶಾಲೆಯ ಮಧ್ಯದಲ್ಲಿಯೆ ಸದಾಕಾಲವೂ ಹೊರಗಿನಿಂದ ದೇವರನ್ನು ಕಾಣಬಹುದಾದ ಕಿಟಿಕಿಯಿದೆ. ಈ ಚಂದ್ರಶಾಲೆಯಲ್ಲಿಯೆ ಪುರಾಣ, ಹರಿಕಥೆ ಮೊದಲಾದುವು ನಡೆವುವು. ಚಂದ್ರಶಾಲೆಯ ಉತ್ತರ ಬದಿಯಲ್ಲಿ ಶ್ರೀಮದ್ವಾದಿರಾಜರು ಅಯೋಧ್ಯೆಯಿಂದ ತಂದು ಪ್ರತಿಷ್ಠಿಸಿದ ಶ್ರೀಮುಖ್ಯಪ್ರಾಣದೇವರ ಗುಡಿಯೂ ದಕ್ಷಿಣದಲ್ಲಿ ಗರುಡದೇವರ ಗುಡಿಯೂ ಇರುವವು



ನವಗ್ರಹ ಕಿಟಿಕಿ


ಗರ್ಭಗೃಹದ ಉತ್ತರ ಬದಿಯಲ್ಲಿ ಗರ್ಭಗೃಹದ ಒಳಕ್ಕೆ ಹೋಗುವ ಬಾಗಿಲಿದೆ. ಈ ಬಾಗಿಲಿನ ಎಡಬದಿಯಲ್ಲಿ ಶ್ರೀಮದ್ವಾದಿರಾಜರಿಂದ ಪ್ರತಿಷ್ಠಿತವಾದ ಶ್ರೀಮದಾನಂದತೀರ್ಥಭಗವತ್ಪಾದಾಚಾರ್ಯರ ವಿಗ್ರಹವಿದೆ. ಗರ್ಭಗುಡಿಯ ಒಳಗೆ ಮೂರನೆಯ ಒಂದಂಶ ದಕ್ಷಿಣಭಾಗದಲ್ಲಿ ಶ್ರೀಕೃಷ್ಣ ಮೂರ್ತಿಯಿದೆ. ಮೂರ್ತಿಯ ಇಕ್ಕೆಲದಲ್ಲೂ ದೀಪಗಳ ಸಾಲು ಅಹೋರಾತ್ರೆ ಉರಿಯುತ್ತಿದೆ. ನಂದಾದೀಪ ಶ್ರೀಮದಾಚಾರ್ಯರ ಕಾಲದಿಂದಲೂ ಉರಿಯುತ್ತಿದೆ. ಉತ್ತರ ಬದಿಯಲ್ಲಿ ಶ್ರೀ ಶ್ರೀಗಳವರು ತರ್ಪಣಾದಿಗಳಿಗೆ ಕುಳಿತುಕೊಳ್ಳುವರು. ಇಲ್ಲಿಯೆ ದೇವರ ಏಕಾಂತಸೇವೆಯ ಮಂಟಪ. ತೊಟ್ಟಿಲೂ ಇರು

ವುದು. ದೇವರ ಉತ್ಸವಮೂರ್ತಿಯ ಶಯನೋತ್ಸವವು ಇಲ್ಲಿಯೇ ನಡೆಯುವುದು.

ಗರ್ಭಗೃಹದ ಸುತ್ತಲೂ ನಾಲ್ಕು ಸಾಲಿನಲ್ಲಿ ದೀಪದ ಹಣತೆಗಳಿದ್ದು ರಾತ್ರಿಪೂಜೆ ಮತ್ತು ಕಾರ್ತಿಕಮಾಸದ ಪಶ್ಚಿಮಜಾಗರಣೆಪೂಜೆ ಸಮಯಗಳಲ್ಲಿ ದೀಪಗಳನ್ನು ಉರಿಸುವರು. ಗರ್ಭಗೃಹದ ಮೇಲ್ಭಾಗದಲ್ಲಿ ಸುತ್ತಲೂ ದಶಾವತಾರದ ಸುಂದರ ಪ್ರತಿಮೆಗಳು ಶೋಭಿಸುತ್ತಿವೆ. ಗರ್ಭಗೃಹದ ಎದುರು ಬಲಬದಿಯಲ್ಲಿ ತುಲಸಿಯ ಕಟ್ಟೆಯೂ ಅದರ ಹಿಂಬದಿ ದೀಪಸ್ತಂಭವೂ ಇದೆ. ಗರ್ಭಗೃಹದ ಉತ್ತರಕ್ಕೆ ಎಡಪಾರ್ಶ್ವದಲ್ಲಿ ದೇವರ ನೈವೇದ್ಯವನ್ನು ತಯಾರಿಸುವ ಶುದ್ಧ ಪಾಕಶಾಲೆ (ಅರಿಕೊಟ್ಟು)ಯಿದೆ. ಬಲ ಪಾರ್ಶ್ವದಲ್ಲಿ ಸಿಂಹಾಸನವಿದೆ. ಇಲ್ಲಿ ಪರ್ಯಾಯ ಸ್ವಾಮಿಗಳವರ ಚಿಕ್ಕಪಟ್ಟದ ದೇವರುಗಳನ್ನು ಇರಿಸುವರು. ಇಲ್ಲಿಯೇ ಸರ್ವಜ್ಞ ಸಿಂಹಾಸನ ಪೀಠವಿದೆ. ಅದರಲ್ಲಿ ಪರ್ಯಾಯ ಶ್ರೀಗಳವರು ಮಾತ್ರವೇ ಆಸೀನರಾಗುವುದು ಸಂಪ್ರದಾಯ. ಈಶಾನ್ಯ ಪೂರ್ವದಲ್ಲಿ ಶುದ್ಧದ ಬಾವಿ ಮತ್ತು ದೇವರ ನಿತ್ಯ ಸಮರ್ಪಣೆಗೆ ಬೇಕಾಗುವ ಗಂಧವನ್ನು ತೇಯುವ ಸ್ಥಳವೂ ಇದೆ.

ಗುಡಿಯ ಉತ್ತರ ದ್ವಾರದಿಂದ ಉತ್ತರಕ್ಕೆ ಹೋದರೆ ಚೌಕಿಯೆಂಬುದು ಸಿಗುವುದು. ಇದೇ ಶ್ರೀಗಳವರು ಭಕ್ತಾದಿಗಳೊಡನೆ ಭಿಕ್ಷಾ ಸ್ವೀಕಾರ ಮಾಡುವ ಮಹಾಪಂಕ್ತಿಯ ಸ್ಥಳವಾಗಿದೆ. ಅದರ ಮಹಡಿಯ ಮೇಲೆ ಮೃಷ್ಟಾನ್ನ ಪಂಕ್ತಿ ನಡೆಯುವುದು. ಆ ಕಟ್ಟಡದ ದಕ್ಷಿಣದಲ್ಲಿ ಮಹಾಪಾಕಶಾಲೆಯಿದೆ. ಚೌಕಿಯ ಪೂರ್ವಭಾಗದಲ್ಲಿ ಭೂರಿಭೋಜನ ನಡೆಯುವ ಭೋಜನಶಾಲೆ ಇದೆ. ಇದರ ಮಹಡಿಯಲ್ಲಿ ಶಾಲಾ ವಿದ್ಯಾರ್ಥಿಗಳ ಭೋಜನ ನಡೆಯುವುದು. ಭೋಜನಶಾಲೆಯ ಉತ್ತರ ಬದಿಯ ಅಂಗಣದಲ್ಲಿ ನಾಗಾಲಯ(ಸುಬ್ರಹ್ಮಣ್ಯಗುಡಿ)ವೂ, ಅದರ ಬಡಗು ದಿಕ್ಕಿನಲ್ಲಿ ವಸಂತಮಹಲೆಂಬ ವಸಂತಪೂಜಾ ಮಂಟಪವೂ ಇದೆ. ಇಲ್ಲಿಯೇ ನಾಟಕಾದಿ ಕಲಾಕಾರ್ಯಕ್ರಮಗಳೂ ಧಾರ್ಮಿಕೋಪನ್ಯಾಸಗಳೂ ಜರಗುತ್ತವೆ. ಅದರ ಪಶ್ಚಿಮ ದಿಕ್ಕಿನಲ್ಲಿ ಬಡಗುಮಾಳಿಗೆಯೆಂಬ ಧಾನ್ಯಾಲಯವಿದೆ. ಇಲ್ಲಿಯೇ ಪರ್ಯಾಯ ದರಬಾರವು ನಡೆಯುವುದು. ಶ್ರೀಕೃಷ್ಣಮಠದ ಆಡಳಿತ ಕಚೇರಿಯೂ ಇಲ್ಲಿಯೇ ಇರುವುದು. ನಾಗಾಲಯದ ಪೂರ್ವದಲ್ಲಿ ಗೋಶಾಲೆಯೂ ಅದರ ಆಗ್ನೇಯದಲ್ಲಿ ಕಟ್ಟಿಗೆಯ ರಥವೂ ಇವೆ. ವಸಂತ ಮಹಲಿನ ಪೂರ್ವಭಾಗದಲ್ಲಿ ಉಡುಪಿಯಲ್ಲಿ ಕಾಲವಾದ ಅಷ್ಟ ಮಠದ ಸ್ವಾಮಿಗಳವರ ಸಮಾಧಿಸ್ಥಳ(ವೃಂದಾವನ)ವಿದೆ. ಅದರ ಉತ್ತರದಲ್ಲಿ

ರಾಜಾಂಗಣವೆಂಬ ವಿಶಾಲ ಪ್ರದೇಶವಿದ್ದು ಇಲ್ಲಿಯೇ ಪರ್ಯಾಯ ಕಾಲದಲ್ಲಿ ವಿಶೇಷ ಭೂರಿಸಂತರ್ಪಣೆಗಳು ನಡೆಯುವವು. ಈ ರಾಜಾಂಗಣದ ಮಧ್ಯದಲ್ಲಿ ಒಂದು ಮಂಟಪವಿದೆ. ಪರ್ಯಾಯ ವರ್ಷದ ಅವಭೃಥೋತ್ಸವ, ಪರ್ಯಾಯೋತ್ಸವ ಕಾಲಗಳಲ್ಲಿ ಮಧ್ಯಾಹ್ನ ಶ್ರೀಕೃಷ್ಣನ ಉತ್ಸವಮೂರ್ತಿಯನ್ನು



ಭೋಜನಶಾಲೆ, ಕಟ್ಟಿಗೆರಥ

ಕೊಂಡೊಯಿದು ಮಂಟಪದಲ್ಲಿರಿಸಿ ಪಲ್ಲಪೂಜೆ (ಅನ್ನದರಾಶಿ ಪೂಜೆ) ನಡೆಸುವರು. ಮಂಟಪದ ಇಕ್ಕೆಲೆಗಳಲ್ಲೂ ಶ್ರೀಕೃಷ್ಣ ಧರ್ಮಛತ್ರವಿದೆ. ರಾಜಾಂಗಣದಲ್ಲಿ ಅವಭೃಥೋತ್ಸವದ ದಿನದ ಪ್ರಸಾದ ಸ್ವೀಕಾರಕ್ಕಾಗಿ ಶ್ರೀವಾದಿರಾಜರ ಕಾಲದಲ್ಲಿ ಅಶ್ವತ್ಥಾಮಾಚಾರ್ಯರು ಬಂದಿದ್ದರೆಂದೂ, ಈಗಲೂ ಆ ದಿನ ಅವರ ಸಮಾಗಮವಾಗುವುದಿದೆಯೆಂದೂ ಪರಂಪರಾಗತವಾದ ಐತಿಹ್ಯವಿದೆ.

೮. ಅನಂತಾಸನ

ನಾಲ್ಕುಬೀದಿಯ ಮಧ್ಯ ಶ್ರೀಕೃಷ್ಣಮಠದ ನೈಋತ್ಯ ದಿಕ್ಕಿನಲ್ಲಿ ಪ್ರಾಚೀನವಾದ ಅನಂತಾಸನದೇವಾಲಯವಿದೆ. ಇಲ್ಲಿಯ ವರ್ಷಾವಧಿ ರಥೋತ್ಸವವು

ಶಿವರಾತ್ರೆಯ ಸಮಯದಲ್ಲಿ ಜರಗುವದು. ಗರ್ಭಗೃಹದ ಮಧ್ಯ ಮಂಟಪದ ಉತ್ತರಭಾಗದಲ್ಲಿ ಶ್ರೀಮಧ್ವಾಚಾರ್ಯರ ಗುಡಿಯಿದೆ. ಅಲ್ಲಿಯೆ ಶ್ರೀಮಧ್ವಾಚಾರ್ಯರು ಶಿಷ್ಯರಿಗೆ ಉಪದೇಶಿಸುತ್ತ ಅದೃಶ್ಯರಾದುದು. ಈಗಲೂ ಆ ಸ್ಥಳಕ್ಕೇನೇ ಪೂಜೆ ನಡೆಯುವುದು. ಈ ಸ್ಥಳದಲ್ಲಿ ಪುತ್ತಿಗೆಮಠದ ಶ್ರೀಭುವ



ಅನಂತಾಸನದೇವಾಲಯ

ನೇಂದ್ರತೀರ್ಥರು ಆಚಾರ್ಯರ ಒಂದು ಪ್ರತೀಕವನ್ನು ಪ್ರತಿಷ್ಠೆ ಮಾಡಿದಾಗ 'ನಾನು ಸಾಕ್ಷಾತ್ತಾಗಿ ಇರುವ ಕಾರಣ ನನ್ನ ತಲೆಯ ಮೇಲೆ ಕಲ್ಲನ್ನಿರಿಸಿದುದೇಕೆ?' ಎಂದು ಸ್ವಪ್ನಸೂಚನೆಯಾದುದರಿಂದ ಪ್ರತಿಮೆಯನ್ನು ತೆಗೆಸಿಬಿಟ್ಟರು. ಆ ಪ್ರತಿಮೆಯನ್ನು ಈಗ ಆ ಗುಡಿಯ ಮೇಲ್ಭಾಗದಲ್ಲಿ ಇರಿಸಿದ್ದಾರೆ. ಗರ್ಭಗುಡಿಯ ಒಳದ್ವಾರದ ಬಲಪಾರ್ಶ್ವದಲ್ಲಿ ಗಣಪತಿ ಪ್ರತಿಮೆಯಿದೆ. ಈ ದೇವಸ್ಥಾನದ ಪೂರ್ವದಲ್ಲಿ ಹೊರಗೆ ದೊಡ್ಡದಾದ ಶಿಲಾಮಾನಸ್ತಂಭವಿದೆ.

ಅನಂತಾಸನದೇವಾಲಯದ ಮುಂದುಗಡೆ ಚಂದ್ರಮೌಳೀಶ್ವರದೇವಾಲಯವಿದೆ. ಇಲ್ಲಿಯ ವರ್ಷಾವಧಿ ರಥೋತ್ಸವವು ಮಾರ್ಗಶೀರ್ಷ ಮಾಸದ ಆದಿಯಲ್ಲಿ ಜರಗುವುದು.



ಚಂದ್ರಮೌಳೀಶ್ವರದೇವಾಲಯ

ಈ ಎರಡೂ ದೇವಾಲಯಗಳ ಉತ್ಸವಗಳಲ್ಲಿಯಾಗಲೀ ಬಲಿ ಇತ್ಯಾದಿಗಳಲ್ಲಿಯಾಗಲೀ ಎರಡೂ ಕಡೆಯ ದೇವರುಗಳೂ ಒಟ್ಟಾಗಿಯೆ ಬಿಜಯ ಮಾಡುವದು ಹಾಗೆಯೇ ದೀಪಾರಾಧನೆ, ರಂಗಪೂಜೆ, ರಾಶಿಪೂಜಾದಿಗಳು ಎರಡೂಕಡೆ ನಡೆಯುವುದೂ ಸಂಪ್ರದಾಯ.

೯. ರಥಬೀದಿ

ರಥಬೀದಿಯು ಸುತ್ತಲು ಅಷ್ಟ ಮಠಗಳಿವೆ. ಪೂರ್ವದಲ್ಲಿ ಕಾಣೀರುಮಠ, ಆಗ್ನೇಯದಲ್ಲಿ ಸೋದೆಮಠ, ಅದರ ಪಶ್ಚಿಮಕ್ಕೆ ತಾಗಿ ಪುತ್ತಿಗೆಮಠ, ನೈಋತ್ಯದಲ್ಲಿ ಅದಮಾರುಮಠ, ಪಶ್ಚಿಮೋತ್ತರದಲ್ಲಿ ಪೇಜಾವರಮಠ, ಅದರ ಬಡಗುಬದಿಯಲ್ಲಿ ಪಡುಪೇಟೆಯ ಬದಿ ಪಲಿಮಾರುಮಠ, ಉತ್ತರ ಬದಿಯಲ್ಲಿ ಕೃಷ್ಣಾಪುರಮಠ, ಅದರ ಪೂರ್ವದಲ್ಲಿ ಶೀರೂರುಮಠಗಳಿವೆ. ಎದುರುಗಡೆ ಹಿಂದೆ ಹೇಳಿದ ಗೋಪುರವೂ ಕಿಂಡಿಯೂ ಕಂಗೊಳಿಸುವವು. ಯಾತ್ರಿಕರು ಇಲ್ಲಿಯೆ ಶ್ರೀಕೃಷ್ಣಪಾದಧೂಳಿದರ್ಶನವನ್ನು ಮೊದಲು ಮಾಡತಕ್ಕದ್ದು. ಈ ಮಂಟಪದ ಎದುರುಗಡೆಯೆ ಕನಕನ ಗುಡಿಯಿದೆ. ಕನಕನ ಗುಡಿಯ ಆಗ್ನೇಯದಲ್ಲಿಯೆ ಶ್ರೀಕೃಷ್ಣಮಠದ ರಥಶಾಲೆಯೂ ನಗಾರಿಖಾನೆಯೂ ಇವೆ.

ಈ ಮಠಗಳ ಎದುರು ಸುತ್ತಿರುವ ಬೀದಿಯನ್ನು ಉತ್ಸವಕಾಲದಲ್ಲಿ

ರಥವನ್ನು ಎಳೆಯುವುದರಿಂದ ರಥಬೀದಿಯೆಂದು ಕರೆಯುತ್ತಾರೆ. ಈ ರಥ ಬೀದಿಯ ನಾಲ್ಕು ಕಡೆಯೂ ನಾಲ್ಕು ರಸ್ತೆಗಳು ಹೊರಟಿವೆ. ರಥಬೀದಿಯಲ್ಲಿಯೆ ಮುಳ್ಳುಬಾಗಿಲುಮಠ, ಭಂಡಾರಕೆರೆಮಠ, ವ್ಯಾಸರಾಜಮಠ, ಭೀಮನಕಟ್ಟೆ ಮಠ, ಉತ್ತರಾದಿಮಠ, ರಾಘವೇಂದ್ರಮಠಗಳು ಇವೆ.

೧೦. ಉಡುಪಿ ಶ್ರೀಕೃಷ್ಣ ನಿತ್ಯಪೂಜಾ ಕ್ರಮ

ಪ್ರತಿ ದಿನದಲ್ಲಿ ಮುಂಜಾನೆ ೪ ಘಂಟೆಗೆ ಶ್ರೀಕೃಷ್ಣಮಠದ ಹೊರ ಗೋಪುರದಲ್ಲಿ ಮಂಗಳ ಶಂಖಧ್ವನಿಯಾದೊಡನೆ ನೌಬತ್ ನಗಾರಿಯನ್ನು ಬಾರಿಸುವರು. ಆ ಕೂಡಲೇ ಸ್ವಾಮಿಗಳವರಾದಿಯಾಗಿ ಎಲ್ಲರೂ ಎದ್ದುತ್ತು ಮುಖಪ್ರಕ್ಷಾಲನಾದಿಗಳನ್ನು ಮಾಡುತ್ತಾರೆ. ದೀಪದ ನೌಕರರು ಆಗ ಹೊರಗಿನ ಘಂಟೆ ಬಾರಿಸಿ ಗರ್ಭಗುಡಿಯ ಬಾಗಿಲು ಬೀಗ ತೆರೆದು ಸ್ನಾನಾದಿಗಳಿಂದ ಪರಿಶುದ್ಧರಾಗಿ ಒಳಗೆ ಜಾಘಂಟೆ ಬಾರಿಸಿ ಒಳಗಿನ ಬಾಗಿಲು ತೆಗೆದು ದೇವರ ನ್ನೆಬ್ಬಿಸಿದೆವೆಂದು ಭಾವಿಸುವರು. ದೇವರ ಎಡ ಬಲ ಸೇವೆಯವರು ಸ್ನಾನ ಮಾಡಿ ಪ್ರಾತಃಕಾಲದ ಪೂಜೆಗೆ ಸಾಮಗ್ರಿಗಳನ್ನೆಲ್ಲ ಅಣಿಮಾಡಿಡುತ್ತಾರೆ. ಉತ್ಸವಮೂರ್ತಿಯನ್ನು ಮಧ್ವಸರೋವರಕ್ಕೆ ತಂದು ಜಾಘಂಟೆ ಬಾರಿಸು ತ್ತಿರಲು ಅಭಿಷೇಕ ಮಾಡಿ ತರುವರು. ಗಂಧ ತೇಯುವವರು ಶುದ್ಧದಿಂದ ಅಗರು ಶ್ರೀಗಂಧಗಳನ್ನು ತೇಯುವರು. ಅರಿಕೊಟ್ಲು ಎಂಬ ಶುದ್ಧದ ಪಾಕ ಶಾಲೆಯಲ್ಲಿ ಶುದ್ಧದ ನೈವೇದ್ಯದವರು ಉರುಳಿಯನ್ನ – ಶುದ್ಧದ ಪರಮಾನ್ನ – ದೋಸೆಗಳನ್ನು ನೈವೇದ್ಯಕ್ಕಾಗಿ ತಯಾರಿಸುತ್ತಿರುವರು. (ಶ್ರೀಕೃಷ್ಣನ ಸಮರ್ಪಣೆಗಾಗಿ ಮೈಸೂರು ಸರಕಾರದಿಂದ ಪಂಜಮ್‌ಸಲಾಕಿ ಶ್ರೀಗಂಧ ಖಂಡಿ ೪, ಮಣ ೫, ಸೇರು ೨೮, ತೊಲೆ ೧೭ರಂತೆ ವರ್ಷಂಪ್ರತಿ ಕಳುಹಲ್ಪಡು ತ್ತದೆ.)

೧. ನಿರ್ಮಾಲ್ಯ ವಿಸರ್ಜನಪೂಜೆ:

ಇಷ್ಟರಲ್ಲಿ ಶ್ರೀಪಾದಂಗಳವರು ಸ್ನಾನಮಾಡಿ ನಿತ್ಯಜಪತರ್ಪಣಗಳನ್ನು ತೀರಿಸಿ ಸುಮಾರು ಐದು ಘಂಟೆಗೆ ಶ್ರೀಕೃಷ್ಣನ ನಿರ್ಮಾಲ್ಯಗಳನ್ನು ತೆಗೆದು, ಕಲಶಾಭಿಷೇಕಮಾಡಿ ದೇವರಿಗೆ ಬಾಲಾಲಂಕಾರಗಳನ್ನಿಟ್ಟು ತುಳಸೀ, ಗಂಧ, ಪುಷ್ಪಮಾಲೆಗಳಿಂದ ಅಲಂಕರಿಸಿ; ನೆನೆಕಡಲೆ, ಮೊಸರವಲಕ್ಕಿ, ಬೆಲ್ಲ, ಶುಂಠಿ,

ತೆಂಗಿನಕಾಯಿ, ಬಾಳೆಹಣ್ಣು, ತಾಂಬೂಲಗಳನ್ನರ್ಪಿಸಿ ಆರತಿಯನ್ನೆತ್ತಿ ತಂತ್ರ ಸಾರೋಕ್ತ ವಿಧಿಪ್ರಕಾರ ನಿರ್ಮಾಲ್ಯವಿಸರ್ಜನಪೂಜೆಯನ್ನು ನಿವೇದಿಸುವರು.

೨. ಉಷಃಕಾಲಪೂಜೆ:

ಆ ಮೇಲೆ ಉಷಃಕಾಲಪೂಜೆಯನ್ನು ಸಂಕಲ್ಪಿಸಿ, ಬೆಳ್ಳಿಕಲಶಪೂಜೆಮಾಡಿ ಆ ಕಲಶದಿಂದ ಅಭಿಷೇಕಮಾಡಿ, ತುಳಸೀ, ಗಂಧ, ಪುಷ್ಪಮಾಲಿಕೆಗಳನ್ನರ್ಪಿಸಿ ಉರುಳಿನೈವೇದ್ಯ, ತೆಂಗಿನಕಾಯಿ, ಬಾಳೆಹಣ್ಣು, ಹಾಲು, ಮೊಸರು, ತಾಂಬೂಲ ಗಳನ್ನರ್ಪಿಸಿ ಆರತಿಯೆತ್ತಿ ವಾದ್ಯಘೋಷವಾಗುತ್ತಿರಲು ಉಷಃಕಾಲಪೂಜೆ ಯನ್ನು ಸಮರ್ಪಿಸುತ್ತಾರೆ.

೩. ಗೋಪೂಜೆ:

ಆಮೇಲೆ ಅರಳು, ಅಕ್ಕಿ, ಬೆಲ್ಲಗಳನ್ನು ಸಮರ್ಪಿಸಿ ಗೋಪಾಲಕೃಷ್ಣನಿಗೆ ಆರತಿಯೆತ್ತುವಾಗ ಗರ್ಭಗುಡಿಯ ಬಡಗುಬಾಗಿಲಿನ ಮೆಟ್ಟಲಿನ ಮೇಲೆ ಎರಡು ಕಾಲುಗಳನ್ನಿಟ್ಟು ಸಾಕ್ಷಾತ್ ಕಾಮಧೇನುವಿನಂತಹ ಗೋಮಾತೆಯು ಬಂದು ನಿಲ್ಲುವಳು. ಸ್ವಾಮಿಗಳವರು ಆ ಗೋಮಾತೆಗೆ ದೇವರ ಆರತಿಯನ್ನು ಬೆಳಗುವರು. ದೇವರಿಗೆ ಸಮರ್ಪಿತವಾದ ಅರಳು, ಅಕ್ಕಿ, ಬೆಲ್ಲಗಳನ್ನು ಆಕೆಗೂ ಹಿಂಡಾಗಿ ನೆರೆದ ಬೇರೆ ಆಕಳುಗಳಿಗೂ ತಿನ್ನಲಿಕ್ಕುವರು.

೪. ಪಂಚಾಮೃತಪೂಜೆ:

ಆಮೇಲೆ ದೇವರ ಬಾಲರೂಪಾಲಂಕಾರಗಳನ್ನು ತೆಗೆದಿರಿಸಿ, ಹೊರಗೆ ನಗಾರಿ ವಾದ್ಯಘೋಷಗಳು ಮೊಳಗುತ್ತಿರಲು, ಒಳಗೆ ಮೂರು ವೇದಪಾರಾ ಯಣವು ಜರಗುತ್ತಿರಲು, ಮೊದಲು ಸುವರ್ಣನಾಣ್ಯಗಳ ಅಭಿಷೇಕಮಾಡಿ, ಹಣ್ಣುಕಾಯಿ ಸಮರ್ಪಣಪೂರ್ವಕ ಮಂಗಳಾರತಿ ಮಾಡಿಕೊಂಡು, ತುಪ್ಪ, ಹಾಲು, ಮೊಸರು, ಜೇನು, ಬೆಲ್ಲ (ಸಕ್ಕರೆ) ಎಳನೀರುಗಳಿಂದ ಪಂಚಾಮೃತಾಭಿ ಷೇಕ ಮಾಡಿ, ತುಳಸೀ, ಗಂಧ, ಪುಷ್ಪಮಾಲಿಕೆಗಳನ್ನರ್ಪಿಸಿ, ಧೂಪ-ದೀಪ, ಉರುಳಿ ನೈವೇದ್ಯ, ಹಣ್ಣುಕಾಯಿ, ತಾಂಬೂಲಾದಿಗಳನ್ನರ್ಪಿಸಿ, ಮಂಗಳಾರತಿ ಮಾಡುವರು. ನಗಾರಿಯು ಪಂಚಾಮೃತ ಪ್ರಾರಂಭಕ್ಕಿಂತ ಕಾಲುಘಂಟೆ ಮೊದಲೇ ಪ್ರಾರಂಭವಾಗುವುದು.

ಈ ಅಭಿಷೇಕದ ಹಾಲು ಮೊದಲಾದುವುಗಳ ಅಂಶಗಳನ್ನು ಶ್ರೀಮುಖ್ಯ ಪ್ರಾಣದೇವರಿಗೂ, ಶ್ರೀಸುಬ್ರಹ್ಮಣ್ಯನಿಗೂ ಅಭಿಷೇಕಕ್ಕಾಗಿ ಕಳುಹಿಸುವರು.

೫. ಉದ್ವರ್ತನಪೂಜೆ

ಆಮೇಲೆ ದೇವರಿಗೆ ಪರಿಮಳೋದಕವನ್ನು ಅಭಿಷೇಕಮಾಡಿ, ಮಡಿಯಿಂದ ಚೆನ್ನಾಗಿ ಅರೆದ ಪೆಸರಿನಿಂದ ದೇವರ ಅಂಗೋಪಾಂಗಗಳನ್ನು ಚೆನ್ನಾಗಿ ಉದ್ವರ್ತನಮಾಡಿ (ತೊಳೆದು) ಎಳನೀರು, ಹಾಲು, ಬೆಣ್ಣೆಗಳನ್ನು ನಿವೇದಿಸಿ; ಹಾಲು ಬೆಣ್ಣೆ ಪೂಜೆಯನ್ನು ಮಾಡಿ ಅನಂತರ ಬೆಳ್ಳಿಯ ಕಲಶಾಭಿಷೇಕ ಮಾಡಿ, ತುಳಸೀ, ಗಂಧ, ಪುಷ್ಪಮಾಲಿಕೆಗಳನ್ನರ್ಪಿಸಿ, ಧೂಪ – ಉರುಳಿಸಮರ್ಪಣೆ, ಹಣ್ಣುಕಾಯಿ, ಹಾಲು, ಮೊಸರು ಮೊದಲಾದುವುಗಳನ್ನು ಸಮರ್ಪಿಸಿ ಮಂಗಳಾರತಿಯನ್ನೆತ್ತಿ ಉದ್ವರ್ತನಪೂಜೆಯನ್ನರ್ಪಿಸುವರು.

೬, ಕಲಶಪೂಜೆ:

ಆಮೇಲೆ ದೇವರೆದುರು ಪಾರ್ಶ್ವದಲ್ಲಿ ಸುವರ್ಣಕಲಶದಲ್ಲಿ ದೇವರನ್ನಾವಾಹಿಸಿ ಚಿಕ್ಕ ಉರುಳಿ ನೈವೇದ್ಯವನ್ನರ್ಪಿಸಿ ಆರತಿ ಮಾಡಿ ಪ್ರಧಾನ ಕಲಶಪೂಜೆ ಮಾಡುತ್ತಾರೆ. ಆ ನೈವೇದ್ಯವನ್ನು ಗರುಡದೇವರ ಅರ್ಚಕರು ಗರುಡದೇವರಿಗೆ ಸಮರ್ಪಿಸಿ ಸರೋವರದ ಮೀನುಗಳಿಗೆ ಆ ನೈವೇದ್ಯವನ್ನು ತಿನ್ನಲು ಹಾಕಿಸುವರು.

೭. ತೀರ್ಥಪೂಜೆ:

ಆ ಸುವರ್ಣಕಲಶೋದಕವನ್ನು ದೇವರಿಗೆ ಮಹಾಭಿಷೇಕ ಮಾಡಿ ಪ್ರತಿಮೆಯನ್ನು ಚೆನ್ನಾಗಿ ಒರೆಸಿ, ತುಲಸೀ, ಗಂಧ, ಪುಷ್ಪಮಾಲಿಕೆಗಳನ್ನರ್ಪಿಸಿ ಧೂಪ-ದೀಪ, ಉರುಳಿನೈವೇದ್ಯ, ಪರಮಾನ್ನ, ದೋಸೆ, ತೆಂಗಿನಕಾಯಿ, ಬಾಳೆಹಣ್ಣು, ತಾಂಬೂಲಗಳನ್ನು ನಿವೇದಿಸಿ ಆರತಿಗಳನ್ನು ಮಾಡಿ ತೀರ್ಥಪೂಜೆಯನ್ನು ಮುಗಿಸುತ್ತಾರೆ. ಪ್ರಧಾನ ಕಲಶತೀರ್ಥವು ಈ ಪೂಜೆಯಲ್ಲಿಸಿಕ್ಕುವ ಪ್ರಯುಕ್ತ ಈ ಪೂಜೆಯು ತೀರ್ಥಪೂಜೆಯೆಂದು ಪ್ರಸಿದ್ಧಿಗೊಂಡಿತು.

ಇದರಲ್ಲಿ ಸಮರ್ಪಿತ ಅನ್ನ, ಪಾಯಸ, ದೋಸೆಗಳನ್ನು ಶ್ರೀಮುಖ್ಯಪ್ರಾಣದೇವರಿಗೆ ಸಮರ್ಪಿಸಿ, ಆ ಪ್ರಸಾದವನ್ನು ಭೋಜನಶಾಲೆ ಮುಂತಾದಲ್ಲಿ ನಡೆಯುವ ಬ್ರಾಹ್ಮಣಸಂತರ್ಪಣೆಗೆ ಬಡಿಸುವಂತೆ ಮಾಡುತ್ತಾರೆ.

೮. ಅಲಂಕಾರಪೂಜೆ

ಆಮೇಲೆ ಹೊರಗೆ ನಗಾರಿ ಬಾರಿಸುತ್ತಿರಲು ದೇವರನ್ನು ಅನೇಕ ರತ್ನಾಭರಣ, ಪಟ್ಟೆವಸ್ತ್ರ, ಕಿರೀಟಾದಿಗಳಿಂದ ಅಂದವಾಗಿ ಅಲಂಕರಿಸಿ; ತುಳಸೀ,

ಗಂಧ, ಪುಷ್ಪಮಾಲಿಕೆಗಳನ್ನರ್ಪಿಸಿ; ಧೂಪ-ದೀಪ, ಉರುಳಿನೈವೇದ್ಯ, ಶಾಕ ಭಕ್ಷ್ಯಭೋಜ್ಯ, ಅಪ್ಪ, ಲಡ್ಡುಗೆ, ಸಾಸಿವೆ, ಕೊಸುಂಬ್ರಿ, ಪಚ್ಚಡಿ, ಹಾಲು, ಮೊಸರು, ತೆಂಗಿನಕಾಯಿ, ಬಾಳೆಹಣ್ಣು, ತಾಂಬೂಲಾದಿಗಳನ್ನು ಸಮರ್ಪಿಸಿ ಗರ್ಭಗುಡಿಯೊಳಗೆ ಭಾಗವತರು ಆರೋಗಣೆ ಹಾಡುತ್ತಿರಲು ಆರತಿಗಳನ್ನು ಮಾಡಿ, ಅಲಂಕಾರಪೂಜೆಯನ್ನು ಮಾಡುತ್ತಾರೆ.

ಈ ಅಲಂಕಾರಗಳಲ್ಲಿ ಶುಕ್ರವಾರ ಮತ್ತು ನವರಾತ್ರಿಗಳಲ್ಲಿ ಮಾತ್ರ ದೇವರಿಗೆ ಮೋಹಿನೀ ಮೊದಲಾದ ದಿವ್ಯ ಸ್ತ್ರೀರೂಪಾಲಂಕಾರಗಳನ್ನೂ, ಉಳಿದ ದಿನಗಳಲ್ಲಿ ಬೇರೆ ಬೇರೆ ಅಲಂಕಾರಗಳನ್ನೂ, ಆಯಾಯ ವಿಶೇಷ ದಿನಗಳಲ್ಲಿ ಆಯಾಯ ಅವತಾರ ಜಯಂತಿಗಳನ್ನನುಸರಿಸಿ ಮತ್ಸ್ಯಾದಿ ರೂಪ ಗಳಿಂದ ಭಗವಂತನು ತೋರಿದ ಮಹಿಮೆಗಳು ಭಕ್ತರ ಸ್ಮರಣೆಗೆ ಬರುವಂತೆ ವಿವಿಧ ಅಲಂಕಾರಗಳನ್ನೂ ಮಾಡುತ್ತಾರೆ. ಈ ಪೂಜೆಯಲ್ಲಿ ಸಮರ್ಪಿತಗಳಾದ ಪ್ರಸಾದಗಳನ್ನು ಮೃಷ್ಟಾನ್ನವೆಂಬ ಬ್ರಾಹ್ಮಣಸಂತರ್ಪಣೆಗೆ ಉಪಯೋಗಿಸು ತ್ತಾರೆ.

೯. ಅವಸರಪೂಜೆ:

ಆಮೇಲೆ ದೇವರಿಗೆ ಧೂಪ-ದೀಪ, ಉರುಳಿನೈವೇದ್ಯ, ತೆಂಗಿನಕಾಯಿ, ಹಣ್ಣು, ತಾಂಬೂಲಗಳನ್ನರ್ಪಿಸಿ, ಆರತಿಗಳನ್ನೆತ್ತಿ ಅವಸರಸನಕಾದಿಪೂಜೆ ಯೆಂಬ ಸೇವೆಯನ್ನು ಮಾಡುತ್ತಾರೆ.

೧೦. ಮಹಾಪೂಜೆ:

ಅನಂತರ ಬ್ರಹ್ಮಸೂತ್ರ, ವಿಷ್ಣುಸಹಸ್ರನಾಮ, ಕೃಷ್ಣಾಷ್ಟೋತ್ತರ ಮುಂತಾದ ನಾಮಾವಳಿಗಳಿಂದ ತುಳಸೀ-ಪುಷ್ಪಾಂಜಲಿಗಳನ್ನೂ, ಗಂಧ-ಪುಷ್ಪ ಮಾಲಿಕೆಗಳನ್ನೂ ನಿವೇದಿಸಿ, ಮೃಷ್ಟಾನ್ನದಲ್ಲಿ ಬ್ರಾಹ್ಮಣ ಸುವಾಸಿನೀ ಸಂತರ್ಪ ಣೆಯು ನಡೆಯುತ್ತಿರಲು, ಹೊರಗೆ ಮುಖಮಂಟಪದಲ್ಲಿ ಭಾಗವತರು ಆರೋಗಣೆಹಾಡು ಮಂಗಳಾರತಿಹಾಡುಗಳನ್ನು ಹಾಡುತ್ತಿರಲು, ಶ್ರೀಮಧ್ವಾ ಚಾರ್ಯರ ಮುಂದುಗಡೆ ವಿಷಪರಿಹಾರಾರ್ಥವಾಗಿ ದ್ವಾದಶಸ್ತೋತ್ರನಾಮ ಸಂಕೀರ್ತನೆ ತಾಳ ಧ್ವನಿಯಾಗುತ್ತಿರಲು, ದೇವರ ಆಗ್ನೇಯ ಭಾಗದಲ್ಲಿರುವ ಯಾಗಶಾಲೆಯಲ್ಲಿ ಅನುಯಾಗವೆಂಬ ಹೋಮವು ನಡೆಯುತ್ತಿರಲು, ಹೊರಗೆ ನಗಾರಿ ವಿವಿಧ ವಾದ್ಯಗಳ ಘೋಷವಾಗುತ್ತಿರಲು, ಧೂಪ-ದೀಪಪೂರ್ವಕ ವಾಗಿ, ಒಂಬತ್ತಕ್ಕೆ ಕಡಿಮೆಯಿಲ್ಲದ ಚಕ್ಕುಲಿ, ಮನೋಹರ, ಅಪ್ಪ, ಒಡೆ,

ಅತಿರಸ, ಗುಳ್ಳೋರಿಗೆ, ಹೋಳಿಗೆ, ದೋಸೆ, ಕಡುಬು ಮುಂತಾದ ತರತರದ ಭಕ್ಷ್ಯಭೋಜ್ಯ, ಲೇಹ್ಯ-ಪೇಯಗಳನ್ನೂ ಅನೇಕ ಶಾಕ-ಪರಮಾನ್ನಗಳನ್ನೂ ಶುದ್ಧದ ಕಠಾರವೆಂಬ ೧೬ ಸೇರಿನ ನೈವೇದ್ಯ ಉರುಳಿನೈವೇದ್ಯಗಳನ್ನೂ ಪ್ರಾಣ ದೇವರ ರಾತ್ರಿ ರಂಗಪೂಜೆಗೆ ಬೇಕಾದ ಪಂಚಕಜ್ಜಾಯವನ್ನೂ, ಲಡ್ಡುಗೆ, ೧೬ ತೆಂಗಿನಕಾಯಿ, ಬಾಳೆಹಣ್ಣು ಮುಂತಾದುವುಗಳನ್ನೂ ಶ್ರೀಮನ್ಮಧ್ವಾಚಾರ್ಯರೇ ಸಾಕ್ಷಾತ್ ಸಮರ್ಪಿಸುವರೆಂದು ಭಾವಿಸಿ, ಸ್ವಾಮಿಗಳವರು ಅಲ್ಲಿಯೇ ಬದಿಯಲ್ಲಿರುವ ಎಡನಾಳಿ ಎಂಬಲ್ಲಿ ಕುಳಿತು ಮೂಲಮಂತ್ರಗಳನ್ನು ಜಪಿಸುತ್ತ ಸಮರ್ಪಿಸಿದ ಮೇಲೆ ತಾಂಬೂಲವನ್ನರ್ಪಿಸಿ ಅನೇಕ ಮಂಗಳಾರತಿಗಳನ್ನು ಮಾಡುತ್ತಾರೆ. ಆ ಸಮಯ ಎರಡು ಸಿಡಿಮದ್ದಿನ ಗುಂಡುಗಳನ್ನು ಹಾರಿಸುತ್ತಾರೆ. ಅದರಿಂದ ಆಸುಪಾಸಿನ ಭಕ್ತರು ದೇವರಿಗೆ ಮಹಾಪೂಜೆಯಾಯಿತೆಂದು ನೆನೆದು ತಂತಮ್ಮ ಮನೆಗಳಲ್ಲಿ ಶ್ರೀಕೃಷ್ಣ ಪ್ರಸಾದವೆಂದು ಆಮೇಲೆ ಭೋಜನಮಾಡುವುದು ಪೂರ್ವಪದ್ಧತಿ.

ಈ ಪಂಚಾಮೃತ-ಅಲಂಕಾರ-ಮಹಾಪೂಜೆಗಳ ಆರಂಭದಲ್ಲಿ ಬಾರಿಸಲ್ಪಡುವ ನಗಾರಿಯ ಪೆಟ್ಟಿನ ಭೇದದಿಂದ ಇದು ಪಂಚಾಮೃತ, ಇದು ಅಲಂಕಾರ, ಇದು ಮಹಾಪೂಜೆ ಎಂದು ಭಕ್ತರು ತಿಳಿದುಕೊಂಡು ಆಯಾಯ ಪೂಜಾ ಸಮಯಕ್ಕೆ ಒದಗಿಬರಲು ಅನುಕೂಲವಿರುತ್ತದೆ.

ಈ ಹತ್ತು ಪೂಜೆಗಳಲ್ಲಿ ಕಲಶಪೂಜೆ ಎಂಬುದು ಪ್ರತ್ಯೇಕವಾಗಿದ್ದು ಉಳಿದ ಒಂಭತ್ತು ಪೂಜೆಗಳು ಮುಖ್ಯವಾಗಿ ಶ್ರೀಕೃಷ್ಣನಿಗೆ ಹಗಲಲ್ಲಿ ನಡೆಯುತಕ್ಕವು. ಈ ಪೂಜೆಗಳಲ್ಲಿ ಪರ್ಯಾಯಪೀಠಾಧಿರೂಢ ಸ್ವಾಮಿಗಳು ಪಂಚಾಮೃತ, ಅವಸರಪೂಜೆ, ಮಹಾಪೂಜೆಗಳನ್ನು ತಾವೇ ಮಾಡತಕ್ಕದ್ದು. ಕೊನೆಗೆ ಅವಸರ ಪೂಜೆ, ಮಹಾಪೂಜೆಗಳನ್ನಾದರೂ ಅವರು ಬಿಡಕೂಡದು. ಉಳಿದ ಪೂಜೆಗಳನ್ನು ಚಿಕ್ಕಪಟ್ಟಕ್ಕೆಂದು ಸಹಾಯಕರಾಗಿ ಕುಳಿತ ಇತರ ಅಷ್ಟಮಠಾಧೀಶರಲ್ಲಿ ಯಾವ ಸ್ವಾಮಿಗಳಾದರೂ ಮಾಡಬಹುದಾಗಿದೆ.

ಆಮೇಲೆ ಪರ್ಯಾಯ ಸ್ವಾಮಿಗಳು ಉತ್ತರಪೂಜೆ ಮಾಡಿ ಒಳಗೆ ಇಟ್ಟುಕೊಂಡಿರುವ ಶ್ರೀಮುಖ್ಯಪ್ರಾಣದೇವರಿಗೆ ಮಂಗಳಾರತಿಯನ್ನರ್ಪಿಸಿ, ಮಧ್ಯಾಹ್ನ ತನಕದ ಪೂಜೆಗಳನ್ನೆಲ್ಲ ಶ್ರೀಕೃಷ್ಣನಲ್ಲಿ ಸಮರ್ಪಿಸಿ, ಶ್ರೀಮುಖ್ಯಪ್ರಾಣದೇವರ ಬಳಿಗೆ ಬರುತ್ತಾರೆ. ಆಗ ಹಿಂದುಮುಂದೆ ಮೂರು ವೇದ ಪಾರಾಯಣಗಳೂ ಭಾಗವತರು ಹಾಡುವ ಕೀರ್ತನೆಗಳೂ ನಡೆದಿರುತ್ತವೆ.

ಮುಖ್ಯಪ್ರಾಣಪೂಜೆ:

ಪರ್ಯಾಯ ಸ್ವಾಮಿಗಳು ಮಹಾಪೂಜೆಯಲ್ಲಿ ಶ್ರೀಕೃಷ್ಣನಿಗೆ ಸಮರ್ಪಿತ ಗಳಾದ ಭಕ್ಷ್ಯ, ನೈವೇದ್ಯ, ಪರಮಾನ್ನಾದಿಗಳನ್ನು ಶ್ರೀಮುಖ್ಯಪ್ರಾಣನಿಗೆ ಸಮರ್ಪಿಸಿ ಆರತಿಯೆತ್ತಿ ಪೂಜಿಸುತ್ತಾರೆ.

ಇದಲ್ಲದೆ ಚಿಕ್ಕಪಟ್ಟದ ಸ್ವಾಮಿಗಳೂ ತಮ್ಮ ಕೃಷ್ಣಪೂಜಾನಂತರ ಫಲ ಸಮರ್ಪಣಪೂರ್ವಕ ಆರತಿಯೆತ್ತಿ ಪ್ರಾಣದೇವರ ಮತ್ತು ಮಧ್ವಾಚಾರ್ಯರ ಪೂಜೆ ನಡೆಯಿಸುತ್ತಾರೆ.

ಶ್ರೀಮಧ್ವಾಚಾರ್ಯರ ಪೂಜೆ:

ಆಮೇಲೆ ಶ್ರೀಮಧ್ವಾಚಾರ್ಯರ ಸನ್ನಿಧಿಗೆ ಬಂದು ಶ್ರೀಕೃಷ್ಣಸಮರ್ಪಿತ ನೈವೇದ್ಯದ ಅಂಶವನ್ನು ಗುರುವರರಿಗೆ ಹಸ್ತೋದಕವಿತ್ತು ಮಂಗಳಾರತಿ ಮಾಡುತ್ತಾರೆ.

ಸಿಂಹಾಸನ ಪೂಜೆ:

ಆಮೇಲೆ ಸಿಂಹಾಸನಕ್ಕೆ ಬಂದು, ಅಲ್ಲಿ ತಮ್ಮ ಚಿಕ್ಕಪಟ್ಟದ ದೇವರಿಗೆ ಮತ್ತೂ ಬೇರೆ ಆರಾಧ್ಯದೇವರಿಗೆ ಫಲ ಸಮರ್ಪಣಪೂರ್ವಕವಾಗಿ ಅಸಮ ರ್ಪಿತ ವಾದ ನೈವೇದ್ಯದ ಒಂದಂಶವನ್ನು ಸಮರ್ಪಿಸಿ ಆರತಿಮಾಡಿ ಪೂಜಿಸುತ್ತಾರೆ.

ಪ್ರದಕ್ಷಿಣ ನಮಸ್ಕಾರ:

ಅಲ್ಲಿಂದ ಹೊರಟು ಹೊರಗೆ ವಾದ್ಯಘೋಷ, ಒಳಗೆ ವೇದಘೋಷ, ಭಾಗವತರ ಕೀರ್ತನೆಗಳಿಂದ ದೇವರಿಗೆ ನಾಲ್ಕು ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ ಸರೋವರಕ್ಕೆ ಬಂದು ದಂಡೋದಕ ತರ್ಪಣವನ್ನು ಕೊಟ್ಟು, ಭಾಗೀರಥೀ ದೇವಿಗೆ ಕೃಷ್ಣಸಮರ್ಪಿತಾನ್ನಭಾಗವನ್ನು ನಿವೇದಿಸಿ ಆರತಿಮಾಡಿ ಆ ನೈವೇದ್ಯ ವನ್ನು ಕೆರೆಯ ಮೀನುಗಳಿಗೆ ತಿನ್ನಲಿಕ್ಕಿಸಿ ವೃಂದಾವನಕ್ಕೆ ತೆರಳುವರು.

ವೃಂದಾವನ ಪೂಜೆ:

ವೃಂದಾವನಗಳ ಗುರುಗಳಿಗೆ ತೀರ್ಥ-ಹಸ್ತೋದಕ, ಫಲಾದಿಗಳನ್ನರ್ಪಿಸಿ, ಆರತಿ ಎತ್ತಿ ಅಶ್ವತ್ಥಕ್ಕೆ ಪ್ರದಕ್ಷಿಣೆ ನಮಸ್ಕಾರಗಳನ್ನು ಮಾಡಿ, ಸಿಂಹಾಸನದ ಬಳಿ

ಬರುತ್ತ ದೊಡ್ಡ ಪಾತ್ರದಲ್ಲಿ ಸಿದ್ಧಗೊಳಿಸಿದ ಗೋಗ್ರಾಸವನ್ನು ಬಿಟ್ಟು ಹಿಂದು ಹಿಂಡಾಗಿ ಅಲ್ಲಿ ನೆರೆದ ಗೋವುಗಳಿಗೆ ಇಡಿಸುತ್ತಾರೆ.

ತೀರ್ಥದಾನ:

ಆಮೇಲೆ ಪರ್ಯಾಯ ಶ್ರೀಗಳವರು ಸಿಂಹಾಸನಕ್ಕೆ ಬಂದು ಶ್ರೀಮಧ್ವಾಚಾರ್ಯರ ಪಟ್ಟಸಿಂಹಾಸನದಲ್ಲಿ ಕುಳಿತು, ಭಕ್ತರು ಶ್ರೀಮಧ್ವವಿಜಯವನ್ನು ಪಠಿಸುತ್ತಿರಲು, ಆಶ್ರಮಜ್ಯೇಷ್ಠತ್ವಕ್ರಮವನ್ನನುಸರಿಸಿ ಇತರ ಶ್ರೀಗಳವರಿಗೆ ಶ್ರೀಕೃಷ್ಣ – ಶ್ರೀಮುಖ್ಯಪ್ರಾಣತೀರ್ಥ-ನಿರ್ಮಾಲ್ಯಗಳನ್ನೂ ಗಂಧಾದಿಗಳನ್ನೂ ಇತ್ತು ಮನ್ನಿಸಿ, ತಾವೂ ತೀರ್ಥ-ನಿರ್ಮಾಲ್ಯಗಳನ್ನು ಸೇವಿಸಿ, ತಮಗಿಂತ ಚಿಕ್ಕವರಾದ ಸ್ವಾಮಿಗಳಿಗೆ ತೀರ್ಥನಿರ್ಮಾಲ್ಯ ಗಂಧಾದಿಗಳನ್ನಿತ್ತು ಆಮಂತ್ರಿತರಾದ ಬ್ರಾಹ್ಮಣರಿಗೆ ತೀರ್ಥ-ನಿರ್ಮಾಲ್ಯ-ಗಂಧ-ದಕ್ಷಿಣಾದಿಗಳನ್ನಿತ್ತು, 'ಚೌಕಿ'ಯೆಂಬ ಮಹಾಪಙ್ಕ್ತಿಯಲ್ಲಿ ಅವರವರಿಗೆ ಏರ್ಪಡಿಸಿದ ಸ್ಥಾನಗಳಲ್ಲಿ ಕುಳಿತು ಮಹಾಪೂಜೆಯಲ್ಲಿ ಸಮರ್ಪಿತಗಳಾದ ಸಕಲ ಭಕ್ಷ್ಯಭೋಜ್ಯಗಳನ್ನು ಬ್ರಾಹ್ಮಣ ಸುವಾಸಿನಿಯರಿಗೂ, ಅತಿಥ್ಯಭ್ಯಾಗತರಿಗೂ ಬಡಿಸುತ್ತಿರಲು ತಾವು ಹರಿಪ್ರಸಾದ ಭಿಕ್ಷೆಯನ್ನು ವಿಧಿಪ್ರಕಾರ ಸ್ವೀಕರಿಸುವರು. ಈ ವೇಳೆಯಲ್ಲಿ ಪುರಾಣಿಕರು ರಾಮಾಯಣ ಪುರಾಣವನ್ನು ಹೇಳುವರು. ಭಿಕ್ಷಾನಂತರ ಹಸ್ತಪಾದ ಪ್ರಕ್ಷಾಳನ, ಆಚಮನ ಮಾಡಿ ಸಿಂಹಾಸನಕ್ಕೆ ಬಂದು ತೀರ್ಥ-ನಿರ್ಮಾಲ್ಯಗಳನ್ನು ಸ್ವೀಕರಿಸಿ, ಪ್ರದಕ್ಷಿಣೆ ಬಂದು ಮಧ್ಯಾಹ್ನದ ತನಕದ ಕಾರ್ಯವನ್ನು ಪೂರ್ತಿಗೊಳಿಸುವರು. ಭೋಜನಶಾಲೆಯಲ್ಲಿ ಎಲ್ಲಾ ಜನರಿಗೂ, ಶಾಲಾವಿದ್ಯಾರ್ಥಿಗಳಿಗೂ ಭೋಜನ ಮಾಡಿಸಿ, ಅನಂತರ ಬೈರಾಗಿ ಮೊದಲಾದವರಿಗೆಲ್ಲ ಅನ್ನ ಕೊಡಿಸುವರು. ಈ ಸಮಯ ಮಧ್ಯಾಹ್ನ ೧೨ ಘಂಟೆಗೆ ಸರಿಯಾಗಿ ನೌಬತ್ ನಗಾರಿಯು ಬಾರಿಸಲ್ಪಡುವುದು. ಸಾಯಂಕಾಲ ೬ ಘಂಟೆಗೆ ಪುನಃ ನೌಬತ್ ನಗಾರಿಯಾಗುವುದು.

ಚಾಮರಸೇವೆ:

ಸಾಯಂಕಾಲ ೭ ಘಂಟೆ ಸಮಯದಲ್ಲಿ ಪರ್ಯಾಯ ಶ್ರೀಗಳವರು ಮಿಂದು ತರ್ಪಣ ಜಪಮಾಡಿ ವಾದ್ಯಘೋಷಗಳು ಮೊಳಗುತ್ತಿರಲು, ಶ್ರೀಕೃಷ್ಣನ ಇದಿರು ಮಂಟಪದಲ್ಲಿ ಎರಡು ದೊಡ್ಡ ಕುಕ್ಕೆಗಳಲ್ಲಿ ಆರು ಮುಡಿಗೆ ಕಡಿಮೆಯಾಗದ ಅರಳು ರಾಶಿಗಳಮೇಲೆ ಬೆಲ್ಲ, ತೆಂಗಿನಕಾಯಿ, ಲಡ್ಡಿಗೆ, ತಾಂಬೂಲಗಳನ್ನಿಡಿಸುವರು. ಎರಡು ಪಾರ್ಶ್ವಗಳಲ್ಲಿ ದೀವಟಿಗೆ ಹಿಡಿದಿರಲು, ದಂಡಧಾರಿಗಳು ಚಿನ್ನದ ದಂಡವನ್ನು ಹಿಡಿದುಕೊಂಡು ಪಚ್ಚೆಪಟ್ಟೆಯನ್ನು



ಚಾಮರ ಸೇವೆ

ಹಾರಿಸುವರು. ಇಬ್ಬರು ಭಾಗವತರು ತಾಳ ಬಾರಿಸುತ್ತ ಕೀರ್ತನ ಹೇಳುವರು. ಮಂಟಪದಲ್ಲಿ ಪುಸ್ತಕ, ಪ್ರತಿಮಾ, ಸಾಲಿಗ್ರಾಮಗಳನ್ನು ಪೀಠದಲ್ಲಿರಿಸಿ ತಾವು ಎರಡು ಚಿನ್ನದ ಚಾಮರಗಳಿಂದ ಬೀಸುತ್ತಾ ಸ್ತೋತ್ರಗಳನ್ನು ಪಠಿಸಿ ಕೊನೆಗೆ ಆ ಚಾಮರಗಳನ್ನು ಪಾರ್ಶ್ವದಲ್ಲಿದ್ದವರಿಗೆ ಕೊಟ್ಟು ಚಾಮರ ಬೀಸುವಂತೆ ನೇಮಿಸಿ, ಆ ಅರಳು, ಲಡ್ಡಿಗೆ, ಬೆಲ್ಲ, ಕಾಯಿ, ತಾಂಬೂಲಗಳನ್ನು ಸಮರ್ಪಿಸಿ; ಮಂಗಳಾರತಿಮಾಡಿ, ಆ ಆರತಿಯನ್ನು ಮುಖ್ಯಪ್ರಾಣನಿಗೂ ಮಾಡಿ ಚಾಮರಸೇವೆಯನ್ನು ಸಮರ್ಪಿಸುತ್ತಾರೆ. ಚಾಮರಸೇವೆ ಮುಗಿದ ನಂತರ ರಾತ್ರಿ ಪೂಜೆಯ ಸೂಚನೆಗಾಗಿ ಹೊರಗೆ ನಗಾರಿಯು ಬಾರಿಸಲ್ಪಡುತ್ತದೆ. ಅನಂತರ ಸಿಂಹಾಸನದಲ್ಲಿ ಚಿಕ್ಕಪಟ್ಟದ ದೇವರನ್ನೂ ಪೂಜಿಸುವರು.

ರಾತ್ರಿಪೂಜೆ;

ಅನಂತರ ಚಿಕ್ಕಪಟ್ಟದ ಸ್ವಾಮಿಗಳು ಮಿಂದು ತರ್ಪಣಜಪಾನಂತರ ತುಲಸೀ-ಪುಷ್ಪಗಳನ್ನರ್ಪಿಸಿ, ಧೂಪ-ದೀಪ, ಉರುಳಿನೈವೇದ್ಯ, ಶುದ್ಧದ ಶಾಕ, ಬೆಲ್ಲ, ತುಪ್ಪ, ಎಳನೀರು, ಹಾಲುಗಳನ್ನು ಸಮರ್ಪಿಸಿ. ಹೊರಗೆ ವಾದ್ಯ ಘೋಷವಾಗುತ್ತಿರಲು ಆರತಿಗಳನ್ನು ಮಾಡಿ ರಾತ್ರಿಪೂಜೆ ನಡೆಯಿಸುತ್ತಾರೆ.

ರಂಗಪೂಜೆ:



ತೊಟ್ಟಿಲಪೂಜೆ

ಆಮೇಲೆ ಶ್ರೀ ಮುಖ್ಯಪ್ರಾಣನ ಇದಿರು ಉದ್ದ ನಾಲು ಅಂಕಣ ಪಂಚಕಜ್ಜಾಯವನ್ನು ಬಾಳೆಎಲೆಗಳ ಮೇಲೆ ಇಟ್ಟು ಎರಡು ಪಾರ್ಶ್ವಗಳಲ್ಲಿಯೂ ದೀಪಗಳನು ಸಾಲುಸಾಲಾಗಿ ಉರಿಸುವರು. ಪಂಚಕಜ್ಜಾಯ ರಂಗಪೂಜೆ ಮಾಡಿ, ಶ್ರೀಮಧ್ವಾಚಾರ್ಯರನ್ನೂ ಪೂಜಿಸಿ, ಪಾಲಕಿಯಲ್ಲಿ ಉತ್ಸವಮೂರ್ತಿಯನ್ನಿಟ್ಟು, ಉತ್ಸವವಿದ್ದರೆ ಹೊರಗೆ ತರುತ್ತಾರೆ. ಇಲ್ಲದಿದ್ದರೆ ದೇವರಿಗೆ ಸುತ್ತಾಗಿ ಬಂದು ಇದಿರು ಮುಖಮಂಟಪದಲ್ಲಿ ತೂಗಿಸಲ್ಪಟ್ಟ ತೊಟ್ಟಿಲಿನಲ್ಲಿ ದೇವರನ್ನಿಟ್ಟು ಧೂಪ-ದೀಪಗಳನ್ನು ಮಾಡಿ, ಅರಳು, ಬೆಲ್ಲ, ತೆಂಗಿನಕಾಯಿ ತಾಂಬೂಲಗಳನ್ನರ್ಪಿಸಿ, ಮಂಗಳಾರತಿ ಮಾಡುವರು. ಆಗ ಭಕ್ತರು ಸಂಕೀರ್ತನೆ ಮಾಡುವರು. ಇಬ್ಬರು ಚಾಮರ ಹಾಕುವರು. ಇಬ್ಬರು ಕಟ್ಟಿಗೆಕೋಲು ಹಿಡಿದುಕೊಂಡು ಪಚ್ಚೆ ಬಟ್ಟೆ ಹಾರಿಸುವರು. ಆಮೇಲೆ ಅಷ್ಟಾವಧಾನಸೇವೆ, ಅಷ್ಟಕ ಸಂಗೀತಗಳಾಗುವುವು. ಶ್ರೀಪಾದಂಗಳವರಿಗೆ ವಿಶೇಷ ದಿನಗಳಲ್ಲಿ ಮಾಲಿಕೆಮಂಗಳಾರತಿ ನಡೆಯಿಸಿ ಮಂತ್ರಾಕ್ಷತೆಮಾಡಿ ಭಕ್ತರಿಗೆ ಇತ್ತು ಅನುಗ್ರಹಿಸಿ ಮರಳಿ ಪಾಲಕಿಯಲ್ಲಿ ಕೊಳಲು ಸೇವೆಯೊಡನೆ ದೇವರನ್ನು ಸುತ್ತಾಗಿ ತಂದು ಲಡ್ಡಿಗೆ – ಫಲಸಮರ್ಪಣೆ ಪೂಜೆಯನ್ನು ಉತ್ತರ ಪೂಜಾರೂಪವಾಗಿ ನಡೆಯಿಸುತ್ತಾರೆ.

ಏಕಾಂತ ಸೇವೆ:

ಗರ್ಭಗುಡಿಯೊಳಗೆ ತೊಟ್ಟಿಲಿನಲ್ಲಿ ಪಟ್ಟೆಯ ಹಾಸಿಗೆಯಲ್ಲಿ ಉತ್ಸವ ಮೂರ್ತಿಯನ್ನಿಟ್ಟು ತೂಗಿ ಅರಳುಂಡೆ, ಹಾಲು, ಹಣ್ಣು, ತಾಂಬೂಲ, ಗಂಧದ ಪರಿಮಳಎಣ್ಣೆ, ಬುಕ್ಕಿಟ್ಟು, ಏಲಕ್ಕಿ, ಲವಂಗ, ಪತ್ರೆ, ಪುಷ್ಪ ಮೊದಲಾದುವು ಗಳನ್ನು ಸಮರ್ಪಿಸಿ, ಆರತಿಯನ್ನುಮಾಡಿ, ರುಕ್ಮಿಣೀ ಸತ್ಯಭಾಮೆಯರೊಡನೆ ಶ್ರೀ ಕೃಷ್ಣನು ಸುಖವಾಗಿ ಪವಡಿಸಿದನೆಂದು ಭಾವಿಸುವರು. ಆಗ ಭಾಗವತರು ಜೋಗುಳವನ್ನು ಹಾಡುವರು. ಪರ್ಯಾಯ ಶ್ರೀಗಳವರು ಇತರ ಶ್ರೀಗಳವರಿಗೆ ಬುಕ್ಕಿಟ್ಟು ಗಂಧದ ಎಣ್ಣೆಯನ್ನು ಹಚ್ಚಿ, ಹೊರಗೆ ಬಂದು ಪುಷ್ಪಪ್ರಸಾದವನ್ನಿತ್ತು ಬೀಳ್ಕೊಟ್ಟು ಭಕ್ತರಿಗೆ ಆ ಪುಷ್ಪ ಪ್ರಸಾದವನ್ನೂ ಕಷಾಯತೀರ್ಥವನ್ನೂ ಹಂಚಿಸಿ ರಾತ್ರಿಪೂಜಾ ಸೇವಾ ಕೃತ್ಯವನ್ನು ಮುಗಿಸುತ್ತಾರೆ. ಶಂಖಧ್ವನಿಯೊಡನೆ ಅಂದಿನ ಪೂಜಾ ಕಾರ್ಯಕ್ರಮವು ಮುಕ್ತಾಯವಾಗುವುದು.




ಏಕಾಂತಸೇವಾಪೂಜೆ

೧೧. ವಾರ್ಷಿಕ ವಿಶೇಷೋತ್ಸವಗಳು:

ಸಪ್ತೋತ್ಸವ: ಇತರ ಕಡೆಗಳಲ್ಲಿ ವಾರ್ಷಿಕ ಜಾತ್ರೆಗಳಿರುವಂತೆ ಶ್ರೀಕೃಷ್ಣಮಠ


ದಲ್ಲಿ ಸಪ್ತೋತ್ಸವಕಾಲವು ವರ್ಷಾವಧಿ ಜಾತ್ರೆಯೆನಿಸುವುದು. ಮಕರಸಂಕ್ರಾಂತಿಯ ಐದು ದಿನಗಳ ಪೂರ್ವದಲ್ಲಿ ಈ ಉತ್ಸವವು ಪ್ರಾರಂಭವಾಗಿ ಮಕರಸಂಕ್ರಾಂತಿಯ ವರೆಗೆ ಆರು ದಿನಗಳಲ್ಲಿ ರಾತ್ರೆಯೂ ಸಂಕ್ರಾಂತಿಯ ಮರುದಿನ ಹಗಲೂ ರಥೋತ್ಸವವು ನಡೆಯುವುದು. (ಸಾಮಾನ್ಯವಾಗಿ ಈ ಉತ್ಸವವು ಜನವರಿ



ಚಿನ್ನದ ಪಾಲಕಿ

ಎರಡನೆ ವಾರದಲ್ಲಿ ಬರುವುದು) ಉತ್ಸವ ಪ್ರಾರಂಭದ ದಿನದಲ್ಲಿಯೂ ಸಂಕ್ರಾಂತಿಯ ದಿನದಲ್ಲಿಯೂ ಪ್ರಾರ್ಥನೆ, ನವಗ್ರಹದಾನಾದಿಗಳ ತರುವಾಯ ಸುಲಗ್ನದಲ್ಲಿ ದೇವರನ್ನು ಉತ್ಸವಕ್ಕೆ ಹೊರಡಿಸುವರು. ಶ್ರೀಕೃಷ್ಣನ ಮತ್ತು ಮುಖ್ಯಪ್ರಾಣನ ಉತ್ಸವಮೂರ್ತಿಗಳನ್ನು ಚಿನ್ನದ ಪಾಲಕಿಯಲ್ಲಿಟ್ಟು ಮಧ್ವ ಸರೋವರಕ್ಕೆ ಬಂದು ಅಲ್ಲಿ ಸಿಂಗರಿಸಲ್ಪಟ್ಟಿರುವ ನೌಕಾ ರಥದಲ್ಲಿ ತೆಪ್ಪೋತ್ಸವವು ನಡೆಯುವುದು. ಅಲ್ಲಿಂದ ಪುನಃ ಮೂರ್ತಿಗಳನ್ನು ಪಾಲಕಿಯಲ್ಲಿರಿಸಿ ರಥದ ಸನಿಹಕ್ಕೆ ಬಂದು ಶ್ರೀಕೃಷ್ಣದೇವರನ್ನು ಶ್ರೀಗಳವರೂ ಪ್ರಾಣದೇವರನ್ನು ಅರ್ಚಕರೂ ರಥಕ್ಕೊಯ್ಯುತ್ತಾರೆ. ಮಂಗಳಾರತಿಯೇ ಮೊದಲಾದ ವಿಧಿಗಳು ಆದಮೇಲೆ ರಥವು ಅಲ್ಲಿಂದ ಹೊರಟು ದಕ್ಷಿಣ ಬೀದಿಗೆ ಬರುವುದು. ಅಲ್ಲಿ ವಿವಿಧ ದುರುಸುಬಾಣಗಳನ್ನು ಸುಡುತ್ತಾರೆ. ಆ ಸಮಯದಲ್ಲಿ ಶ್ರೀಗಳವರು

ಹಾಸಿದ ನವವಸ್ತ್ರದ ಮೇಲೆ ಆಸೀನರಾಗುತ್ತಾರೆ. ಆಗ ಶಾಸ್ತ್ರಚರ್ಚೆಯನ್ನು ನಡೆಯಿಸುವುದಿದೆ. ಭಜಕರು, ಭಾಗವತರು ಕೀರ್ತನೆಗಳನ್ನು ಹಾಡುತ್ತಿರುತ್ತಾರೆ. ಕರ್ಪೂರ ದೀಪಶ್ರೇಣಿ, ಅಗ್ನಿತೋರಣ (ರಾಜವೈಭವದಿಂದ ಬಂದಿರುವ ದೇವರ ದೃಷ್ಟಿದೋಷ ಪರಿಹಾರಾರ್ಥವಾಗಿ ಈ ಅಗ್ನಿತೋರಣ) ಕಂಭದ ಬೆಡಿ ಮೊದ




ಮಕರಸಂಕ್ರಮಣದ ದಿನ ಎಳೆಯಲ್ಪಡುವ ಮೂರು ರಥಗಳು.

ಲಾದುವು ಮುಗಿದ ಬಳಿಕ ರಥವನ್ನು ಮೊದಲಿದ್ದ ಜಾಗಕ್ಕೆ ಎಳೆದು ತರುವರು. ಅಲ್ಲಿಂದ ದೇವರನ್ನು ಪಾಲಕಿಯಲ್ಲಿರಿಸಿ ವಸಂತಮಹಲಿಗೆ ತೆರಳಿಸಿಕೊಂಡು ಬಂದು ತೊಟ್ಟಿಲಲ್ಲಿಟ್ಟು ಪೂಜೆ ಮಾಡುವರು. ಅಲ್ಲಿಯೆ ಅಷ್ಟಾವಧಾನ, ಮಂತ್ರಾಕ್ಷತೆಗಳಾದ ಮೇಲೆ ದೇವರನ್ನು ಗುಡಿಗೆ ತಂದು ಕೊಳಲುಸೇವೆ, ಏಕಾಂತಸೇವೆ ಪೂಜೆಗಳು ಜರಗುವುವು. ಈ ಆರು ಉತ್ಸವಗಳಲ್ಲಿ ಮೊದಲಿನ ಐದು ರಾತ್ರೆಗಳಲ್ಲಿ ಎರಡು ರಥಗಳನ್ನು ಎಳೆಯುತ್ತಾರೆ. ಮಧ್ಯರಥದಲ್ಲಿ ಶ್ರೀಕೃಷ್ಣ-ಮುಖ್ಯಪ್ರಾಣರ ಮೂರ್ತಿಗಳನ್ನೂ, ಸಣ್ಣ ರಥದಲ್ಲಿ ಅನಂತಾಸನ ಚಂದ್ರೇಶ್ವರ ಮೂರ್ತಿಗಳನ್ನೂ ಇರಿಸುವರು. ಆರನೆಯ ದಿನವಾದ ಸಂಕ್ರಾಂತಿ ಉತ್ಸವವು ಅತ್ಯಂತ ವೈಭವದಿಂದ ನಡೆಯುವುದು. ಈ ದಿನವೆ ಶ್ರೀಕೃಷ್ಣನ ಪ್ರತಿಷ್ಠಾದಿನವಾಗಿರುತ್ತದೆ. ಆ ದಿನ ಮೂರು ರಥಗಳನ್ನು ಎಳೆಯಲಾಗು

ವುದು. ಆ ದಿನದಲ್ಲಿ ಬ್ರಹ್ಮ(ದೊಡ್ಡ)ರಥದಲ್ಲಿ ಶ್ರೀಕೃಷ್ಣದೇವರ ಮೂರ್ತಿಯನ್ನೂ ಸಣ್ಣ ರಥದಲ್ಲಿ ಮುಖ್ಯಪ್ರಾಣದೇವರ ಮೂರ್ತಿಯನ್ನೂ ಮಧ್ಯ ರಥದಲ್ಲಿ ಅನಂತಾಸನ-ಚಂದ್ರೇಶ್ವರ ದೇವರ ಮೂರ್ತಿಗಳನ್ನೂ ಇರಿಸುವರು. ಮಂಗಳಾರತಿ ಮುಗಿದ ಬಳಿಕ ಮೊದಲಿಗೆ ಪ್ರಾಣದೇವರುಳ್ಳ ಸಣ್ಣ ರಥವನ್ನೆಳೆದು ದಕ್ಷಿಣ ಬೀದಿಯಲ್ಲಿ ಬಲಬದಿಯಲ್ಲಿ ನಿಲ್ಲಿಸುವರು. ತದನಂತರ ಮಧ್ಯ ರಥವನ್ನು ಎಳೆದು ಎಡಬದಿಯಲ್ಲಿ ನಿಲ್ಲಿಸುವರು. ಆಮೇಲೆ ಶ್ರೀಕೃಷ್ಣ ದೇವರುಳ್ಳ ಬ್ರಹ್ಮರಥವನ್ನು ಎಳೆದು ಆ ಎರಡೂ ರಥಗಳ ನಡುವೆ ನಿಲ್ಲಿಸುವರು. ಮೂರು ರಥಗಳು ನಿಂತಿರುವ ಈ ಸೊಬಗಿನ ದೃಶ್ಯವು ಅಸದೃಶವಾದುದಾಗಿದೆ. ಹೀಗೆ ಮೂರು ರಥಗಳನ್ನೆಳೆಯುವುದು ವರ್ಷದಲ್ಲಿ ಸಂಕ್ರಾಂತಿ ಮಹೋತ್ಸವದ ದಿನದಲ್ಲಿ ಮಾತ್ರವೆ ಆಗಿದೆ.

ಮರುದಿನ ಹಗಲುತ್ಸವ. ಆ ದಿನ ಮಧ್ಯಾಹ್ನ ಮಹಾಪೂಜೆಯ ತರುವಾಯ ಶ್ರೀಕೃಷ್ಣ – ಮುಖ್ಯಪ್ರಾಣದೇವರನ್ನು ಚಿನ್ನದ ಪಾಲಕಿಯಲ್ಲಿಟ್ಟು ಹೊರತಂದು ಬ್ರಹ್ಮರಥಕ್ಕೆ ತೆರಳಿಸಿ ಎಲ್ಲ ಶ್ರೀಗಳವರೂ ರಥವನ್ನೇರಿ ಪ್ರತ್ಯೇಕ ಪ್ರತ್ಯೇಕವಾಗಿ ಮಂಗಳಾರತಿಯನ್ನು ಮಾಡುವರು. ಅಲ್ಲಿ ಶ್ರೀಗಳವರು ದೇವರಿಗೆ ಸಮರ್ಪಿಸಿರುವ ಫಲ-ಲಡ್ಡು



ಬ್ರಹ್ಮ ರಥ

ಮೊದಲಾದ ಪ್ರಸಾದಗಳನ್ನು ಸಹಿರಣ್ಯಕವಾಗಿ ಕೆಳಗೆ ಸೇರಿರುವ ಭಕ್ತರ ಗುಂಪಿಗೆಸೆಯುವರು. ಈ ಸಮಯದಲ್ಲಿ ಗರುಡ ಪಕ್ಷಿಯು ಆಕಾಶದಲ್ಲಿ ಬಂದು ರಥದ ಮೇಲ್ಗಡೆ ಸುತ್ತಾಡುವುದು. ಆಮೇಲೆ ರಥೋತ್ಸವವಾಗುವುದು.

ಉತ್ಸವಾನಂತರ ವಸಂತ ಮಹಲಿಗೆ ದೇವರನ್ನು ತಂದು ಪೂಜಿಸುವರು. ಪಾಲಿಕೆ ಮಂಗಳಾರತಿ, ಮಂತ್ರಾಕ್ಷತೆಗಳಾದ ಮೇಲೆ ದೇವರಿಗೆ ಸಮರ್ಪಿತವಾದ ಓಕುಳಿಯನ್ನು ಶ್ರೀಗಳಾದಿಯಾಗಿ ಸರ್ವರೂ ಹಚ್ಚಿಕೊಂಡು ದೇವರನ್ನು ತೆರಳಿಸಿಕೊಂಡು ಮಧ್ವಸರೋವರಕ್ಕೆ ಬಂದು ದೇವರಿಗೆ ಅವಭೃಥಸ್ನಾನ ಮಾಡಿಸುವರು. ಈ ಮುಹೂರ್ತದಲ್ಲಿ ಎಲ್ಲ ಶ್ರೀಗಳವರೂ ಭಕ್ತರೂ ಸ್ನಾನ ಮಾಡುವರು. ಈದಿನ ಸುವರ್ಣಚೂರ್ಣ ಸಹಿತವಾದ ಪುಷ್ಪವನ್ನು ದೇವರಿಗೆ ಸಮರ್ಪಿಸಿ ಈ ಪ್ರಸಾದವನ್ನು ರಥದಿಂದ ಭಕ್ತರಿಗೆ ಎಸೆಯುವುದರಿಂದ ಈ ಉತ್ಸವಕ್ಕೆ (ಸುವರ್ಣ) ಚೂರ್ಣೋತ್ಸವವೆಂದು ಹೆಸರಾಗಿದೆ. ಈ ಸಪ್ತೋತ್ಸವ ದಿನಗಳಲ್ಲಿ ಪ್ರತಿದಿನವೂ ಹೆಚ್ಚಿನಬ್ರಾಹ್ಮಣ ಸಂತರ್ಪಣೆ ನಡೆಯುವುದಲ್ಲದೆ ಚೂರ್ಣೋತ್ಸವದ ದಿವಸ ವಿಶೇಷ ಸಂತರ್ಪಣೆ ನಡೆಯುವುದು.

ಶ್ರೀಮಧ್ವನವಮಿ

ಶ್ರೀಮಧ್ವನವಮಿ ದಿನಾಚರಣೆಯನ್ನು ಉಡುಪಿಯಲ್ಲಿ ವಿಶೇಷ ವಿಜೃಂಭಣೆಯಿಂದ ಆಚರಿಸಲಾಗುತ್ತದೆ. ಶ್ರೀಮದಾಚಾರ್ಯರು ಅದೃಶ್ಯರಾದ ಈ ಪವಿತ್ರ ದಿನವು ಪ್ರತಿ ವರ್ಷವೂ ಮಕರಮಾಸದ ಶುಕ್ಲ ನವಮಿಯಂದು ಬರುವುದು. ಅಂದು ಎಲ್ಲ ಶ್ರೀಪಾದಂಗಳವರೂ ವಾದ್ಯವೈಭವದೊಡನೆ ಶಿಷ್ಯ ಪರಿವಾರದೊಂದಿಗೆ ಅನಂತಾಸನದೇವಾಲಯದಲ್ಲಿರುವ ಶ್ರೀಮದಾಚಾರ್ಯರ ಸನ್ನಿಧಿ ಸ್ಥಳಕ್ಕೆ ತೆರಳಿ ವಿಧ್ಯುಕ್ತವಾದ ಪೂಜೆ ನಡೆಯಿಸಿ ಪಾದ್ಯವನ್ನೀಯುವರು. ಪರ್ಯಾಯಮಠದ ಕಡೆಯಿಂದ ಮಹಾಸಂತರ್ಪಣೆ ನಡೆಯುವುದು. ಆಚಾರ್ಯರ ಮತಾನುಯಾಯಿಗಳಾದ ಇತರ ಸದ್ಭಕ್ತರು ಅಂದು ಮಧ್ವಸರೋವರ ಸ್ನಾನ, ಮಧ್ವವಿಜಯ ಪಾರಾಯಣ, ಗುರುಚರಣ ಪೂಜಾದಿಗಳನ್ನು ನಡೆಯಿಸಿ ಕೃತಾರ್ಥರಾಗುವರು. ಸಾಯಂಕಾಲ ಭಜನೆಯೊಂದಿಗೆ ಶ್ರೀಮದಾಚಾರ್ಯರ ಭಾವಚಿತ್ರದೊಂದಿಗೆ ಪುರಮೆರವಣಿಗೆಯಿರುವುದು. ರಾತ್ರಿ ವೈಭವೋಪೇತವಾದ ಬ್ರಹ್ಮರಥೋತ್ಸವ ಜರಗುವುದು.

ಹೋಳಿ ಕಾಮದಹನ: ಹೋಳಿಹಬ್ಬದ ಆಚರಣೆಯು, ಸಾಯಂಕಾಲ ಶ್ರೀಕೃಷ್ಣಮಠದಿಂದ ಮೆರವಣಿಗೆ ಹೊರಟು ಕಡಿಯಾಳಿಗೆ ಹೋಗಿ ಬಂದು ರಾತ್ರೆ ಮೆರವಣಿಗೆ ಮತ್ತು ಕಾಮದಹನದ ಕಾರ್ಯಕ್ರಮಗಳೊಂದಿಗೆ ಆಚರಿಸುವುದು. ಮರುದಿನ ಮುಂಜಾನೆ ಮೆರವಣಿಗೆ – ಓಕುಳಿ ನಡೆಯುವುದು.

ಶ್ರೀರಾಮನವಮಿ: ಚೈತ್ರ ಶುದ್ಧ ನವಮಿ ವಿಶೇಷೋತ್ಸವವಿದೆ. ಶ್ರೀ ಫಲಿಮಾರು ಮಠದ ಶ್ರೀರಾಮದೇವರು ಶ್ರೀಕೃಷ್ಣಮಠದಲ್ಲಿದ್ದರೆ ಮಹಾಭಿಷೇಕವಿದೆ.

ಮೇಷ ಸಂಕ್ರಮಣ: ಯುಗಾದಿ ದಿನಾಚರಣೆಯು ಬೆಳಗ್ಗೆ ರಥೋತ್ಸವ, ತೊಟ್ಟಿಲುಪೂಜಾನಂತರ ಸಂವತ್ಸರ ಫಲಪಠನ, ಪ್ರಸಾದ ವಿತರಣಗಳೊಂದಿಗೆ ಉತ್ಸಾಹದಿಂದ ಆಚರಿಸಲ್ಪಡುವುದು.

ವಸಂತೋತ್ಸವ: ಪ್ರತಿವರ್ಷವೂ ಚೈತ್ರಶುದ್ಧ ಪ್ರತಿಪದೆಯಿಂದ ಎರಡು ತಿಂಗಳು ಕಾಲ ದಿನವೂ ರಾತ್ರೆ ವಸಂತಪೂಜೆ ನಡೆಯುವುದು. ಈ ಪೂಜೆಯಲ್ಲಿ ಸಮರ್ಪಿತವಾದ ಪ್ರಸಾದವನ್ನು ಸರ್ವರಿಗೂ ಹಂಚಲಾಗುವುದು. ಅಕ್ಷಯ ತೃತೀಯಾದಿಂದ ವೈಶಾಖಪೂರ್ಣಿಮಾ ವರೆಗೆ ರಾತ್ರೆ ಉತ್ಸವವೂ ವಸಂತಮಹಲಿನಲ್ಲಿ ಸಂಭ್ರಮದ ಪೂಜೆಯೂ ನಡೆಯುವುದು. ದ್ವಾದಶಿಯ ದಿನ ಮಾತ್ರ ಹಗಲಲ್ಲಿ ಉತ್ಸವವಾಗಿ ವಸಂತಸಮಾರಾಧನೆ ನಡೆಯುವುದು.

ನರಸಿಂಹಜಯಂತಿ: ಶ್ರೀಕೃಷ್ಣಾಪುರ ಮತ್ತು ಕಾಣೀರುಮಠದ ದೇವರುಗಳು ಶ್ರೀಕೃಷ್ಣಮಠದಲ್ಲಿದ್ದರೆ ಮಹಾಭಿಷೇಕ, ಸಂತರ್ಪಣೆ, ರಥೋತ್ಸವಗಳು ಜರಗುವುವು.

ಭಾಗೀರಥೀ ಜನ್ಮದಿನ: ಮಧ್ವಸರೋವರದ ಪಾರ್ಶ್ವದಲ್ಲಿರುವ ಭಾಗೀರಥೀಗುಡಿಯಲ್ಲಿ ವಿಶೇಷಪೂಜೆ, ಶ್ರೀಕೃಷ್ಣನಿಗೆ ರಥೋತ್ಸವಗಳು ನಡೆಯುವವು.

ಚಾತುರ್ಮಾಸ: ಆಷಾಢ ಶುದ್ಧ ಅಷ್ಟಮಿದಿನ ಶ್ರೀಕೃಷ್ಣಮಠದ ಪೂಜಾಸಾಮಗ್ರಿಯೆ ಮೊದಲಾದ ಬಾಹ್ಯೋಪಕರಣಗಳೆಲ್ಲವನ್ನೂ – ಗುಡಿಯನ್ನೂ ಸಹ – ಉದ್ವರ್ತನೆ ಮಾಡುವರು. ಆಷಾಢ ಶುದ್ಧ ದಶಮಿಯ ದಿನ ಶ್ರೀಕೃಷ್ಣದೇವರಿಗೆ ಅತ್ಯಂತಸಂಭ್ರಮದಿಂದ ಮಹಾಭಿಷೇಕ ನಡೆಯುವುದು. ಮರುದಿನ ಏಕಾದಶಿಯ ದಿನ ತಪ್ತಮುದ್ರಾಧಾರಣವಿದೆ.


ಜಾಗರಸೇವೆ: ಆಷಾಢ ಶುದ್ಧ ೧೧ರಿಂದ ಕಾರ್ತಿಕ ಶುದ್ಧ ೧೧ರ ವರೆಗಿನ ಪ್ರತಿ ಏಕಾದಶಿಗಳಲ್ಲಿ (ಚಾತುರ್ಮಾಸದ ಏಕಾದಶಿಗಳಲ್ಲಿ) ರಾತ್ರೆ ಪೂಜಾನಂತರ ಜಾಗರಸೇವೆ ನಡೆಯುವುದು. ಪ್ರಥಮದಲ್ಲಿ ವಾದ್ಯಸೇವೆ, ನರ್ತನ-ಕೀರ್ತನ ಸೇವೆ ಭಾಗವತ ಪುರಾಣವಾಚನಗಳು ನಡೆದು ಕೊನೆಗೆ ಪರ್ಯಾಯ ಶ್ರೀಗಳವರು ಪೂಜೆಮಾಡಿ ಇತರ ಶ್ರೀಗಳವರೊಂದಿಗೆ ತಲೆಯಲ್ಲಿ ತುಲಸೀನಿರ್ಮಾಲ್ಯವನ್ನು ಧರಿಸಿ ಕುಣಿದು ಪ್ರದಕ್ಷಿಣೆ ನಮಸ್ಕಾರ ಮಾಡುವರು.

ಆಷಾಢಮಾಸದಲ್ಲಿ ಸುಮುಹೂರ್ತದಲ್ಲಿ ಶ್ರೀಕೃಷ್ಣನ ಉತ್ಸವಮೂರ್ತಿಯನ್ನು ಒಳಗಿರಿಸಿ ಮುಂದೆ ಉತ್ಥಾನದ್ವಾದಶಿಯಂದು ಹೊರತರುವರು. ಆ ವರೆಗೆ ರಥೋತ್ಸವ – ಮಂಟಪಪೂಜೆ ಇರುವುದಿಲ್ಲ. ಈ ಚಾತುರ್ಮಾಸದ ನಾಲ್ಕು ತಿಂಗಳುಗಳಲ್ಲಿ ಕ್ರಮವಾಗಿ ಶಾಕ, ದಧಿ, ಕ್ಷೀರ, ದ್ವಿದಳವ್ರತಗಳಿವೆ. ಇದೇ ಅವಧಿಯಲ್ಲಿ ಋಕ್, ಯಜುಸ್, ಸಾಮಶಾಖೆಯವರಿಗೆ ಉಪಾಕರ್ಮ ವಿಧಿಯೂ ಜರಗುವುದು.

ಮಾಸತ್ರಯಗಳಲ್ಲಿ ಮೂರು ಕಡೆಗಳಲ್ಲಿ (ಸಿಂಹಾಸನ, ಚಂದ್ರಶಾಲೆ, ಮಧ್ವಸರೋವರದ ದಡ) ಮಾಸಮಹಾತ್ಮೆಯ ಪುರಾಣಪಠನೆ, ಪೂರ್ಣಿಮಾ ದಿನಗಳಲ್ಲಿ ವ್ಯಾಸಪೂಜೆಗಳು ನಡೆಯುವವು.

ಶ್ರೀಕೃಷ್ಣ ಜಯಂತಿ (ವಿಟ್ಲಪಿಂಡಿ)

ಅಷ್ಟಮಿಯ ದಿನ ಉಪವಾಸವಿದ್ದು ರಾತ್ರೆ ಚಂದ್ರೋದಯ ಕಾಲದಲ್ಲಿ ಶ್ರೀಕೃಷ್ಣನಿಗೆ ವಿಶೇಷವಾದ ಲಡ್ಡು, ಚಕ್ಕುಲಿಮೊದಲಾದ ವಿಶೇಷ ಭಕ್ಷ್ಯ-ಭೋಜ್ಯಾದಿಗಳನ್ನು ನಿವೇದಿಸಿ ಸಂಭ್ರಮದಿಂದ ಪೂಜೆ ನಡೆಯಿಸುವರು. ಪೂಜಾನಂತರ ಅರ್ಘ್ಯಪ್ರದಾನವಿತ್ತು, ತುಳಸೀಕಟ್ಟೆಯಲ್ಲಿ ಚಂದ್ರನಿಗೆ ಅರ್ಘ್ಯ ವೀಯುವರು. ಅನೇಕ ಭಕ್ತರೂ ಅರ್ಘ್ಯಪ್ರದಾನ ಗೈಯುವರು. ಮರುದಿನ ವಿಶೇಷ ಪೂಜೆ, ಸಂತರ್ಪಣಾದಿಗಳು ಜರುಗಿದ ತರುವಾಯ ಪ್ರೇಕ್ಷಣೀಯವಾದ ವಿಟ್ಲಪಿಂಡಿ ಉತ್ಸವವು ಜರಗುವುದು. ಈ ಉತ್ಸವಕ್ಕಾಗಿಯೆ ಶ್ರೀಕೃಷ್ಣನ ಮೃತ್ತಿಕಾ ಪ್ರತೀಕವನ್ನು ನಿರ್ಮಿಸುವರು. ರಥಬೀದಿಯಲ್ಲಿ ಅಲ್ಲಲ್ಲಿ ಕುರುಜಿಗಳನ್ನು ಕಟ್ಟಿ ಅದರಲ್ಲಿ ಲಡ್ಡುಗೆ, ಚಕ್ಕುಲಿ, ಓಕುಳಿನೀರು ಮೊದಲಾದವುಗಳುಳ್ಳ ಮಡಿಕೆಗಳನ್ನು ಗೋಪಾಲ ವೇಷಧಾರಿಗಳು ಒಡೆಯುವುದು ಈ ಉತ್ಸವದ ವೈಶಿಷ್ಟ್ಯ. ಅನೇಕರು ನಾನಾ ವೇಷಗಳನ್ನು ಧರಿಸಿ ತಮ್ಮ ಕಲಾಕೌಶಲ್ಯವನ್ನು



ಗೋಕುಲಾಷ್ಟಮಿಯ ಕುರುಜಿ.

ಪ್ರದರ್ಶಿಸುವರು. ಇದನ್ನು ನೋಡಲು ಆಸುಪಾಸಿನ ಊರುಗಳಿಂದಅಸಂಖ್ಯಾತ ಜನರು ಸೇರುತ್ತಾರೆ. ಉತ್ಸವಾನಂತರ ತೆಂಬೆಕಾಯಿಯಾಟ, ಓಕುಳಿ, ಅವಭೃಥಸ್ನಾನಾದಿಗಳು ಜರಗುವುವು. ನಂತರ ಮೃತ್ತಿಕಾಪ್ರತೀಕವನ್ನು ವಿಸರ್ಜಿಸಿ ಮಧ್ವ ಸರೋವರದಲ್ಲಿ ಹಾಕುವರು. ದೇವರಿಗೆ ಸಮರ್ಪಿಸಿದ ಲಡ್ಡುಗೆ ಮೊದಲಾದ ಪ್ರಸಾದವನ್ನು ಭಕ್ತರಿಗೆಲ್ಲಾ ವಿತರಣೆ ಮಾಡುವರು.

ಗಣೇಶಚತುರ್ಥಿ; ಭಾದ್ರಪದ ಶುದ್ಧ ಚತುರ್ಥಿಯಂದು ವಿಶ್ವಂಭರ ರೂಪಿಯಾದ ಪರಮಾತ್ಮನು ಗಣಪತಿಗೆ ಒಲಿದ ದಿನವಾದುದರಿಂದಲೂ ಮತ್ತು ಗಣಪತಿಯ ಜನ್ಮದಿನವಾದುದರಿಂದಲೂ ಗಣಪತಿಯ ಮೃತ್ತಿಕಾ ಮೂರ್ತಿಯನ್ನು ಮಾಡಿಸಿ, ಅದನ್ನು ಬೆಳಿಗ್ಗೆ ಬಿರುದಾವಳಿಗಳ ವೈಭವದೊಡನೆ ಶ್ರೀಕೃಷ್ಣಮಠಕ್ಕೆ ತಂದು ಬಡಗುಮಾಳಿಗೆಯಲ್ಲಿ ಅಲಂಕೃತವಾದ ಮಂಟಪ ದಲ್ಲಿರಿಸಿ ಗಣಪತ್ಯಂತರ್ಗತ ವಿಶ್ವಂಭರನನ್ನು ಪೂಜಿಸುವರು. ಶ್ರೀಕೃಷ್ಣಮಠದ ಪಕ್ಕದ ಕೋಣೆಗಳಲ್ಲೂ ಪ್ರತ್ಯೇಕ ಮೂರ್ತಿಗಳನ್ನಿಟ್ಟು ಪೂಜಿಸುತ್ತಾರೆ. ಆ ದಿನ ಹೋಮ ಸಂತರ್ಪಣೆಗಳಿರುವುವು. ನಾಲ್ಕನೆಯ ದಿನ ಆ ಪ್ರತಿಮೆಗಳನ್ನು

ಮೆರವಣಿಗೆಯಿಂದ ರಥಬೀದಿಗೆ ಸುತ್ತಾಗಿ ಮಧ್ವಸರೋವರಕ್ಕೆ ತಂದು ದೋಣಿಗಳ ಮೇಲೆ ಕಟ್ಟಿದ ತೆಪ್ಪೆಯಲ್ಲಿರಿಸಿ ಸುತ್ತು ಬಂದು ಮತ್ತೆ ವಿಸರ್ಜಿಸುವರು.

ಅನಂತಚತುರ್ದಶಿ: ಭಾದ್ರಪದಶುದ್ಧ ೧೪ರಂದು ಶ್ರೀಕೃಷ್ಣ ಸನ್ನಿಧಿಯಲ್ಲಿ ಕಲಶಪ್ರತಿಷ್ಠೆ, ವಿಶೇಷಪೂಜೆ, ಸಂತರ್ಪಣೆಗಳು ಜರಗುವುವು.

ನವರಾತ್ರೆ: ಆಶ್ವಯುಜ ಶುದ್ಧ ಪ್ರತಿಪದೆಯಿಂದ ನವಮಿಯವರೆಗೆ ನವರಾತ್ರೆಯ ಆಚರಣೆ ವೈಭವದಿಂದ ನಡೆವುದು. ಈ ಒಂಭತ್ತು ದಿನಗಳಲ್ಲಿ ದೇವರಿಗೆ ಲಕ್ಷ್ಮಿಯ ಅಲಂಕಾರವನ್ನು ಮಾಡುವರು. ಪ್ರತಿದಿನವೂ ಶ್ರೋತ್ರಿಯರು ವೇದ-ಪುರಾಣಾದಿಗಳ ಪಾರಾಯಣವನ್ನು ಮಾಡುವರು. ಮೂಲಾ ನಕ್ಷತ್ರದಲ್ಲಿ ಚಂದ್ರಶಾಲೆಯಲ್ಲಿ ಸಿಂಗರಿಸಿದ ಮಂಟಪದಲ್ಲಿ ವ್ಯಾಸಪ್ರತಿಷ್ಠೆಯಾಗಿ ನಾಲ್ಕು ದಿನ ಪುಸ್ತಕಪೂಜೆ ನಡೆಯುವುದು. ಈ ಅವಧಿಯಲ್ಲಿ ದೇವರಿಗೆ ವಿಶೇಷ ಪಂಚಕಜ್ಜಾಯವನ್ನು ಸಮರ್ಪಿಸಿ, ಈ ಪ್ರಸಾದವನ್ನು ಭಕ್ತವೃಂದಕ್ಕೆ ವಿತರಣೆ ಮಾಡುವರು. ಶ್ರವಣ ನಕ್ಷತ್ರದಿನ ಪುಸ್ತಕ ವಿಸರ್ಜನೆಯಾಗುವುದು. ಇದೇ ದಿನ ಶಾಂತಿಪಾಠ ಜರಗುವುದು. ವಿಜಯದಶಮಿ ದಿನ ಶ್ರೀಕೃಷ್ಣಮಠದಲ್ಲಿ ನೂತನ ಧಾನ್ಯದ ಆನಯನೋತ್ಸವ ನಡೆಯುವುದು (ಹೊಸತು ಕಟ್ಟುವುದು.) ನೂತನ ಧಾನ್ಯವನ್ನು ಆದಿನ ಚಿನ್ನದ ಪಾಲಕಿಯಲ್ಲಿರಿಸಿ ಸಂಭ್ರಮದಿಂದ ತರುವರು. ಮತ್ತು ಈ ಕದಿರನ್ನು ಎಲ್ಲ ಕಡೆಗೂ ಕಟ್ಟುವರು. ಈ ದಿನವೆ ನವಾನ್ನ ಭೋಜನವು ನಡೆಯುವುದು. ಸಂಜೆಗೆ ಪೌಜು ಮೆರವಣಿಗೆಯು ಶ್ರೀಕೃಷ್ಣಮಠದಿಂದ ಹೊರಟು ಕಡಿಯಾಳಿಗೆ ತೆರಳಿ ಅಲ್ಲಿ ಶಮಿಪೂಜೆ ನಡೆವುದು.

ಪಶ್ಚಿಮಜಾಗರಣ ಪೂಜೆ: ಆಶ್ವಯುಜ ಶುದ್ಧ ಏಕಾದಶಿಯಿಂದ ಕಾರ್ತಿಕ ಶುದ್ಧ ದ್ವಾದಶಿಯ ವರೆಗೆ ಒಂದು ತಿಂಗಳು ಪ್ರತಿದಿನವೂ ಬ್ರಾಹ್ಮ ಮುಹೂರ್ತದಲ್ಲಿ ನಿರ್ಮಾಲ್ಯ ವಿಸರ್ಜನೆಪೂಜಾನಂತರ ಅವಲಕ್ಕಿ, ಬೆಲ್ಲ, ಕಾಯಿ, ಹಣ್ಣು, ತಾಂಬೂಲಾದಿಗಳನ್ನು ಸಮರ್ಪಿಸಿ ದೇವರಿಗೆ ಆರತಿ ಮಾಡುವರು. ಅದೇ ಆರತಿಯನ್ನು ಹಿಡಿದುಕೊಂಡು ಹೊರಬಂದು ಮಂಟಪದ ಎದುರು ಪುನಃ ದೇವರಿಗೆ ತೋರಿಸಿ, ತುಲಸಿಗೆ ಆರತಿಮಾಡಿ, ಅಲ್ಲಿಂದ ಪ್ರಾಣದೇವರಿಗೂ ಸರ್ವಜ್ಞಾಚಾರ್ಯರಿಗೂ ಆರತಿ ಮಾಡಿ ಸುತ್ತಾಗಿ ಬಂದು ಗರುಡದೇವರಿಗೆ ಆರತಿ ಮಾಡುವರು. ಈ ಪೂಜೆಯನ್ನು ಪರ್ಯಾಯಶ್ರೀಗಳವರೆ ಮಾಡುವರು. ಈ ಪೂಜೆ ಪ್ರಾರಂಭವಾಗುವ ಪೂರ್ವದಲ್ಲಿ ವಿಶಿಷ್ಟ ಪ್ರಕಾರದ ಭೇರಿವಾದನ, ವಾದ್ಯಘೋಷಗಳಿವೆ. ಪೂಜಾನಂತರ ಎಲ್ಲಾ ವಾದ್ಯಗಳನ್ನೂ ಬಾರಿಸುತ್ತ

ದೇವರಿಗೆ ಏಳು ಸುತ್ತು ಬರುವರು. ಪೂಜೆಯು ಮೊದಲೂ ಅನಂತರವೂ ಹರಿಕೀರ್ತನೆ ನಡೆಯುತ್ತಿರುತ್ತದೆ.

ದೀಪಾವಳಿ–ಬಲೀಂದ್ರ ಪೂಜಾ: ಆಶ್ವಯುಜ ಬಹುಳ ತ್ರಯೋದಶಿ ದಿನ ಜಲಪೂಜೆ ಮರುದಿನ ಚಂದ್ರೋದಯದಲ್ಲಿ ಶ್ರೀಕೃಷ್ಣನಿಗೆ ತೈಲಸಮರ್ಪಣ ಪೂರ್ವಕ ಪೂಜೆ ನಡೆಯುವುದು. ತರುವಾಯ ವಿಧಿಪ್ರಕಾರ ತೈಲಶಾಸ್ತ್ರವಾದ ತರುವಾಯ ಶ್ರೀಗಳವರೂ ಇತರ ಮಹಾಜನರೂ ತೈಲಾಭ್ಯಂಗವನ್ನು ಮಾಡುವರು. ಅಮಾವಾಸ್ಯೆಯ ದಿನ ಗೋಪುರದ ಇದಿರಿನಲ್ಲಿ ಬಲಿಚಕ್ರವರ್ತಿಯ ಆಕೃತಿಯನ್ನು ಕಲಾತ್ಮಕವಾಗಿ ಬರೆದು ಪುರೋಹಿತರಿಂದ ಪೂಜೆ ನಡೆಸಲ್ಪಡುವುದು. ಎಲ್ಲ ಕಡೆಗೂ ದೀಪಗಳನ್ನು ಹೊತ್ತಿಸುವರು. ಮರುದಿನ ಸಿಂಗರಿಸಿದ ಗೋವುಗಳಿಗೆ ಹೊರಗೋಪುರದಲ್ಲಿ ಹರಿಸಮರ್ಪಿತವಾದ ಅರಳು ಮೊದಲಾದ್ದನ್ನು ತಿನ್ನಲಿಕ್ಕಿದ ನಂತರ ಗೋಪೂಜೆಯು ನಡೆಯುವುದು. ನಂತರ ವಾದ್ಯಘೋಷದೊಡನೆ ರಥಬೀದಿಯಲ್ಲಿ ಗೋವುಗಳನ್ನು ಸುತ್ತಾಗಿ ತರುವರು.

ಲಕ್ಷದೀಪೋತ್ಸವ: ಕಾರ್ತಿಕಶುದ್ಧ ಪ್ರತಿಪದೆಯಿಂದ ದ್ವಾದಶಿಯವರೆಗೆ ಪ್ರತಿದಿನವೂ ರಾತ್ರೆ ಪೂಜಾನಂತರ ತುಲಸೀಪೂಜೆ ನಡೆಯುವುದು. ಪೂಜಾನಂತರದಲ್ಲಿ ಹರಿಸಂಕೀರ್ತನೆ ನಡೆಯುವುದು. ಈ ಸಮಯದಲ್ಲಿ ತುಲಸೀಕಟ್ಟೆಯನ್ನು ದಿನವೂ ನಾನಾ ಬಗೆಯಿಂದ ಬಾಳೆಯ ದಿಂಡುಗಳಿಂದ ಕಲಾತ್ಮಕವಾಗಿ ಸಿಂಗರಿಸುವರು. ದ್ವಾದಶಿಯದಿನ ಬೆಳಗ್ಗೆ ದೇವರ ಪೂಜಾನಂತರ ತುಳಸೀ ವೃಂದಾವನದೆದುರು ತುಳಸೀಪೂಜೆ ಮಾಡುವರು. ಸಾಯಂಕಾಲ ವೈಭವೋಪೇತವಾಗಿ ಕ್ಷೀರಾಬ್ಧಿ ಪೂಜೆಯಾಗುವುದು. ಶ್ರೀ ಕೃಷ್ಣಾಪುರ, ಶ್ರೀ ಪುತ್ತಿಗೆ, ಶ್ರೀ ಕಾಣೇರುಮಠಗಳ ದೇವರು ಶ್ರೀಕೃಷ್ಣಮಠದಲ್ಲಿದ್ದರೆ ಮಧ್ವಸರೋವರದ ಮಧ್ಯ ಮಂಟಪದಲ್ಲಿ ಈ ದೇವರುಗಳನ್ನಿಟ್ಟು ಕ್ಷೀರಾಬ್ಧಿ ಪೂಜೆ ನಡೆಯುವುದು.

ರಾತ್ರೆ ಪೂಜಾನಂತರ ಶುಭ ಮುಹೂರ್ತದಲ್ಲಿ, ಪ್ರಾರ್ಥನೆ, ದಾನಾದಿಗಳು ಜರುಗಿ ದೇವರ ಉತ್ಸವಮೂರ್ತಿಯನ್ನು ಚಿನ್ನದ ಪಾಲಕಿಯಲ್ಲಿಟ್ಟು ಹೊರತಂದು ಮಧ್ವಸರೋವರದಲ್ಲಿ ನಿರ್ಮಿಸಿರುವ ನೌಕಾರಥದಲ್ಲಿ ತೆಪ್ಪೋತ್ಸವವೂ, ತದನಂತರ ರಥೋತ್ಸವವೂ ನಡೆಯುವುದು. ಈ ಉತ್ಸವಕಾಲದಲ್ಲಿ ರಥಬೀದಿ ಸುತ್ತಿನ ಎರಡು ಬದಿಗಳಲ್ಲೂ ಸಾಲುಸಾಲಾಗಿ ಲಕ್ಷಾಂತರ ದೀಪಗಳನ್ನುರಿಸುವರು. ಲಕ್ಷದೀಪೋತ್ಸವವು ಪೂರ್ಣಿಮಾ ಪರ್ಯಂತರ ನಡೆಯು



ತೆಪ್ಪೋತ್ಸವದ ನೌಕಾರಥ.

ವುದು. ಈ ಉತ್ಸವಾನಂತರ ಪ್ರತಿದಿನವೂ ಓಲಗ ಪೂಜೆ ಜರಗುವುದು. ಲಕ್ಷದೀಪೋತ್ಸವಕಾಲದಲ್ಲಿಮಧ್ಯ ತರಗತಿಯ ರಥದಲ್ಲಿ ಶ್ರೀಕೃಷ್ಣ ಮತ್ತು ಮುಖ್ಯ ಪ್ರಾಣದೇವರೂ, ಸಣ್ಣರಥದಲ್ಲಿ ಅನಂತಾಸನ-ಚಂದ್ರಮೌಳೀಶ್ವರದೇವರುಗಳೂ ಆಸೀನರಾಗುವರು.

ಸುಬ್ರಹ್ಮಣ್ಯ ಷಷ್ಠಿ : ಈದಿವಸ ಸುಬ್ರಹ್ಮಣ್ಯದೇವರ ಗುಡಿಯಲ್ಲಿ ವಿಶೇಷಪೂಜೆ, ಬೆಳಿಗ್ಗೆ ರಥೋತ್ಸವ, ಮಧ್ಯಾಹ್ನ ಸಂತರ್ಪಣೆಗಳಿವೆ. ಮರುದಿನ ಓಕುಳಿಯಿದೆ.

ಧನುಪೂಜೆ; ಧನುರ್ಮಾಸದಲ್ಲಿ ಇಡಿಯ ತಿಂಗಳೂ ಶ್ರೀಕೃಷ್ಣದೇವರಿಗೆ ಉಷಃಕಾಲದಲ್ಲಿ ಮುದ್ಗಾನ್ನ(ಹುಗ್ಗಿ)ವೆ ಮೊದಲಾದವುಗಳ ಸಮರ್ಪಣ ಪೂರ್ವಕವಾಗಿ ವಿಶೇಷಪೂಜೆ ನಡೆಯಿಸಿ ಸಂತರ್ಪಣೆ ನಡೆಸುವರು.

ಗುರುಸಮಾರಾಧನೆ: ಪರ್ಯಾಯ ಶ್ರೀಗಳವರು ತಮ್ಮ ಗುರುಗಳ ಆರಾಧನೆಯನ್ನು ಬಹು ವಿಜೃಂಭಣೆಯಿಂದ ಜರುಗಿಸುವರು. ಮುಂಚಿನ ದಿನ


ದಲ್ಲಿಯೆ ವಾದ್ಯವೈಭವದೊಡನೆ ಪರ್ಯಾಯ ಶ್ರೀಗಳವರು ಅಧಿಕಾರಿ ವೃಂದ ದೊಡನೆ ಉಡುಪಿಯಲ್ಲಿ ಸನ್ನಿಹಿತರಾಗಿರುವ ಪ್ರತಿ ಶ್ರೀಗಳವರ ಮಠಕ್ಕೆ ತೆರಳಿ ಆಹ್ವಾನವನ್ನು ಕೊಟ್ಟು ಸಹಕರಿಸುವಂತೆ ಕೋರುವರು. ಆದಿನ ರಾತ್ರೆ ಏಕಾಂತಸೇವೆಯ ಅನಂತರ ಎಲ್ಲಾ ಶ್ರೀಗಳವರೊಡನೆ ಕೂಡಿ ಶ್ರೀಕೃಷ್ಣ-ಮುಖ್ಯಪ್ರಾಣರಲ್ಲಿಯೂ, ಶ್ರೀಮದಾಚಾರ್ಯರ ಸನ್ನಿಧಿಯಲ್ಲಿಯೂ ಪ್ರಾರ್ಥಿಸಿ ಕಾಯಿಪಲ್ಲೆಯನ್ನು ಹಚ್ಚುವರೆ ಅನುಜ್ಞೆ ಕೊಡುವರು. ಎಲ್ಲ ಮಠಗಳವರ ನೆರವಿನಿಂದ ಕ್ಯಾಪಲ್ಲೆಯನ್ನು ಹಚ್ಚಲಾಗುವುದು. ಮರುದಿನ ವಿಶೇಷಪೂಜೆ ನಡೆದು ಮಹಾಸಂತರ್ಪಣೆ ನಡೆಯುವುದು. ರಾತ್ರೆ (ಚಾತುರ್ಮಾಸ್ಯೇತರ ಕಾಲದಲ್ಲಾದರೆ) ಮಹಾರಥೋತ್ಸವವು ಜರುಗುವುದು. ಚಾತುರ್ಮಾಸ ಕಾಲ ದಲ್ಲಾದರೆ ಹೂವಿನಪೂಜೆಯನ್ನು ಮಾತ್ರ ಮಾಡುವರು. ಸಂತರ್ಪಣೆಯೆ ಮೊದಲಾದವುಗಳಲ್ಲೆಲ್ಲಾ ಇತರ ಮಠೀಯರೂ ಬಡಿಸುವುದರಲ್ಲಿ ನೆರವಾಗು ವರು. ಇತರ ಶ್ರೀಪಾದಂಗಳವರೂ ಉಡುಪಿಯಲ್ಲಿಯೇ ಇದ್ದರೆ ಅವರ ವರ ಗುರುಸಮಾರಾಧನೆಯನ್ನು ಶ್ರೀಕೃಷ್ಣಮಠದಲ್ಲಿಯೇ ವೈಭವದಿಂದ ಜರು ಗಿಸುವರು.

ಗುರುಸಮಾರಾಧನೆ, ಮಧ್ವನವಮಿ, ಪರ್ಯಾಯ ಏಳುವ ಮತ್ತು ಕುಳಿತುಕೊಳ್ಳುವ ದಿನಗಳು, ಚೂರ್ಣೋತ್ಸವ ಮೊದಲಾದ ವಿಶೇಷ ಸಮಾ ರಂಭಗಳಲ್ಲೆಲ್ಲಾ ಎಲ್ಲ ಮಠಗಳವರೂ ಪರ್ಯಾಯ ಶ್ರೀಗಳವರಿಗೆ ಬಡಿಸುವುದೆ ಮೊದಲಾದುವುಗಳಲ್ಲಿ ತಂತಮ್ಮ ಸಹಕಾರಗಳನ್ನು ನೀಡುವರು.

೧೨. ಪರ್ಯಾಯ ಮಹೋತ್ಸವ

ಉಡುಪಿಯ ಜಾತ್ರೆಗಳಲ್ಲೆಲ್ಲಾ ಪರ್ಯಾಯಮಹೋತ್ಸವವು ಅತ್ಯಂತ ಪ್ರಸಿದ್ಧವಾದುದು. ಇದನ್ನು ನೋಡಲು ದೇಶದ ನಾನಾ ಮೂಲೆಗಳಿಂದಲೂ ಜನರು ಬರುತ್ತಾರೆ. ಈ ಉತ್ಸವವು ಪ್ರತೀ ಎರಡು ವರ್ಷಗಳಿಗೊಮ್ಮೆ ಕ್ರಿಸ್ತ ಶಕ ಸಮಸಂಖ್ಯೆಯ ವರ್ಷದಲ್ಲಿ ಜನವರಿ ಮೂರನೆಯ ವಾರದಲ್ಲಿ – ಪ್ರಾಯಃ ತಾರೀಕು ೧೭ ಅಥವಾ ೧೮ರಲ್ಲಿ ಒದಗಿಬರುತ್ತದೆ. ಶ್ರೀಕೃಷ್ಣನ ಪೂಜೆಯನ್ನು ಹಿಂದಿನ ಕಾಲದಲ್ಲಿ ಎರಡು ತಿಂಗಳಿಗೊಮ್ಮೆ ಒಬ್ಬೊಬ್ಬರು ನಿರ್ವಹಿಸುತ್ತಿದ್ದ ರೆಂದು ಹಿಂದೆ ಸೂಚಿಸಿದೆಯಷ್ಟೆ. ಶ್ರೀಮದ್ವಾದಿರಾಜಸ್ವಾಮಿಗಳವರು ಈ ಪದ್ಧತಿಯನ್ನು ಬದಲಾಯಿಸಿ ಎರಡೆರಡು ವರ್ಷಕಾಲವಾಗಿ ಪರಿವರ್ತಿಸಿದರು. ಹೀಗೆ ಒಬ್ಬರು ಶ್ರೀಗಳವರಿಂದ ಇನ್ನೊಬ್ಬರು ಶ್ರೀಗಳವರು ಶ್ರೀಕೃಷ್ಣಪೂಜಾಧಿ

ಕಾರವನ್ನು ವಹಿಸಿಕೊಳ್ಳುವ ದಿನದ ಪವಿತ್ರ ಸಮಾರಂಭವೆ ಪರ್ಯಾಯ ಮಹೋತ್ಸವವೆನ್ನಿಸುವುದು. ಈ ಪರ್ಯಾಯ ಕಾಲದ ಎರಡೂ ವರ್ಷಗಳಲ್ಲಿ ಶ್ರೀಕೃಷ್ಣಮಠದಲ್ಲಿ ನಡೆಯುವ ಸಕಲ ಕಾರ್ಯಕಲಾಪಗಳೂ ಪರ್ಯಾಯ ಪಟ್ಟವನ್ನೇರಿದ ಶ್ರೀಗಳವರಿಂದಲೆ ನಡೆಸಲ್ಪಡುವವು. ಇದರಿಂದಾಗಿಯೆ ಈ ಪರ್ಯಾಯ ಕಾಲದ ವಿನಿಯೋಗಗಳಿಗಾಗಿ ಹೇರಳ ಸಂಗ್ರಹದ ಪೂರ್ವ ಸಿದ್ಧತೆಯಾಗಿ ಕೆಲವು ಮುಹೂರ್ತಗಳನ್ನು ಪೂರ್ವಿಕರು ಏರ್ಪಡಿಸಿರುತ್ತಾರೆ. ಈ ಏರ್ಪಾಡಿನಂತೆ ಪ್ರತಿ ಸ್ವಾಮಿಗಳವರೂ ಪರ್ಯಾಯಕುಳಿತುಕೊಳ್ಳುವ ಸುಮಾರು ಹದಿಮೂರು ತಿಂಗಳುಗಳ ಪೂರ್ವದಲ್ಲಿಯೆ ಪ್ರಾರಂಭಿಕ ಸಿದ್ಧತೆ ಯೆನಿಸಿದ ಬಾಳೆಮುಹೂರ್ತವನ್ನೂ, ತದನಂತರ ಪರ್ಯಾಯಕ್ಕೆ ಸುಮಾರು ಹನ್ನೊಂದು ತಿಂಗಳ ಪೂರ್ವದಲ್ಲಿ ಅಕ್ಕಿ ಮುಹೂರ್ತವನ್ನೂ, ಆ ಮೇಲೆ ಸುಮಾರು ಏಳು ತಿಂಗಳುಗಳ ಮುಂಚಿತವಾಗಿ ಕಟ್ಟಿಗೆಮುಹೂರ್ತವನ್ನೂ, ಕೊನೆಯಲ್ಲಿ ಒಂದು ತಿಂಗಳ ಮುಂಚಿತವಾಗಿ ಭತ್ತ ಮುಹೂರ್ತವನ್ನೂ ಜರುಗಿಸುತ್ತಾರೆ. ಈ ಭತ್ತದ ಮುಹೂರ್ತದ ದಿನವೇ ಕಟ್ಟಿಗೆ ತೇರಿಗೆ ಶಿಖರವಿಡುವರು. ಈ ನಾಲ್ಕು ಮುಹೂರ್ತಗಳಲ್ಲೂ ಶುಭಲಗ್ನದಲ್ಲಿ



ಶ್ರೀಮದ್ವಾದಿರಾಜಸ್ವಾಮಿಗಳವರು.

ಮಠದ ಪುರೋಹಿತರು ಪ್ರಾರಂಭದಲ್ಲಿ ನವಗ್ರಹ ಪ್ರಾರ್ಥನೆ ಮಾಡುತ್ತಾರೆ. ಆಮೇಲೆ ಮಠದ ದಿವಾನರೆ ಮೊದಲಾದ ಅಧಿಕಾರಿಗಳು ಬಿರುದಾವಲಿ, ವಾದ್ಯ ವೈಭವಗಳೊಡನೆ ಚಂದ್ರೇಶ್ವರ, ಅನಂತಾಸನದೇವಾಲಯಗಳಿಗೆ ಹೋಗಿ ಅಲ್ಲಿ ದೇವತಾಪ್ರಾರ್ಥನೆ ನಡೆಯಿಸಿ, ಅನಂತಾಸನಗುಡಿಯಲ್ಲಿರುವ ಶ್ರೀಮದಾಚಾರ್ಯರ ಸನ್ನಿಧಿಯಲ್ಲಿ ಪ್ರಾರ್ಥನೆ ಸಲ್ಲಿಸಿ, ಅಲ್ಲಿಂದ ಶ್ರೀಕೃಷ್ಣಮಠಕ್ಕೆ ತೆರಳಿ ಶ್ರೀಕೃಷ್ಣದೇವರಲ್ಲಿಯೂ ಶ್ರೀಮುಖ್ಯಪ್ರಾಣನಲ್ಲಿಯೂ, ಶ್ರೀಮಧ್ವಾಚಾರ್ಯರಲ್ಲಿಯೂ ಕಾಣಿಕೆಯನ್ನೊಳಗೊಂಡು ಪ್ರಾರ್ಥನೆ ಸಲ್ಲಿಸುವರು. ಬಾಳೆಮುಹೂರ್ತದಲ್ಲಿ ತಮ್ಮ ಮಠಕ್ಕೆ ಬಂದು ತುಳಸೀಗಿಡಗಳ ಸಹಿತ ಬಾಳೆಯ ಗಿಡಗಳೊಡನೆ ಪುನಃ ಬಿರುದಾವಲಿಗಳೊಡನೆ ನಿಯೋಜಿತ ಸ್ಥಳಕ್ಕೆ ಬಂದು ಬ್ರಾಹ್ಮಣರಿಗೆ ದಾನಾದಿಗಳನ್ನಿತ್ತು ನಿಶ್ಚಯಿಸಲ್ಪಟ್ಟ ಶುಭಮುಹೂರ್ತದಲ್ಲಿ ಆ ಸಸಿಗಳನ್ನು



ಪರ್ಯಾಯದ ಕಟ್ಟಿಗೆರಥ ನಿರ್ಮಾಣ.

ನೆಡುವರು. ಅಕ್ಕಿಮುಹೂರ್ತದಲ್ಲಿ ಗೊತ್ತುಪಡಿಸಿದ ಅಂಗಡಿಯಿಂದ ಅಕ್ಕಿಮುಡಿಯನ್ನು ಚಿನ್ನದ ಪಾಲಕಿಯಲ್ಲಿರಿಸಿ ತಮ್ಮ ಮಠಕ್ಕೆ ತಂದು ಬ್ರಾಹ್ಮಣರಿಗೆ ದಾನ ದಕ್ಷಿಣಾದಿಗಳನ್ನು ಕೊಟ್ಟು ನಿರ್ದಿಷ್ಟವಾದ ಧಾನ್ಯಸಂಗ್ರಹಾಲಯದಲ್ಲಿ ಅಕ್ಕಿಯನ್ನು ಶೇಖರಿಸುವರು. ಈ ಮುಹೂರ್ತದ ದಿನದಲ್ಲಿ ಪರ್ಯಾಯ ಕುಳಿತುಕೊಳ್ಳುವ ಶ್ರೀಗಳವರು ಉಡುಪಿಯ ತಮ್ಮ ಮಠದಲ್ಲಿಯೆ ವಸತಿಯಿದ್ದರೆ ಅಕ್ಕಿಮುಹೂರ್ತವಾದೊಡನೆ ಉಡುಪಿಯಲ್ಲಿರುವ ಇತರ ಎಲ್ಲಾ ಶ್ರೀಗಳವರನ್ನೂ ಮೆರವಣಿಗೆಯಿಂದ ಮಠಕ್ಕೆ ತರಿಸಿ ಪಾದಪೂಜಾದಿಗಳನ್ನೂ ಜರುಗಿಸುವರು. ಕಟ್ಟಿಗೆಮುಹೂರ್ತದಲ್ಲಿ ದೇವತಾಪ್ರಾರ್ಥನಾ ನಂತರ ಶ್ರೀಕೃಷ್ಣಮಠದ ಈಶಾನ್ಯ ದಿಕ್ಕಿನಲ್ಲಿ ದಾನದಕ್ಷಿಣಾದಿ ವಿಧಿಗಳ ತರುವಾಯ ಸಾಮಾನ್ಯ ನಲವತ್ತು ಅಡಿಗಿಂತಲೂ ಉದ್ದವಾದ ಮರದ ಕಂಬವೊಂದನ್ನು ನೆಡುವರು. ಮತ್ತು ಮುಂದೆ ಇದೇ ಸ್ಥಳದಲ್ಲಿ ಆ ಕಂಬದಷ್ಟು ಎತ್ತರವಾಗಿ ಕಟ್ಟಿಗೆಯ ತೇರನ್ನು ನಿರ್ಮಿಸುವರು. ಇದನ್ನು ತಯಾರಿಸುವುದರಿಂದ ಮಳೆಗಾಲದ ಮೂರು ತಿಂಗಳುಗಳ ಕಾಲ ಹಲವಾರು ಬಡಬಗ್ಗರಿಗೆ ಉದ್ಯೋಗ ದೊರೆಯುವುದು. ಈ ಕಟ್ಟಿಗೆ ತೇರಿನ ನಡುವೆ ಬೊಂಬೆಗಳನ್ನಿಡುತ್ತಾರೆ. ಇದು ನೋಡುವುದಕ್ಕೆ ರಮ್ಯವಾಗಿರುತ್ತದೆ. ಭತ್ತದ ಮುಹೂರ್ತದಲ್ಲಿ ಪ್ರಾರ್ಥನಾ ನಂತರ ಭತ್ತದ ಮುಡಿಯನ್ನು ಪಾಲಕಿಯಲ್ಲಿರಿಸಿ ಶ್ರೀಕೃಷ್ಣಮಠದ ಬಡಗುಮಾಳಿಗೆಗೆ ತಂದು ನವಗ್ರಹ ದಾನಾದಿಗಳನ್ನು ಕೊಟ್ಟ ತರುವಾಯ ಅಲ್ಲಿಯ ಧಾನ್ಯಾಗಾರದಲ್ಲಿ ಸಂಗ್ರಹಿಸುತ್ತಾರೆ.

ಪರ್ಯಾಯ ಕುಳಿತುಕೊಳ್ಳುವುದಕ್ಕೆ ಇನ್ನೂ ಆರು ತಿಂಗಳುಗಳಿರುವಾಗಲೆ ಬೇಕಾದ ಪಾತ್ರೆಗಳನ್ನೂ, ಬಿರುದಾವಲಿಗಳನ್ನೂ ಹೊಸತಾಗಿ ಮಾಡಿಸಲು ಪ್ರಾರಂಭಿಸುತ್ತಾರೆ. ಹೊಸ ಬಿರುದಾವಲಿಗಳು ಭತ್ತದ ಮುಹೂರ್ತದ ಒಳಗೆ ಸಿದ್ಧವಾಗತಕ್ಕುದು.. ಪ್ರತಿ ಮಠದವರೂ ಬಿರುದಾವಲಿಗಳಲ್ಲಿ ತಂತಮ್ಮ ದೇವರುಗಳ ಹೆಸರುಗಳನ್ನು ಅಂಕಿತಗೊಳಿಸುವರು. ಕೃಷ್ಣಾಪುರಮಠದವರು 'ಶ್ರೀನೃಸಿಂಹ ಕೃಷ್ಣಶ್ರೀ' ಎಂದೂ, ಪುತ್ತಿಗೆ ಮತ್ತು ಶೀರೂರು ಮಠದವರು 'ಶ್ರೀವಿಠಲಶ್ರೀ' ಎಂದೂ, ಸೊದೆಮಠದವರು 'ಶ್ರೀಭೂವರಾಹಶ್ರೀ' ಎಂದೂ. ಕಾಣೇರು ಮಠದವರು 'ಶ್ರೀನೃಸಿಂಹಶ್ರೀ' ಎಂದೂ, ಪೇಜಾವರ ಮಠದವರು 'ಶ್ರೀರಾಮವಿಠಲಶ್ರೀ' ಎಂದೂ, ಫಲಿಮಾರು ಮಠದವರು 'ಶ್ರೀರಾಮಶ್ರೀ' ಎಂದೂ, ಅದಮಾರು ಮಠದವರು 'ಶ್ರೀಕೃಷ್ಣಶ್ರೀ' ಎಂದೂ ಚಿಹ್ನೀಕರಿಸುವರು.

ಪುರಪ್ರವೇಶ: ಪರ್ಯಾಯ ಕುಳಿತುಕೊಳ್ಳುವ ಶ್ರೀಗಳವರು ಪರ್ಯಾಯದ ಎರಡು ತಿಂಗಳು ಪೂರ್ವದಲ್ಲಿಯೇ ತೀರ್ಥಕ್ಷೇತ್ರಗಳ ಸಂದರ್ಶನಕ್ಕಾಗಿ ಹೋಗುವರು. ಹಾಗೆ ಹೋದವರು ಪುಣ್ಯಕ್ಷೇತ್ರಗಳನ್ನು ಸಂದರ್ಶಿಸಿ ಜನವರಿ ಮೊದಲ ವಾರದಲ್ಲಿ ಶುಭ ಮುಹೂರ್ತದಲ್ಲಿ ಪುರಪ್ರವೇಶ ಗೈಯುವರು. ಆದಿನ ಸಾಯಂಕಾಲ ಜೋಡುಕಟ್ಟೆ ಎಂಬಲ್ಲಿಂದ ಅಥವಾ ಕಡಿಯಾಳಿಯಿಂದ ಬಿರುದಾವಲಿಗಳೊಡನೆ ತಮ್ಮ ಪಟ್ಟದ ದೇವರನ್ನು ತೆರಳಿಸಿಕೊಂಡು ರಥಬೀದಿಗೆ ಆಗಮಿಸಿ ಚಂದ್ರಮೌಳೀಶ್ವರ, ಅನಂತಾಸನ, ಶ್ರೀಕೃಷ್ಣಮಠಗಳಿಗೆ ತೆರಳಿ ದೇವತಾಸಂದರ್ಶನ ಗೈದು ತಮ್ಮ ಮಠವನ್ನು ಪ್ರವೇಶಿಸುತ್ತಾರೆ. ಪರ್ಯಾಯ ಮಠವು ಮನೋಹರವಾಗಿ ಸಿಂಗರಿಸಲ್ಪಡುವುದು.

ಪರ್ಯಾಯಪೀಠವನ್ನು ಏರುವ ಶ್ರೀಪಾದಂಗಳವರನ್ನು ಅವರ ಪಟ್ಟದ ದೇವರೊಂದಿಗೆ ಇತರ ಮಠಾಧೀಶರು ಬಿರುದಾವಲಿಗಳೊಡನೆ ಅತ್ಯಂತ ಸಂಭ್ರಮದಲ್ಲಿ ತಂತಮ್ಮ ಮಠಗಳಿಗೆ ಆಮಂತ್ರಿಸಿ ಔತಣ-ಪಾದಪ್ರಕ್ಷಾಳನಾದಿಗಳಿಂದ ಸತ್ಕರಿಸಿ ಮುಂದಿನ ಪರ್ಯಾಯದ ಅವಧಿಯಲ್ಲಿ ತಮ್ಮ ಸಹಕಾರವನ್ನು ಪ್ರದರ್ಶಿಸುವರು. ಇತರ ಭಕ್ತರಸೇಕರು ಪರ್ಯಾಯ ಶ್ರೀಗಳವರನ್ನು ಪಾದಪೂಜಾದಿಗಳಿಂದ ಸತ್ಕರಿಸುವರು. ಮಠದ ಹಿತೈಷಿಗಳೂ ಭಕ್ತರೂ ಅಕ್ಕಿ, ತರಕಾರಿ, ಫಲ ಮುಂತಾದುವುಗಳನ್ನು ಸಾವಿರಾರು ಜನರಿಂದ ಸಾಲುಸಾಲಾಗಿ ಹೊರಿಸಿಕೊಂಡು ಬಿರುದಾವಲಿಗಳ ವೈಭವದೊಡನೆ ಪರ್ಯಾಯ ಕೂತುಕೊಳ್ಳುವ ಮಠಕ್ಕೆ (ಶ್ರೀಕೃಷ್ಣಮಠಕ್ಕೆ) ತಂದೊಪ್ಪಿಸುವುದಿದೆ. ಇಡನ್ನು 'ಹೊರೆ ಕಟ್ಟುವುದು' ಎನ್ನುತ್ತಾರೆ. ಪರ್ಯಾಯ ಕುಳಿತುಕೊಳ್ಳುವ ಶ್ರೀಗಳವರು ಪರ್ಯಾಯೋತ್ಸವದ ದಿನದ ಬಗ್ಗೆ, ಅಕ್ಕಿ ಜಿನಸು ಮೊದಲಾದ ಪೂಜಾಸಾಹಿತ್ಯವನ್ನು ಬಿರುದಾವಲಿಗಳೊಡನೆ ಇತರ ಮಠಗಳಿಗೆ ಕಳಿಸುವರು. ಪರ್ಯಾಯ ಏಳುವ ಶ್ರೀಗಳವರೂ ಹೀಗೆ ಪರ್ಯಾಯ ಏಳುವ ದಿನದ ಬಗ್ಗೆ ಇತರ ಶ್ರೀಗಳವರಿಗೆ ಕಳಿಸುವರು. ಇದನ್ನು 'ಒಲಿಪೆ ಕಳಿಸುವುದು' ಎನ್ನುತ್ತಾರೆ.

ಪರ್ಯಾಯ ಕುಳಿತುಕೊಳ್ಳುವ ಶ್ರೀಗಳವರು ಪರ್ಯಾಯದ ಹಿಂದಿನ ದಿನದಲ್ಲಿ ಸಮಸ್ತ ಬಿರುದಾವಲಿಗಳೊಡನೆ ಇತರ ಶ್ರೀಪಾದಂಗಳವರ ಹತ್ತಿರ ತೆರಳಿ ಪರ್ಯಾಯ ಮಹೋತ್ಸವಕ್ಕೆ ಆಮಂತ್ರಣವಿತ್ತು ಎರಡು ವರ್ಷಗಳ ಕಾಲದ ಪರ್ಯಾಯ ಮಹೋತ್ಸವವನ್ನು ಸಾಂಗಗೊಳಿಸಬೇಕೆಂದು ಕೋರುವರು. ಅಂದು ರಾತ್ರೆ ಮರುದಿನದ ಮಹಾಸಂತರ್ಪಣೆಯ ಬಗ್ಗೆ ತರಕಾರಿ ಹಚ್ಚುವದಕ್ಕೆ ಶ್ರೀಗಳವರು ಇತರಶ್ರೀಗಳವರೊಡನೆ ಶ್ರೀಕೃಷ್ಣ, ಮುಖ್ಯಪ್ರಾಣ

ದೇವರ ಸನ್ನಿಧಿಯಲ್ಲಿ ಪ್ರಾರ್ಥನೆ ನಡೆಸುವರು. ಆಮೇಲೆ ಇತರ ಮಠದವರೂ ಪ್ರತ್ಯೇಕ ಪ್ರತ್ಯೇಕವಾಗಿ ಏಕ ಕಾಲದಲ್ಲಿ ತರಕಾರಿ ಹಚ್ಚುವರು.

ಪರ್ಯಾಯ ಮೆರವಣಿಗೆ – ದರ್ಬಾರು: ಪರ್ಯಾಯಪೀಠವನ್ನು ಏರುವ ಶ್ರೀಪಾದಂಗಳವರು ರಾತ್ರಿ ದಂಡತೀರ್ಥವೆಂಬಲ್ಲಿಗೆ ತೆರಳಿ ಮುಂಜಾನೆ ಸ್ನಾನಾಹ್ನಿಕಾದಿಗಳನ್ನು ಪೂರೈಸಿ ತಮ್ಮ ಪಟ್ಟದ ದೇವರೊಡನೆ ಉಡುಪಿಯ ತಾಲೂಕು ಕಛೇರಿಯ ಬಳಿಯಿರುವ ಜೋಡುಕಟ್ಟೆ ಎಂಬಲ್ಲಿಗೆ ಬರುವರು. ಅದೇ ವೇಳೆಗೆ ಸರಿಯಾಗಿ ಪರ್ಯಾಯ ಪಟ್ಟವನ್ನು ಬಿಟ್ಟೇಳುವ ಶ್ರೀಗಳವರನ್ನು ಹೊರತು ಇತರ ಎಲ್ಲಾ ಶ್ರೀಗಳವರೂ ವಾದ್ಯಘೋಷಗಳೊಡನೆ ತಂತಮ್ಮ ಮಠಗಳಿಂದ ಹೊರಟು ಪಾಲಕಿಯಲ್ಲಿ ಕುಳಿತು ಜೋಡುಕಟ್ಟೆಗೆ ಬರುವರು. ಅಲ್ಲಿಂದ ವೈಭವೋಪೇತವಾದ ಸಕಲ ಬಿರುದಾವಳಿಗಳೊಡನೆ ಮೆರವಣಿಗೆ ಹೊರಡುವುದು. ಮೆರವಣಿಗೆಯ ಮುಂಭಾಗದಲ್ಲಿ ಬಂಗಾರದ



ಚಿನ್ನದ ಪಾಲಕಿ ಉತ್ಸವ

ಪಲ್ಲಕಿಯಲ್ಲಿ ಪಟ್ಟದ ದೇವರನ್ನು ತೆರಳಿಸಿಕೊಂಡು ಅದರ ಹಿಂಬದಿಯಲ್ಲಿ ಪರ್ಯಾಯ ಕೂಡ್ರುವ ಶ್ರೀಗಳವರು ಅಲಂಕೃತವಾದ ಮೇನೆಯಲ್ಲಿ ಬರುವರು. ಅವರ ಹಿಂದೆ ಅವರವರ ಆಶ್ರಮಜ್ಯೇಷ್ಠಾನುಸಾರವಾಗಿ ಸಾಲು ಮೇನೆ

ಗಳಲ್ಲಿ ಇತರ ಶ್ರೀಗಳವರೂ ಕುಳಿತು ಬರುವರು. ಮಹಾರಾಜ ವೈಭವೋಪೇತ ವಾದ ಈ ಮೆರವಣಿಗೆಯನ್ನು ನೋಡಲು ರಸ್ತೆಯ ಇಕ್ಕೆಲಗಳಲ್ಲೂ ಅಸಂಖ್ಯಾತ ಜನರು ಸೇರಿರುತ್ತಾರೆ. ಸಾಲುಬೆಡಿಗಳು ಕಿವಿಗಡಚುತ್ತಿರಲು ಮೆರವಣಿಗೆಯು ಅಪೂರ್ವ ವೈಭವದಿಂದ ಕೋಳದಪೇಟೆ – ತೆಂಕುಬೀದಿ ಗಳನ್ನು ಹಾದು ರಥಬೀದಿಗೆ ಬಂದೊಡನೆಯೆ ಎಲ್ಲ ಶ್ರೀಗಳವರು ಪಾಲಕಿ ಗಳಿಂದ ಇಳಿದು ನೆಲದಲ್ಲಿ ಹಾಸಿದ ಹೊಸ ಬಟ್ಟೆಯಲ್ಲಿ ಮೆಲ್ನಡೆಯಿಂದ ಸುತ್ತಾಗಿ ಶ್ರೀಕೃಷ್ಣಮಠದ ಗೋಪುರದ ಇದಿರಿಗೆ ಬರುವರು. ಅಲ್ಲಿ ಕಿಟಿಕಿಯಲ್ಲಿ ದೇವರ ದರ್ಶನಗೈದು ದರ್ಪಣದರ್ಶನ ಮಾಡಿ ನವಗ್ರಹದಾನವನ್ನೀಯುವರು. ತದನಂತರ ಅಲ್ಲಿಂದ ಶ್ರೀಚಂದ್ರಮೌಳೀಶ್ವರ ಮತ್ತು ಅನಂತಾಸನದೇವರು ಗಳನ್ನು ದರ್ಶನಮಾಡಿ ಇತರ ಶ್ರೀಪಾದಂಗಳವರೊಂದಿಗೆ ಶ್ರೀಕೃಷ್ಣಮಠದ ಹೆಬ್ಬಾಗಿಲಿಗೆ ಬರುವರು. ಆಗ ಏಳತಕ್ಕ ಶ್ರೀಪಾದಂಗಳವರೂ ಅಲ್ಲಿಗೆ ಆಗಮಿಸಿ ಪರ್ಯಾಯ ಶ್ರೀಗಳವರಿಗೆ ಹಸ್ತಲಾಘವವಿತ್ತು ಮಧ್ವಸರೋವರಕ್ಕೆ ತೆರಳಿ ಪಾದಪ್ರಕ್ಷಾಳನವಾದ ತರುವಾಯ ಶ್ರೀಕೃಷ್ಣಮಠದ ಒಳಕ್ಕೆ ಕರೆದುತರುವರು. ಪರ್ಯಾಯ ಪಟ್ಟವೇರುವ ಶ್ರೀಗಳವರು ಮುಖಮಂಟಪದಲ್ಲಿ ತಮ್ಮ ಪಟ್ಟದ ದೇವರನ್ನಿಟ್ಟು ಪೂಜಿಸಿ ಶ್ರೀಮುಖ್ಯಪ್ರಾಣನನ್ನು ಪ್ರಾರ್ಥಿಸಿ ಏಳುವ ಶ್ರೀಪಾದಂಗಳವರಿಂದ ಗಂಧಾದ್ಯುಪಚಾರಗಳನ್ನು ಸ್ವೀಕರಿಸುವರು; ಮತ್ತು ಸರ್ವಜ್ಞಸಿಂಹಾಸನವನ್ನೇರಿ, ಎಲ್ಲಾ ಶ್ರೀಪಾದಂಗಳವರೊಡನೆ ಬಡಗುಮಾಳಿ ಗೆಯ ಸಭಾಮಂಟಪಕ್ಕೆ ಬಿಜಯಮಾಡುವರು. ಅಲ್ಲಿ ಅರಳು ಗದ್ದುಗೆಯನ್ನು ಏರಿ ವಸಂತಮಹಲಿನ ಸಭೆಗೆ ಬಂದು ಇತರ ಶ್ರೀಗಳವರೊಡನೆ ವೇದಿಕೆಯಲ್ಲಿ ಆಸೀನರಾಗುವರು. ಸಭೆಯಲ್ಲಿ ಆಮಂತ್ರಿತರಾದ ಸಮಸ್ತ ವೈದಿಕ – ಲೌಕಿಕ ಸದ್ಗೃಹಸ್ಥರು ಸಮ್ಮಿಳಿತರಾಗಿರುವರು. ಒಳಗೆ ಪ್ರವೇಶಿಸಲು ಮಠದ ಕಡೆ ಯಿಂದ ಅಪ್ಪಣೆಚೀಟಿನ ವ್ಯವಸ್ಥೆಯಿರುವುದು. ಈ ಸಭೆಯಲ್ಲಿ ಪ್ರಾರ್ಥನೆ, ಮಾನಪತ್ರಾರ್ಪಣೆ, ಕವಿತಾವಾಚನ, ಭಾಷಣ ಮೊದಲಾದವು ನಡೆಯುವವು. ಪರ್ಯಾಯ ಶ್ರೀಪಾದಂಗಳವರು ಇತರ ಶ್ರೀಪಾದಂಗಳವರನ್ನೆಲ್ಲ ಗಂಧಾ ದ್ಯುಪಚಾರಗಳಿಂದ ಸತ್ಕರಿಸುವರು. ಇತರ ಶ್ರೀಗಳವರೂ ಮಹಾಜನರೂ ಪರ್ಯಾಯ ಶ್ರೀಗಳವರಿಗೆ ಪಟ್ಟಕಾಣಿಕೆಯನ್ನು ಒಪ್ಪಿಸುವರು. ಇದೇ ಸಭೆ ಯಲ್ಲಿ ಮುಂದಿನ ಎರಡು ವರ್ಷಗಳಿಗೆ ಶ್ರೀಕೃಷ್ಣಮಠದ ಅಧಿಕಾರಿಗಳ ಯಾದಿ ಯನ್ನು ಓದುವರು. ಸಭಿಕರಿಗೆಲ್ಲ ಫಲಪುಷ್ಪಾದಿಗಳನ್ನು ವಿತರಣೆ ಮಾಡುವರು. ಸಭಾ ಕಾರ್ಯಕ್ರಮವು ಮುಗಿದ ಬಳಿಕ ಅಲ್ಲಿಂದ ಶ್ರೀಕೃಷ್ಣಮಠದ ಒಳಕ್ಕೆ ಬಂದು ಶ್ರೀಸರ್ವಜ್ಞಾಚಾರ್ಯರ ಸಮ್ಮುಖದಲ್ಲಿ ಪರ್ಯಾಯ ಶ್ರೀಗಳವರು

ಏಳುವ ಶ್ರೀಗಳವರಿಂದ ಅಕ್ಷಯ ಪಾತ್ರಾದಿಗಳನ್ನು ಸ್ವೀಕರಿಸುವರು. ಆಮೇಲೆ ಮಿಕ್ಕ ಶ್ರೀಗಳವರು ಪರ್ಯಾಯ ಪೀಠವನ್ನು ಬಿಟ್ಟಿದ್ದ ಶ್ರೀಗಳ ವರನ್ನು ಅವರ ಪಟ್ಟದೇವರ ಸಹಿತ ಬಿರುದಾವಲಿಗಳೊಡನೆ ಅವರ ಮಠಕ್ಕೆ ಕರೆದೊಯ್ಯುವರು. ಅಲ್ಲಿ ಇತರ ಶ್ರೀಗಳವರಿಗೆ ಗಂಧಾದ್ಯುಪಚಾರ ಗಳು ಜರಗುವವು.



ಪರ್ಯಾಯದ ಅಡುಗೆ ಮತ್ತು ಅನ್ನದ ರಾಶಿ.

ಆಮೇಲೆ ಕ್ರಮದಂತೆ ಶ್ರೀಕೃಷ್ಣನಿಗೆ ಪೂಜಾದಿಗಳು ನಡೆದು ಮಧ್ಯಾಹ್ನ ಮಹಾಸಂತರ್ಪಣೆ ನಡೆಯುವುದು. ಬಡಬಗ್ಗರಿಗೆ ಅನ್ನದಾನ ನಡೆಯುವುದು. ರಾತ್ರೆ ಪೂಜಾನಂತರ ತೆಪ್ಪೋತ್ಸವ, ಬ್ರಹ್ಮರಥೋತ್ಸವಗಳು ಜರಗುವುವು.

ಪರ್ಯಾಯದ ಮೆರವಣಿಗೆಯೂ ದರ್ಬಾರು ಮಹೋತ್ಸವವೂ ಅತ್ಯಂತ ಪ್ರೇಕ್ಷಣೀಯಗಳಾಗಿರುವವು. ಇದನ್ನು ನೋಡಲು ನಾಡಿನ ನಾನಾ ಮೂಲೆಗಳಿಂದ ಜನರು ಕಿಕ್ಕಿರಿದು ಸೇರುವರು. ಎಲ್ಲ ವ್ಯವಸ್ಥೆಗಳೂ ಅತ್ಯಂತ ಕ್ರಮಬದ್ಧವಾಗಿ ನಾಜೂಕಾಗಿ ನಡೆಯುವವು. ಈ ಪರ್ಯಾಯ ಜಾತ್ರೆಯು ದಕ್ಷಿಣ ಭಾರತದಲ್ಲಿ ಪ್ರಸಿದ್ಧವಾದ ಜಾತ್ರೆಗಳಲ್ಲೊಂದೆಂದು ಹೆಸರು ಪಡೆದಿದೆ.

೧೩. ಶ್ರೀಮನ್ಮಧ್ವಾಚಾರ್ಯರ ಮೂಲಮಠಗಳಾದ ಅಷ್ಟಮಠಗಳು

ಶ್ರೀಮದಾಚಾರ್ಯರು ತನ್ನ ಮತಪ್ರಚಾರ ಮತ್ತು ಶ್ರೀಕೃಷ್ಣಪೂಜೆಗಳಿಗಾಗಿ ಎಂಟು ಮಂದಿ ಬಾಲಯತಿಗಳಿಗೆ ಆಶ್ರಮವಿತ್ತು ತನ್ನ ಮೂಲಪೀಠಗಳನ್ನು ಸ್ಥಾಪಿಸಿದ ವಿಚಾರ ಹಿಂದೆಯೆ ಬಂದಿದೆ. ಈ ಎಂಟೂ ಮಠಗಳಿಗೆ ಶ್ರೀಮದಾಚಾರ್ಯರು ಸ್ವಕರಾರ್ಚಿತ ಭಗವದ್ವಿಗ್ರಹಗಳನ್ನು ಆರಾಧ್ಯದೇವತೆಗಳನ್ನಾಗಿ ಅನುಗ್ರಹಿಸಿರುವರು. ಆ ಮೂಲ ಅಷ್ಟಮಠಗಳ, ಶ್ರೀಮದಾಚಾರ್ಯರು ಕೊಟ್ಟ ಉಪಾಸ್ಯ ಮೂರ್ತಿಗಳ, ಮೂಲ ಯತಿಗಳ, ಹಾಗೂ ಆ ಪರಂಪರೆಯಲ್ಲಿ ಅತ್ಯಂತ ಖ್ಯಾತಿವೆತ್ತ ಕೆಲವು ಪರಮಹಂಸರ, ಕುರಿತು ಈ ಪ್ರಕರಣದಲ್ಲಿ ಹೇಳಲಾಗುವುದು. ಅಷ್ಟಮಠದ ಗುರುಪೀಠಿಗೆಯಲ್ಲಿ ಸಂಸ್ಥಾನವನ್ನು ಆಳಿದ ಎಲ್ಲ ಪರಮಹಂಸರೂ ಮಹಾ ವಿದ್ವಾಂಸರೂ ತಪಸ್ವಿಗಳೂ ಆಗಿರುವರಾದರೂ ಇಲ್ಲಿ ಕೆಲವರುಗಳನ್ನೆ ಉಲ್ಲೇಖಿಸಲಾಗಿದೆ.

ಶ್ರೀಮದಾಚಾರ್ಯರ ಪೂರ್ವಪರಂಪರೆಯು ಹಂಸರೂಪಿಯಾದ ಶ್ರೀಮನ್ನಾರಾಯಣನಿಂದ ಪ್ರಾರಂಭವಾಗಿ ಬ್ರಹ್ಮ–ಸನಕ–ದೂರ್ವಾಸಾದಿಗಳನ್ನೊಳಗೊಂಡು ಸಾಗಿ ಬಂದಿದೆಯೆಂಬುದೂ ಸನಾತನವಾದ ಈ ಪರಂಪರೆಯ ಅಚ್ಯುತಪ್ರೇಕ್ಷತೀರ್ಥರವರಿಂದ ಶ್ರೀಮದಾಚಾರ್ಯರು ಸನ್ನ್ಯಸ್ತರಾದರು ಎಂಬುದೂ ಪ್ರಸಿದ್ಧವಾಗಿದೆ.




ಶ್ರೀ ಕೃಷ್ಣಾಪುರ ಮಠದ ಶ್ರೀ ಕಾಳೀಯಮರ್ದನ ಕೃಷ್ಣದೇವರು.

೧. ಶ್ರೀಕೃಷ್ಣಾಪುರ ಮಠ: ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀ ಜನಾರ್ದನತೀರ್ಥರವರು ಈ ಮಠದ ಮೂಲ ಯತಿಗಳು. ಆಚಾರ್ಯರು ಕರುಣಿಸಿದ ಪಟ್ಟದ ದೇವರು ಶ್ರೀ ದ್ವಿಭುಜ ಕಾಳೀಯಮರ್ದನ ಕೃಷ್ಣದೇವರು. ಶ್ರೀಜನಾರ್ದನತೀರ್ಥರು ಶ್ರೀನರಸಿಂಹೋಪಾಸಕರಾದುದರಿಂದ ಇವರ ಪ್ರಾರ್ಥನೆಯಂತೆ ಶ್ರೀಮದಾಚಾರ್ಯರು ಶ್ರೀ ನರಸಿಂಹದೇವರನ್ನೂ ಇವರಿಗೆ ದಯಪಾಲಿಸಿದ್ದರು. ಈ ಪೀಳಿಗೆಯಲ್ಲಿ ಎರಡನೆಯರಾದ ಶ್ರೀ ವತ್ಸಾಂಕ ತೀರ್ಥರು ನೇರಂಬಳ್ಳಿಯಲ್ಲಿ ಮಠವನ್ನು ಕಟ್ಟಿಸಿ ಅಲ್ಲಿ ಸ್ವಪ್ನಸೂಚನೆಯಂತೆ ತನಗೆ ದೊರೆತ ಶ್ರೀ ಗೋಪೀನಾಥದೇವರನ್ನು ಪ್ರತಿಷ್ಠಿಸಿದರು. ಇಪ್ಪತ್ತಾರನೆಯವರಾದ ಶ್ರೀ ವಿದ್ಯಾಮೂರ್ತಿತೀರ್ಥರು ಕೃಷ್ಣಾಪುರದಲ್ಲಿ ಮಠವನ್ನು ಕಟ್ಟಿಸಿ ಅಲ್ಲಿ ಶ್ರೀ ರಾಮದೇವರನ್ನಿಟ್ಟು ಶ್ರೀಮುಖ್ಯಪ್ರಾಣದೇವರನ್ನು ಪ್ರತಿಷ್ಠಿಸಿದರು. ಮೂವತ್ತನೆಯವರಾದ ಶ್ರೀವಿದ್ಯಾಸಮುದ್ರತೀರ್ಥರು ಶ್ರೀಕೃಷ್ಣದೇವರಿಗೆ ಬ್ರಹ್ಮರಥವನ್ನು ಕಟ್ಟಿಸಿ ಸಮರ್ಪಿಸಿರುವರು. ಇವರ ಶಿಷ್ಯರಾದ ಶ್ರೀವಿದ್ಯಾಪತಿ ತೀರ್ಥರು ಕಾಶಿಯ ವಿದ್ಯಾಪೀಠವನ್ನು ಏರಿ ದಿಗ್ದಂತಿಪಂಡಿತರನ್ನೆಲ್ಲಾ ಗೆದ್ದು ಮಾನ್ಯರಾಗಿದ್ದಾರೆ. ಪಾಡಿಗಾರುಮಠದ ನಿರ್ಮಾಣವು ಇವರ ಕಾಲದಲ್ಲಾಯಿತು. ಇವರು ಚಿಕ್ಕ



ಶ್ರೀನರಸಿಂಹದೇವರು.

ಪಟ್ಟದಲ್ಲಿಯೇ ಹರಿಪದವನ್ನೈದಿದರು. ಮೂವತ್ತೊಂದನೆ ಯವರಾದ ಶ್ರೀ ವಿದ್ಯಾಧೀಶತೀರ್ಥರು ಘನ ವಿದ್ವಾಂಸರೂ ಮಹಾ ತಪಸ್ವಿಗಳೂ ಆಗಿದ್ದರು. ಆಗಿನ ಪೇಜಾವರ ಮಠದ ವಿಶ್ವರಾಜತೀರ್ಥರು, ಶೀರೂರು ಮಠದ ಲಕ್ಷ್ಮೀ ವಲ್ಲಭತೀರ್ಥರು, ಸೋದೆಮಠದ ವಿಶ್ವಾಧೀಶತೀರ್ಥರು ಇವರ ವಿದ್ಯಾಶಿಷ್ಯರಾಗಿದ್ದುದಲ್ಲದೆ ಅನೇಕರು ಶ್ರೀಗಳವರಿಂದ ವಿದ್ಯೋಪದೇಶ ಪಡೆದು ಪ್ರಖ್ಯಾತ ಪಂಡಿತರೆನಿಸಿದ್ದಾರೆ. ಇವರು ತಮ್ಮ ಪ್ರಯಾಗದ ಮಠದಲ್ಲಿ ಮತ್ತು ದಂಡತೀರ್ಥಮಠದಲ್ಲಿ ಶ್ರೀ ಮುಖ್ಯಪ್ರಾಣದೇವರನ್ನು ಪ್ರತಿಷ್ಠಿಸಿದರು. ತಮ್ಮ ಮಠದ ದೇವರ ಪೂಜೆಗಾಗಿ ಅತ್ಯಂತ ಅಮೂಲ್ಯವಾದ ಚಿನ್ನದ ಮಂಟಪವನ್ನು ನಿರ್ಮಿಸಿರುವುದಲ್ಲದೆ ಶ್ರೀಕೃಷ್ಣಾಪುರದಲ್ಲಿಯ ಮಠವನ್ನು ಜೀರ್ಣೋದ್ಧಾರ ಗೊಳಿಸಿದರು. ಮೂವತ್ತೆರಡನೆಯವರಾದ ಶ್ರೀವಿದ್ಯಾಪೂರ್ಣತೀರ್ಥರು ಶ್ರೀಕೃಷ್ಣದೇವರಿಗೆ ಭಕ್ತಜನರ ನೆರವಿನಿಂದ ಚಿನ್ನದಪಾಲಕಿಯನ್ನು ಮಾಡಿಸಿ ಸಮರ್ಪಿಸಿದರು. ಶ್ರೀಕೃಷ್ಣಮಠದ ಸಿಂಹಾಸನ, ಸೂರ್ಯಶಾಲೆ ಚಂದ್ರಶಾಲೆಗಳನ್ನು ಕಟ್ಟಿಸಿದುದಲ್ಲದೆ ಹೊರಬದಿಯ ಗೋಪುರವನ್ನೂ



ಚಿನ್ನದ ಮಂಟಪ

ಮಾಡಿಸಿದರು. ಶ್ರೀಕಷ್ಣಮಠದ ಗರ್ಭಗೃಹದ ಮೇಲ್ಭಾಗದಲ್ಲಿ ಕಂಗೊಳಿಸುವ ದಶಾವತಾರದ ಪ್ರತಿಮೆಗಳನ್ನು ನಿರ್ಮಿಸಿದ್ದಲ್ಲದೆ ಅದಮಾರುಮಠದ ಶ್ರೀವಿಬುಧಪ್ರಿಯತೀರ್ಥ ಶ್ರೀಪಾದಂಗಳವರು ಅರ್ಧ ಕಟ್ಟಿಸಿದ್ದ **ಚೌಕಿಯು ಕಟ್ಟಡ**ವನ್ನು ಪೂರ್ತಿಗೊಳಿಸಿದರು. ಹಾಗೆಯೆ ಅದಕ್ಕೆ ಹೊಂದಿರುವ **ಪಾಕಶಾಲೆ**ಯೆ ಮೊದಲಾದುವನ್ನು ಕಟ್ಟಿಸಿದುದಲ್ಲದೆ ಚೌಕಿಯು ಕಲ್ಲು ಕಟ್ಟಿಸಿದ ಬಾವಿಯನ್ನೂ ನಿರ್ಮಿಸಿದರು. ಪಾಡಿಗಾರು ದೇವಸ್ಥಾನ, ಮಠ, ಪೇಜಾವರದಲ್ಲಿರುವ ತಮ್ಮ ಮಠಗಳನ್ನು ಇವರು ಜೀರ್ಣೋದ್ಧಾರ ಮಾಡಿಸಿದರು. ಕೃಷ್ಣಾಪುರ ಗ್ರಾಮದ ಮಠಕ್ಕೆ ಮತ್ತು ಪಾಡಿಗಾರು ಮಠಕ್ಕೆ ಹೋಗಲು ರಸ್ತೆಗಳನ್ನು



ಶ್ರೀವಿದ್ಯಾರತ್ನತೀರ್ಥರು.



ಉಡುಪಿ ಶ್ರೀಕೃಷ್ಣಾಪುರಮಠ.

ನಿರ್ಮಿಸಿರುವರು. ಮೂವತ್ತಮೂರನೆಯವರಾದ ಶ್ರೀವಿದ್ಯಾರತ್ನತೀರ್ಥಶ್ರೀಪಾದಂಗಳವರು ಈಗ ಸಂಸ್ಥಾನವನ್ನು ಆಳುತ್ತಿದ್ದಾರೆ. ಇವರು ೧೯೨೦ನೆಯ ಇಸವಿ ರೌದ್ರಿ ಸಂ।ರದ ವೈಶಾಖ ಬ. ೩೦ರ ಶುಭದಿನದಲ್ಲಿ ಜನ್ಮತಾಳಿದರು. ೧೯೩೫ನೆಯ ಇಸವಿಯ ಭಾವ ಸಂವತ್ಸರದ ಫಾಲ್ಗುಣ ಬ. ೧೦ರಂದು ಸನ್ಯಸ್ತರಾದರು. ಇವರು ಉಡುಪಿಯ ಮಠವನ್ನು ಜೀರ್ಣೋದ್ಧಾರಗೊಳಿಸಿದರು. ಸಾಂಸ್ಕೃತಿಕ-ಧಾರ್ಮಿಕ ಕಾರ್ಯಕ್ರಮಗಳಿಗೆ ಅನುಕೂಲವಾಗುವಂತೆ ಮಠದ ಪಡುಬದಿಯ ಅಂಗನದಲ್ಲಿ "ಶ್ರೀಕೃಷ್ಣ ಸಭಾಮಂದಿರ"ವೆಂಬ ದಿವ್ಯವಾದ ಸಭಾಮಂದಿರವನ್ನು ನಿರ್ಮಿಸಿರುವರು. ಇವರು ಪ್ರಥಮ ಪರ್ಯಾಯ ಕಾಲದಲ್ಲಿ (೧೯೪೨ರಲ್ಲಿ) 'ಶ್ರೀಕೃಷ್ಣ ಪರ್ಯಾಯ ಪ್ರಕಾಶಿನೀ' ಎಂಬ ಧಾರ್ಮಿಕ ಮಾಸಪತ್ರಿಕೆಯನ್ನು ಹೊರಡಿಸುತ್ತಿದ್ದು ಅದು ಈಗಲೂ 'ಪ್ರಕಾಶಿನೀ' ಎಂಬ ಹೆಸರಿನಿಂದ ಪ್ರಕಟವಾಗುತ್ತಿದೆ.


೨. ಶ್ರೀ ಪುತ್ತಿಗೆ ಮಠ: ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀ ಉಪೇಂದ್ರತೀರ್ಥರು ಈ ಮಠದ ಮೂಲ ಯತಿಗಳು. ಆಚಾರ್ಯರು ಕರುಣಿಸಿದ ಪಟ್ಟದ ದೇವರು ಶ್ರೀವಿಠಲದೇವರು. ಈ ಪೀಳಿಗೆಯಲ್ಲಿ ಇಪ್ಪತ್ತಮೂರನೆಯವರಾದ ಶ್ರೀಭುವನೇಂದ್ರತೀರ್ಥರು ಶ್ರೀ ಅನಂತಾಸನದೇವಾಲಯದ ಸುತ್ತು ಪೌಳಿ, ಹೆಬ್ಬಾಗಿಲುಗಳನ್ನು ಜೀರ್ಣೋದ್ಧಾರಗೊಳಿಸಿದರು. ಇಪ್ಪತ್ತೈದನೆಯವರಾದ ಶ್ರೀಮತ್ಸುಧೀಂದ್ರತೀರ್ಥಶ್ರೀಪಾದಂಗಳವರು ಶ್ರೀ ಕೃಷ್ಣಾಪುರಮಠದ ಶ್ರೀಮದ್ವಿದ್ಯಾಧೀಶತೀರ್ಥರಿಂದ ಸನ್ಯಸ್ತರಾದರು. ಇವರ ಶತಮಾನೋತ್ಸವವನ್ನು ಉಡುಪಿಯಲ್ಲಿ ಭಕ್ತಜನರು ತಾ. ೨೪-೩-೧೯೫೭ರಲ್ಲಿ ಅತ್ಯಂತ ವೈಭವದಿಂದ ಜರುಗಿಸಿದರು. ಇಪ್ಪತ್ತಾರನೆಯವರಾದ ಶ್ರೀ ಸುಜ್ಞಾನೇಂದ್ರತೀರ್ಥಶ್ರೀಪಾದಂಗಳವರು ಈಗ ಸಂಸ್ಥಾನವನ್ನು ಆಳುತ್ತಿರುವರು.

೩. ಶ್ರೀ ಶೀರೂರು ಮಠ: ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀವಾಮನತೀರ್ಥರು ಈ ಮಠದ ಮೂಲ ಯತಿಗಳು. ಆಚಾರ್ಯರು ಕರುಣಿಸಿದ ಪಟ್ಟದ ದೇವರು ಶ್ರೀವಿಠಲಮೂರ್ತಿ. ಈ ಪೀಳಿಗೆಯಲ್ಲಿ ಇಪ್ಪತ್ತೇಳನೆಯವರಾದ ಶ್ರೀ ಲಕ್ಷ್ಮೀಸಮುದ್ರತೀರ್ಥರು ಶ್ರೀ ಕೃಷ್ಣಮಠದ ಮಧ್ಯಮ ರಥವನ್ನು ಕಟ್ಟಿಸಿ ಶ್ರೀಕೃಷ್ಣನಿಗೊಪ್ಪಿಸಿರುವರಲ್ಲದೆ ಶ್ರೀಕೃಷ್ಣಮಠದ ಭೋಜನಶಾಲೆಯನ್ನು ಶಿಲಾಮಯವಾಗಿ ಕಟ್ಟಿಸಿ ಅಲ್ಲಿ ಪ್ರಾಣದೇವರ



ಶ್ರೀವಿಠಲದೇವರು.

ಪ್ರತಿಷ್ಠೆ ಮಾಡಿರುವರು. ಇಪ್ಪತ್ತೆಂಟನೆಯವರಾದ ಶ್ರೀಲಕ್ಷ್ಮೀಂದ್ರತೀರ್ಥರು ಉಡುಪಿ ಮಠವನ್ನೂ, ಶ್ರೀಕೃಷ್ಣಮಠದ ವಸಂತಮಹಲನ್ನೂ ಜೀರ್ಣೋದ್ಧಾರ ಗೊಳಿಸಿದರು. ಇಪ್ಪತ್ತೊಂಭತ್ತನೆಯವರಾದ ಶ್ರೀಲಕ್ಷ್ಮೀಮನೋಜ್ಞತೀರ್ಥ ಶ್ರೀಪಾದಂಗಳವರು ಈಗ ಸಂಸ್ಥಾನವನ್ನು ಆಳುತ್ತಿರುವರು. ೧೯೪೫ನೆಯ ಇಸವಿ ಪಾರ್ಥಿವ ಸಂ।ರದ ಮಾರ್ಗಶಿರ ಶುದ್ಧ ೩ರ ಶುಭದಿನದಲ್ಲಿ ಇವರು ಜನ್ಮತಾಳಿದರು. ೧೯೬೩ನೆಯ ಇಸವಿಯ ಶುಭಕೃತು ಸಂ।ರದ ಮಾಘ ಬಹುಳ ೧೦ರಂದು ಸನ್ನ್ಯಸ್ಥರಾದರು. ಶ್ರೀಕೃಷ್ಣಮಠಕ್ಕೆ ಹಿಂದಿನ ಕಾಣೇರು ಶ್ರೀಗಳವರು ಮಾಡಿಸಿದ ಚಿಕ್ಕ ರಥವು ಜೀರ್ಣವಾಗಲು ಹೊಸತಾಗಿ ನಿರ್ಮಿಸಿ ದೇವರಿಗೊಪ್ಪಿಸಿರುವರು.



ಶ್ರೀಲಕ್ಷ್ಮೀಮನೋಜ್ಞ ತೀರ್ಥರು.

೪. ಶ್ರೀಸೋದೆ ಮಠ: ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀವಿಷ್ಣುತೀರ್ಥರವರು ಈ ಮಠದ ಮೂಲ ಯತಿಗಳು. ಆಚಾರ್ಯರು ಕರುಣಿಸಿದ ಪಟ್ಟದ ದೇವರು ಶ್ರೀವರಾಹದೇವರು. ಶ್ರೀವಿಷ್ಣುತೀರ್ಥರು ಶ್ರೀಮದಾಚಾರ್ಯರ ಪೂರ್ವಾಶ್ರಮದ ಸಹೋದರರು. ಇವರು ಬಹು ದೊಡ್ಡ ತಪಸ್ವಿಗಳೂ ಇಚ್ಛಾಮರಣಿಗಳೂ ಆಗಿರುವರು. ಇವರು ಇಂದಿಗೂ ಕುಮಾರಾದ್ರಿಯಲ್ಲಿ ತಪೋನಿಷ್ಠರಾಗಿರುವರೆಂದೂ ಶ್ರೀಮದಾಚಾರ್ಯರ ಸನ್ಮತಕ್ಕೆ ಹ್ರಾಸವೊದಗಿದಾಗ ಬಂದು ಕಡ್ತಿಲ(ಸೇತುತಿಲ)ಕ್ಷೇತ್ರದಲ್ಲಿ ಶ್ರೀಮದಾಚಾರ್ಯರು ತಾಮ್ರಶಾಸನರೂಪವಾಗಿ ಸ್ಥಾಪಿಸಿರುವ ಗ್ರಂಥಗಳನ್ನು ತೆಗೆದು ಮತಪ್ರಚಾರವನ್ನು ಮಾಡುವರೆಂದೂ ಶ್ರೀಹೃಷೀಕೇಶತೀರ್ಥರು ತಮ್ಮ ಸಂಪ್ರದಾಯಪದ್ಧತಿ ಎಂಬ ಗ್ರಂಥದಲ್ಲಿ ಹೇಳಿರುತ್ತಾರೆ. ಸುಬ್ರಹ್ಮಣ್ಯ ಮಠವನ್ನು ಇವರೇ ಸಂಸ್ಥಾಪಿಸಿದರು. ಈ ಪೀಳಿಗೆಯಲ್ಲಿ ಹದಿನೆಂಟನೆಯವರಾದ ಶ್ರೀಮದ್ವಾದಿರಾಜಗುರುಸಾರ್ವಭೌಮರವರು ಸಕಲಶಾಸ್ತ್ರ ವಿಶಾರದರೂ, ಶಾಪಾನುಗ್ರಹದಕ್ಷರೂ ಆಗಿದ್ದರು. ದ್ವೈತದರ್ಶನದ ಪ್ರಚಾರ ಮಾಡುತ್ತಾ ಇವರು ಭಾರತದ ತೀರ್ಥಕ್ಷೇತ್ರಗಳನ್ನೆಲ್ಲಾ ಸಂದರ್ಶಿಸಿದರು. ಈ ಮಹಾಮಹಿಮರ ತಪೋವೈಭವವನ್ನು ಅರಿತು ವಿಜಯನಗರದ ಅರಸರುಗಳೂ ಆಶ್ರಯ ಪಡೆದು ಧನ್ಯರಾದರೆಂದು ಚರಿತ್ರೆಯಿಂದ ತಿಳಿದುಬರುತ್ತದೆ. ಇವರು ಸುಧಾಟಿಪ್ಪಣಿ, ಮಹಾಭಾರತ ಟೀಕಾ (ಲಕ್ಷಾಭರಣ), ಯುಕ್ತಿಮಲ್ಲಿಕಾ. ತೀರ್ಥಪ್ರಬಂಧ, ರುಕ್ಮಿಣೀಶವಿಜಯ ಮುಂತಾದ ನೂರಾರು ದಾರ್ಶನಿಕ ಹಾಗೂ ಕಾವ್ಯ ಗ್ರಂಥಗಳನ್ನು ರಚಿಸಿರುವರು. ಕನ್ನಡದಲ್ಲಿಯೂ ಹಲವು ದೇವರನಾಮಗಳನ್ನೂ ರಚಿಸಿರುವರು. ಸೋದೆಯ ಅರಸನಿಗೆ ಬಂದೊದಗಿದ



ಶ್ರೀವರಾಹದೇವರು.



ಶ್ರೀಹಯಗ್ರೀವದೇವರು.

ಆಪತ್ತನ್ನು ಪರಿಹರಿಸಿದುದರಿಂದ ಆ ದೊರೆಯು ಗುರುರಾಜರಿಗೆ ಸೋದಾ ಗ್ರಾಮದಲ್ಲಿ ಹೇರಳ ಉಂಬಳಿಯನ್ನಿತ್ತನು. ಅಲ್ಲಿಯೆ ಇವರು ದೇವಾಲಯುವನ್ನು ನಿರ್ಮಿಸಿ ಶ್ರೀ ತ್ರಿವಿಕ್ರಮದೇವರನ್ನು ಪ್ರತಿಷ್ಠಿಸಿದರು. ಸೋದೆಯ ಅರಸನು ಇವರಿಗೆ ಸಿಂಹಾಸನ, ಕಿರೀಟ ಮೊದಲಾದ ರಾಜ ಚಿಹ್ನೆ ಗಳನ್ನಿತ್ತು ಸನ್ಮಾನಿಸಿದ್ದು, ಇವುಗಳು ಇಂದಿಗೂ ಸೋದೆಯಲ್ಲಿವೆ. ಇವರು ಋಜುಗಣ ಶ್ರೇಷ್ಠರೆಂದು ಪ್ರಖ್ಯಾತರಾಗಿದ್ದು ಶ್ರೀ ಹಯಗ್ರೀವದೇವರ ಉಪಾಸಕರಾಗಿದ್ದರು. ಇವರ ಉಪಾಸ್ಯ ಮೂರ್ತಿಯಾದ ಹಯಗ್ರೀವದೇವರು ಸೋದೆ ಮಠದಲ್ಲಿರುವರು. ಶ್ರೀಮದ್ವಾದಿರಾಜರು ತಮ್ಮ ಜೀವಿತಾವಧಿಯಲ್ಲಿ ಅನೇಕ ಅಮಾನುಷ ಲೀಲೆಗಳನ್ನು ತೋರಿ ಭಕ್ತ ಜನರನ್ನು ಉದ್ಧರಿಸುತ್ತಿದ್ದು



ಶ್ರೀವಿಶ್ವೋತ್ತಮತೀರ್ಥರು.

ತನ್ನ ೧೨೦ನೇ ವಯಸ್ಸಿನಲ್ಲಿ ಸೋದೆಯಲ್ಲಿ ವೃಂದಾವನವಾಸಿಗಳಾದರು. ಶ್ರೀ ಗುರುಸಾರ್ವಭೌಮರ ವೃಂದಾವನವು ಭಕ್ತರ ಸಕಲಾಭೀಷ್ಟಪ್ರದವಾಗಿ ಸೋದೆಯಲ್ಲಿ ಕಂಗೊಳಿಸುತ್ತಿದೆ. ಭೂತರಾಜರೆಂಬ ಭೂತಶಕ್ತಿಯೊಂದು ಗುರುರಾಜರ ಅನುವರ್ತಿಯಾಗಿದ್ದು ಇಂದಿಗೂ ಪ್ರಭಾವಶಾಲಿಯಾಗಿರುವುದು ಪ್ರತ್ಯಕ್ಷ ಸಿದ್ಧವಾಗಿದೆ. ಇಪ್ಪತ್ತೇಳನೆಯವರಾದ ಶ್ರೀವಿಬುಧವರ್ಯತೀರ್ಥರು ಸುಭದ್ರಾಹರಣವೆಂಬ ಮಹಾಕಾವ್ಯವನ್ನು ರಚಿಸಿರುವರು. ಮೂವತ್ತಮೂರನೆಯವರಾದ ಶ್ರೀವಿಶ್ವೇಂದ್ರತೀರ್ಥರು ಇನ್ನಂಜೆಯಲ್ಲಿ ಶ್ರೀವಿಷ್ಣುಮೂರ್ತಿಹಯವದನ ಸ್ವಾಮಿ ಹೈಸ್ಕೂಲನ್ನು ೧೯೪೩ರಲ್ಲಿ ಸ್ಥಾಪಿಸಿರುವರು. ಮೂವತ್ತನಾಲ್ಕನೆಯುರಾದ ಶ್ರೀ ವಿಶ್ವೋತ್ತಮತೀರ್ಥಶ್ರೀಪಾದಂಗಳವರು ಈಗ ಸಂಸ್ಥಾನವನ್ನು ಆಳುತ್ತಿರುವರು. ೧೯೩೪ನೆಯ ಇಸವಿಯ ಶ್ರೀಮುಖ ಸಂ॥ರದ ಪುಷ್ಯ ಬ. ೧೩ರ ಶುಭದಿನದಲ್ಲಿ ಇವರು ಜನ್ಮತಾಳಿದರು. ೧೯೪೩ನೆಯ ಇಸವಿಯ ಸ್ವಭಾನು ಸಂ॥ರದ ಭಾದ್ರಪದ ಶು. ೪ರಂದು ಸನ್ಯಸ್ಥರಾದರು. ಇವರು ತಮ್ಮ ಗುರುಗಳು ಸ್ಥಾಪಿಸಿದ ಹೈಸ್ಕೂಲನ್ನೂ ಗುರುಕುಲವನ್ನೂ ನಡೆಯಿಸಿಕೊಂಡು ಬರುತ್ತಿರುವರು.




ಶ್ರೀ ನರಸಿಂಹ ದೇವರು.

೫. ಶ್ರೀಕಾಣೀರು ಮಠ: ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದಶ್ರೀರಾಮತೀರ್ಥರು ಈ ಮಠದ ಮೂಲ ಯತಿಗಳು. ಆಚಾರ್ಯರು ಕರುಣಿಸಿದ ಪಟ್ಟದ ದೇವರು ಶ್ರೀನರಸಿಂಹದೇವರು. ಈ ಪೀಳಿಗೆಯಲ್ಲಿ ಇಪ್ಪತ್ತ ಮೂರನೆಯವರಾದ ಶ್ರೀ ವಿದ್ಯಾಸಾಗರತೀರ್ಥರು ಶ್ರೀ ಕೃಷ್ಣಮಠದ ನವಗ್ರಹಕಿಟಿಕಿಗೆ ಕೇಶವಾದಿ ಚತುರ್ವಿಂಶತಿ



ಶ್ರೀವಿದ್ಯಾವಾರಿನಿಧಿತೀರ್ಥರು.

ಮೂರ್ತಿಗಳನ್ನು ಕೆತ್ತಿರುವ ಬೆಳ್ಳಿಯ ತಗಡನ್ನು ಹೊದಿಸಿದರು. ಇಪ್ಪತ್ತೇಳನೆಯವರಾದ ಶ್ರೀವಿದ್ಯಾನಿಧಿ ತೀರ್ಥರು ಶ್ರೀಕೃಷ್ಣನಿಗೆ ಚಿಕ್ಕ ರಥವನ್ನು ನಿರ್ಮಿಸಿ ಸಮರ್ಪಿಸಿದರು. ಇಪ್ಪತ್ತೆಂಟನೆಯವರಾದ ಶ್ರೀ ವಿದ್ಯಾಸಮುದ್ರ ತೀರ್ಥರು ತಮ್ಮ ಗುರುಗಳು ಮಾಡಿಸಿದ ಚಿಕ್ಕ ರಥವು ಜೀರ್ಣವಾಗಲು ಹೊಸತಾಗಿ ನಿರ್ಮಿಸಿ ದೇವರಿಗೊಪ್ಪಿಸಿದರು. (ಇದೂ ಈಗ ಜೀರ್ಣವಾಗಿರುತ್ತದೆ.) ಇಪ್ಪತ್ತೊಂಬತ್ತನೆಯವರಾದ ಶ್ರೀ ವಿದ್ಯಾವಾರಿನಿಧಿತೀರ್ಥ ಶ್ರೀಪಾದಂಗಳವರು ಈಗ ಸಂಸ್ಥಾನವನ್ನಾಳುತ್ತಿದ್ದಾರೆ. ೧೯೩೧ನೆಯ ಇಸವಿ ಪ್ರಜೋತ್ಪತ್ತಿ ಸಂ।ರದ ಶ್ರಾವಣ ಬ. ೧೨ನೇ ಶುಭದಿನದಂದು ಇವರು ಜನ್ಮತಾಳಿದರು. ೧೯೪೨ನೆಯ ಚಿತ್ರಭಾನು ಸಂ।ರದ ವೈಶಾಖ ಬ. ೬ ರಲ್ಲಿ ಸನ್ಯಸ್ತರಾದರು.



ಶ್ರೀವಿಠಲದೇವರು.

೬. ಶ್ರೀ ಪೇಜಾವರ ಮಠ: ಶ್ರೀಮದಾಚಾರ್ಯರ ಸಾಕ್ಷಾಚ್ಛಿಷ್ಯರಾದ ಶ್ರೀಅಧೋಕ್ಷಜತೀರ್ಥರು ಈ ಮಠದ ಮೂಲ ಯತಿಗಳು. ಆಚಾರ್ಯರು ಕರುಣಿಸಿದ ಪಟ್ಟದ ದೇವರು ಶ್ರೀ ವಿಠಲದೇವರು. ಈ



ಶ್ರೀವಿಶ್ವೇಶತೀರ್ಥರು.

ಪೀಳಿಗೆಯಲ್ಲಿ ಎಂಟನೆಯವರಾದ ಶ್ರೀ ವಿಜಯಧ್ವಜತೀರ್ಥರು ಭಾಗವತ ಮಹಾಪುರಾಣಕ್ಕೆ ವ್ಯಾಖ್ಯಾನವನ್ನು ಬರೆದರು. ಇದು ಇಂದಿಗೂ ವಿಜಯಧ್ವಜೀಯಟೀಕಾ ಎಂದು ಸುಪ್ರಸಿದ್ಧವಾಗಿದೆ. ಇಪ್ಪತ್ತನೆಯ ಶ್ರೀವಿಶ್ವಪತಿತೀರ್ಥರು ಶ್ರೀಮಧ್ವವಿಜಯ, ನೃಸಿಂಹಸ್ತುತಿ ಮೊದಲಾದವುಗಳಿಗೆ ಟೀಕೆಗಳನ್ನು ರಚಿಸಿರುತ್ತಾರೆ. ಮೂವತ್ತೆರಡನೆಯವರಾದ ಶ್ರೀ ವಿಶ್ವೇಶತೀರ್ಥಶ್ರೀಪಾದಂಗಳವರು ಈಗ ಸಂಸ್ಥಾನವನ್ನು ಆಳುತ್ತಿದ್ದಾರೆ. ೧೯೩೧ನೆಯ ಇಸವಿಯ ಪ್ರಜೋತ್ಪತ್ತಿ ಸಂ।ರದ ವೈಶಾಖ ಶು. ೧೦ನೇ ಶುಭ ದಿನದಲ್ಲಿ ಜನ್ಮತಾಳಿದರು. ೧೯೩೮ನೆಯ ಬಹುಧಾನ್ಯ ಸಂ।ರದ ಮಾರ್ಗಶಿರ ಶು. ೧೦ರಂದು ಸನ್ನ್ಯಸ್ತರಾದರು. ಇವರು ತಮ್ಮ ಪರ್ಯಾಯ ಕಾಲದಲ್ಲಿ (೧೯೫೩ನೆಯ ಇಸವಿ ಜನವರಿ ತಿಂಗಳಲ್ಲಿ) ಅಖಿಲಭಾರತ ಮಾಧ್ವ ತತ್ವಜ್ಞಾನ ಸಮ್ಮೇಲನವನ್ನು ಉಡುಪಿಯಲ್ಲಿ ಜರಗಿಸಿರುತ್ತಾರೆ.

೭. ಶ್ರೀ ಫಲಿಮಾರು ಮಠ: ಈ ಮಠದ ಮೂಲ ಯತಿಗಳು



ಶ್ರೀರಾಮದೇವರು.



ಶ್ರೀರಘುವಲ್ಲಭತೀರ್ಥರು.


ಶ್ರೀಮದಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀಹೃಷೀಕೇಶತೀರ್ಥರು. ಆಚಾರ್ಯರು ಅನುಗ್ರಹಿಸಿದ ಪಟ್ಟದ ದೇವರು ಶ್ರೀರಾಮದೇವರು. ಶ್ರೀಹೃಷೀಕೇಶತೀರ್ಥರು ಸಂಪ್ರದಾಯಪದ್ಧತಿ ಎಂಬ ಗ್ರಂಥವನ್ನು ರಚಿಸಿದ್ದಾರೆ. ಅವರು ಸ್ವಹಸ್ತದಲ್ಲಿ ಬರೆದಿರುವ ಶ್ರೀಮದಾಚಾರ್ಯರ ಸರ್ವಮೂಲಗ್ರಂಥವು ಈಗಲೂ ಶ್ರೀಮಠದಲ್ಲಿದೆ. ಈ ಮಠದ ಪೀಳಿಗೆಯವರಲ್ಲಿ ಆರನೆಯವರಾದ ಶ್ರೀ ರಾಜರಾಜೇಶ್ವರತೀರ್ಥರು ಶ್ರೀರಾಮಸಂದೇಶವೆಂಬ ಖಂಡ ಕಾವ್ಯವನ್ನೂ ಮಂಗಲಾಷ್ಟಕವನ್ನೂ ರಚಿಸಿರುವರು. ಇಪ್ಪತ್ತನಾಲ್ಕನೆಯವರಾದ ಶ್ರೀರಘುಪ್ರವೀರತೀರ್ಥರು ಮಹಾತಪಸ್ವಿಗಳು. ಇವರ ಪರ್ಯಾಯ ಕಾಲದಲ್ಲಿ ಶ್ರೀಕೃಷ್ಣನ ಅಭಿಷೇಕಕ್ಕೆ ಹಾಲು ಕರೆಯುತ್ತಿದ್ದ ನರ್ಮದಾ ಎಂಬ ದನವನ್ನು ಹುಲಿಯೊಂದು ಕೊಂದುಬಿಟ್ಟಿತೆಂಬ ಸುದ್ದಿಯನ್ನು ಕೇಳಿ ಶ್ರೀಗಳವರು ಸಂತಾಪದಿಂದ ತಟಸ್ಥರಾಗಿ ಕುಳಿತುಬಿಡಲು ಹುಲಿಯು ಶ್ರೀಕೃಷ್ಣಮಠದ ಗೋಪುರದ ಮುಂದೆ ಬಂದು ಪ್ರಾಣಬಿಟ್ಟಿತೆಂಬ ಪ್ರತೀತಿಯಿದೆ. ಇಪ್ಪತ್ತೆಂಟನೆಯವರಾದ ಶ್ರೀರಘುಮಾನ್ಯತೀರ್ಥರು ಉಡುಪಿಯ ತನ್ನ ಮಠವನ್ನು ಜೀರ್ಣೋದ್ಧಾರ ಮಾಡಿಸಿರುವರು. ಈಗ ಶ್ರೀರಘುವಲ್ಲಭತೀರ್ಥಶ್ರೀಪಾದಂಗಳವರು ಸಂಸ್ಥಾನದ ಪೀಠವನ್ನಾಳುತ್ತಿದ್ದು ಇವರು ಪೀಳಿಗೆಯಲ್ಲಿ ಇಪ್ಪತ್ತೊಂಭತ್ತನೆಯವರಾಗಿದ್ದಾರೆ. ೧೮೩೫ನೆಯ ಇಸವಿಯ ಯುವ ಸಂವತ್ಸರದ ಆಷಾಢ ಶುದ್ಧ ಸಪ್ತಮಿಯಂದು ಇವರ ಶುಭಜನ್ಮವಾಯಿತು. ೧೮೪೭ನೆಯ ಇಸವಿಯ ಸರ್ವಜಿತು ಸಂವತ್ಸರದ ಪುಷ್ಯ ಶುದ್ಧ ಷಷ್ಠಿ ಶುಭದಿನದಲ್ಲಿ ಸನ್ನ್ಯಸ್ತರಾದರು.

೮. **ಶ್ರೀ ಅದಮಾರು ಮಠ:** ಈ ಮಠಕ್ಕೆ ಶ್ರೀಮದಾಚಾರ್ಯರ ಸಾಕ್ಷಾತ್‌ಶಿಷ್ಯರಾದ ಶ್ರೀ ನರಸಿಂಹತೀರ್ಥರು ಮೂಲ ಯತಿಗಳು.



ಶ್ರೀಕಾಲೀಯಮರ್ದನ ಕೃಷ್ಣದೇವರು.

ಆಚಾರ್ಯರು ಅನುಗ್ರಹಿಸಿದ ಪಟ್ಟದ ದೇವರು ಶ್ರೀಚತುರ್ಭುಜ ಕಾಲೀಯ ಮರ್ದನ ಕೃಷ್ಣ ದೇವರು. ಈ ಪೀಳಿಗೆಯಲ್ಲಿ ಇಪ್ಪತ್ತೊಂಭತ್ತನೆಯವರಾದ ಶ್ರೀ ವಿಬುಧಪ್ರಿಯತೀರ್ಥರು ಬಹಳ ಪಂಡಿತರೂ ಉದಾರಿಗಳೂ ತಪಸ್ವಿಗಳೂ ಎಂದು ಪ್ರಖ್ಯಾತರಾಗಿದ್ದಾರೆ. ಇವರು ತಮ್ಮ ಪರ್ಯಾಯ ಕಾಲದಲ್ಲಿ ಶ್ರೀ ಕೃಷ್ಣ ಮಠದ ಚೌಕಿಯ ಕೆಲಸವನ್ನು ಪ್ರಾರಂಭಿಸಿ ಅರ್ಧ ಭಾಗವನ್ನು ಮುಗಿಸಿದರು. ಶ್ರೀಕೃಷ್ಣಮಠದ ಗೋಶಾಲೆಯನ್ನೂ ಶ್ರೀಕೃಷ್ಣಮಠವನ್ನು ಪ್ರವೇಶಿಸುವ ಕಲ್ಲು ಹೆಬ್ಬಾಗಿಲನ್ನೂ ಜೀರ್ಣೋದ್ಧಾರಗೊಳಿಸಿದರು. ಚಂದ್ರಮೌಳೀಶ್ವರ ದೇವಾಲಯ ಜೀರ್ಣೋದ್ಧಾರದ ಕೆಲಸವೂ ಇವರ ನೇತೃತ್ವದಲ್ಲಿಯೇ ನಡೆಯಿತು. ಮಧ್ವಸರೋವರದಲ್ಲಿರುವ ಭಾಗೀರಥಿಯು ಇವರ ಅಮೃತಹಸ್ತದಿಂದಲೇ ಪ್ರತಿ



ಶ್ರೀವಿಬುಧೇಶತೀರ್ಥರು

ಷ್ಠಿತವಾದುದು. ಮೂವತ್ತೊಂದನೆಯವರಾದ ಶ್ರೀ ವಿಬುಧೇಶತೀರ್ಥಶ್ರೀ ಪಾದಂಗಳವರು ಈಗ ಸಂಸ್ಥಾನವನ್ನು ಆಳುತ್ತಿರುವರು. ಇವರು ೧೯೨೮ ನೆಯ ಇಸವಿಯ ವಿಭವಸಂವತ್ಸರದ ಮಾರ್ಗಶಿರ ಬಹುಳ ೩ರ ಶುಭದಿನ ದಲ್ಲಿ ಜನ್ಮತಾಳಿದರು. ೧೯೪೫ನೆಯ ಇಸವಿ ಪಾರ್ಥಿವ ಸಂವತ್ಸರದ ಜ್ಯೇಷ್ಠ ಬ. ೩ರಲ್ಲಿ ಸನ್ನ್ಯಸ್ತರಾದರು. ಇವರು ಅದಮಾರುಗ್ರಾಮದಲ್ಲಿ ಹೈಸ್ಕೂಲನ್ನು ಉಡುಪಿಯಲ್ಲಿ ಕಾಲೇಜೊಂದನ್ನೂ ನಡೆಸಿಕೊಂಡು ಬರುತ್ತಿರುವರು.

ಶ್ರೀಮದಾಚಾರ್ಯರ ಕಾಲದಿಂದಲೂ ಉಡುಪಿಯ ಈ ಎಂಟು ಮಠ ಗಳಲ್ಲಿ ಬಾಲಾಶ್ರಮದ ಯತಿಗಳೇ ಪೀಠವನ್ನು ಅಲಂಕರಿಸುತ್ತ ಬರುತ್ತಿದ್ದಾರೆ. ಈ ಎಂಟು ಮಠಗಳಲ್ಲಿ ಕೃಷ್ಣಾಪುರ–ಪುತ್ತಿಗೆ ಮಠಗಳೂ, ಶೀರೂರು–ಸೋದೆ ಮಠಗಳೂ, ಕಾಣೀರು–ಪೇಜಾವರ ಮಠಗಳೂ, ಫಲಿಮಾರು–ಅದಮಾರು ಮಠಗಳೂ ದ್ವಂದ್ವ ಮಠಗಳೆನಿಸಿವೆ. ಈ ಮಠಗಳಲ್ಲಿ ಯಾವುದಾದರೂ ಮಠದ ಶ್ರೀಗಳವರು ಶಿಷ್ಯಸ್ವೀಕಾರ ಮಾಡದೆ ಹರಿಪದವನ್ನು ಸೇರಿದರೆ ದ್ವಂದ್ವ ಮಠದ ಶ್ರೀಗಳವರು ಆ ಮಠಕ್ಕೆ ಶಿಷ್ಯರನ್ನು ನೇಮಿಸುವುದು ಸಂಪ್ರದಾಯವಾಗಿದೆ. ಎಲ್ಲಾ ಮಠಗಳಿಗೂ ಹಲವಾರು ಉಪಮಠಗಳಿವೆ. ಉಡುಪಿಯಲ್ಲಿ ಎಲ್ಲ ಮಠಗಳಲ್ಲೂ ಪ್ರಾಚೀನ ಗ್ರಂಥಗಳ ಭಂಡಾರವಿದೆ. ಈ ಮಠಗಳು ಧರ್ಮ– ಸಂಸ್ಕೃತಿಗಳ ಪ್ರಚಾರದಲ್ಲಿ ತಮ್ಮ ಸಹಾಯ-ಸಹಕಾರಗಳನ್ನು ಸದಾ ನೀಡುತ್ತಿವೆ.

ಒಬ್ಬ ಶ್ರೀಗಳವರು ತಮ್ಮ ಉತ್ತರಾಧಿಕಾರಿಯನ್ನು ನೇಮಿಸಿದ್ದರೂ ಆ ಚಿಕ್ಕಪಟ್ಟದ ಶ್ರೀಗಳವರು ತಮ್ಮ ಗುರುಗಳಿಗಿಂತ ಮೊದಲೇ ಹರಿಪದವನ್ನು ಸೇರಿದರೆ ಪೀಳಿಗೆಯಲ್ಲಿ ಪರಿಗಣಿಸದೆ ಚಿಕ್ಕಪಟ್ಟದವರೆಂದೇ ಗಣಿಸಲ್ಪಡುವರು.

ಶ್ರೀಕೃಷ್ಣಮಠದ ಪ್ರಮುಖ ರಾಜಾದಾಯ

ಹಿಂದಿನ ರಾಜರು ಶ್ರೀಕೃಷ್ಣನಿಗೆ ಧರ್ಮಬಿಟ್ಟ ಇನಾಂ ಭೂಮಿ ಉತ್ತಾರ ಜಪ್ತಿಯಿಂದ ಇನಾಂಸಟ್ಲುಮೆಂಟು ಪ್ರಕಾರ ವರ್ಷಕ್ಕೆ 8400 ರೂ.ಗಳನ್ನೂ. ಮುಮ್ಮಡಿ ಕೃಷ್ಣರಾಜ ಒಡೆಯರವರು ತಾ. 8 – 2 – 1821ರಲ್ಲಿ ಬರೆಸಿ ಕೊಟ್ಟ ಧರ್ಮಸಾಧನ ಪ್ರಕಾರ ಬರಬೇಕಾದ 5400 ವರಾಹಗಳಲ್ಲಿ ಕಮ್ಮಿ ಮಾಡಿ ವರ್ಷಕ್ಕೆ 6807 ರೂ.ಗಳನ್ನೂ ಸರಕಾರದವರು ಸಲ್ಲಿಸುವರು. ಚಿಕ್ಕ ಮಾಗನೂರು ಇನಾಂ ಗ್ರಾಮದಿಂದ 735 ರೂ.ಗಳಷ್ಟು ಕಂದಾಯ ಬರುತ್ತಿದೆ.

ಶ್ರೀ ಕೃಷ್ಣ ಸನ್ನಿಧಿಯಲ್ಲಿ ಅರ್ಪಿಸಬಹುದಾದ ಸೇವೆಗಳು

೧. ಸಪ್ತರಾತ್ರಿ ಪೂರ್ಣಮಹಾರಥೋತ್ಸವ.
೨. ಬ್ರಹ್ಮೋತ್ಸವ.
೩. ಗರುಡೋತ್ಸವ.
೪. ಸುವರ್ಣಪಾಲಕಿ ಉತ್ಸವ.
೫. ಬೆಳ್ಳಿ ರಥೋತ್ಸವ.
೬. ಮಹಾಪೂಜೆ.
೭. ಅವಸರಸನಕಾದಿ ಪೂಜೆ.
೮. ಅಲಂಕಾರಪೂಜೆ.
೯. ಶಿಬಿಕಡೋಲಾ ಮಹೋತ್ಸವ.
೧೦. ರಾತ್ರಿಪೂಜೆ.
೧೧. ಸುವರ್ಣಮಹಾಕುಂಭಾಭಿಷೇಕ ತೀರ್ಥಪೂಜೆ.
೧೨. ಪಂಚಾಮೃತ ಮಹಾಭಿಷೇಕ.
೧೩. ಚಾಮರಸೇವೆ.
೧೪. ಅಭ್ಯಂಗಾರ್ಚನಾ(ಉದ್ವರ್ತನ)ಪೂಜೆ.
೧೫. ಉಷಃಕಾಲಪೂಜೆ.
೧೬. ಏಕಾಂತಸೇವೆಪೂಜೆ.
೧೭. ಕನಕಾಭಿಷೇಕ.
೧೮. ಕ್ಷೀರಾಭಿಷೇಕ.
೧೯. ವಿಶ್ವರೂಪ ಸಂದರ್ಶನ – ನಿರ್ಮಾಲ್ಯ ವಿಸರ್ಜನೆಪೂಜೆ.
೨೦. ತುಲಸಿ ಅರ್ಚನೆ.
೨೧. ಗೋಪೂಜೆ.
೨೨. ಹಾಲುಬೆಣ್ಣೆಪೂಜೆ.
೨೩. ಫಲಸಮರ್ಪಣೆಸಮೇತ ಕರ್ಪೂರಾರತಿ.

ನಂದಾದೀಪ, ತುಲಾಭಾರ, ಗೋದಾನ, ದೀಪಸ್ತಂಭ.

೧೪. ಶ್ರೀಮದಾಚಾರ್ಯರಿಗೆ ಸಂಬಂಧಪಟ್ಟ ಸ್ಥಳಗಳು.

ಪಾಜಕಕ್ಷೇತ್ರ: ಉಡುಪಿಯಿಂದ ಏಳು ಮೈಲು ದಕ್ಷಿಣದಲ್ಲಿ ಪಾಜಕ ಕ್ಷೇತ್ರವೆಂಬ ಪುಣ್ಯಸ್ಥಳವಿದೆ. ಶ್ರೀಮನ್ಮಧ್ವಾಚಾರ್ಯರ ಜನ್ಮಭೂಮಿಯಾದ ಈ ಪಾವನಕ್ಷೇತ್ರದ ಹತ್ತಿರದಲ್ಲಿಯೆ ಕುಂಜಾರುಗಿರಿಯಲ್ಲಿ ಪ್ರಸಿದ್ಧವಾದ ದುರ್ಗಾದೇವಾಲಯವಿದೆ. ಇದನ್ನು ದುರ್ಗಾಬೆಟ್ಟವೆಂದು ಕರೆಯುತ್ತಾರೆ. ಈ ದುರ್ಗಾಬೆಟ್ಟದ ನಾಲ್ಕೂ ಬದಿಗಳಲ್ಲಿ, ಎಂದರೆ ಮೂಡುಬದಿಯಲ್ಲಿ ಪರಶು ತೀರ್ಥ, ತೆಂಕುಬದಿಯಲ್ಲಿ ಧನುಸ್ತೀರ್ಥ, ಪಡುಬದಿಯಲ್ಲಿ ಗದಾತೀರ್ಥ, ಬಡಗು ಬದಿಯಲ್ಲಿ ಬಾಣತೀರ್ಥಗಳೆಂಬ ಪರಶುರಾಮನಿರ್ಮಿತಗಳಾದ ನಾಲ್ಕು ಪುಣ್ಯ ತೀರ್ಥಗಳಿವೆ. ಇವುಗಳ ಸ್ನಾನವು ಸಕಲ ಪಾಪಪರಿಹಾರಕವೆಂದು ಪ್ರಸಿದ್ಧ ವಾಗಿದೆ. ಪಾಜಕಕ್ಷೇತ್ರದಲ್ಲಿ ಶ್ರೀಮದಾಚಾರ್ಯರು ಬಾಲಲೀಲೆಗಳನ್ನು ತೋರಿದ ಹಲವಾರು ಕುರುಹುಗಳು ಇಂದಿಗೂ ಕಂಗೊಳಿಸುತ್ತಿವೆ. ಆಚಾ ರ್ಯರು ತಾಯಿಯು ಕರೆಕೇಳಿ ದೂರದ ದುರ್ಗಾಬೆಟ್ಟದಿಂದ ನೆಗೆದು ತಾಯಿಯ ಬಳಿ ಬಂದು ನಿಂತ ಜಾಗೆಯಲ್ಲಿ ಅವರ ಪಾವನಪಾದಗಳ ಚಿಹ್ನೆಯುಂಟಾಯಿತು. ಈಗ ಈ ಪವಿತ್ರ ಸ್ಥಳದಲ್ಲಿ ಶ್ರೀಮದ್ವಾದಿರಾಜಸ್ವಾಮಿಗಳವರು ಪ್ರತಿಷ್ಠಿಸಿದ ಶ್ರೀಮದಾಚಾರ್ಯರುಳ್ಳ ಗುಡಿಯು ಕಂಗೊಳಿಸುತ್ತಿದೆ. ಈ ಗುಡಿಯ ಹತ್ತಿರವೆ ಶ್ರೀಮದಾಚಾರ್ಯರ ಹಿರಿಯರು ವಾಸಮಾಡಿದ ಮನೆಯೂ (ಈಗ ಇದನ್ನು ಮೂಡುಮಠವೆನ್ನುತ್ತಾರೆ.) ಅದರ ಪಕ್ಕದಲ್ಲಿಯೆ ತನ್ನ ತಾಯಿಗಾಗಿ ಶ್ರೀಮದಾಚಾರ್ಯರು ನಿರ್ಮಿಸಿಕೊಟ್ಟ ವಾಸುದೇವತೀರ್ಥವೂ ಇದೆ. ತಂದೆಯ ಸಾಲಗಾರನೊಬ್ಬನಿಗೆ ಹುಣಸೇಬೀಜಗಳನ್ನಿತ್ತು ಆತನ ಮನಸ್ಸಿಗೆ ಅಪೂರ್ವ ತೃಪ್ತಿಯನ್ನಿತ್ತ ಸ್ಥಳ, ತಮೋಚೇತನನೊಬ್ಬ ಹಾವಾಗಿ ಬಂದು ಕಚ್ಚಲು ಯತ್ನಿಸಿ ದಾಗ ತನ್ನ ಕಾಲಿನಿಂದಲೆಮೆಟ್ಟಿ ಕೊಂದ ಸ್ಥಳ, ಹೊಸ ಮತವನ್ನು ಪ್ರಚಾರ ಮಾಡುವೆನೆಂದು ತನ್ನ ತಂದೆಗೆ ನಂಬುಗೆ ಬರುವಂತೆ ಒಣ ಕೋಲನ್ನು ಚಿಗುರಿ ಸಿದ ಸ್ಥಳ, ಹಾಲನ್ನು ಕದ್ದು ಕುಡಿಯುವ ಬೆಕ್ಕಿಗೆ ಪ್ರತಿಬಂಧಕವಾಗುವಂತೆ ಇರಿಸಿದ ಮೊಸರುಕಲ್ಲಿನ ಸ್ಥಳ, ಮುಂತಾದ ಪುಣ್ಯಸ್ಥಳಗಳು ಇಂದಿಗೂ ಶ್ರೀಮದಾಚಾರ್ಯರ ಬಾಲಲೀಲೆಗಳನ್ನು ಸ್ಮರಣೆಗೆ ತರಿಸುತ್ತಲಿವೆ. ಶ್ರೀಹರಿಗೆ ಸಮ್ಮತವಾದ ಸನ್ಮತವೊಂದನ್ನು ಪ್ರಚಾರಮಾಡಿ ಜಗತ್ತಿನ ಸಜ್ಜನರನ್ನು ಉದ್ಧಾರಮಾಡಿದ ಶ್ರೀಮದಾಚಾರ್ಯರ ಅವತಾರಭೂಮಿಯಾದೀ ಪುಣ್ಯ ಪ್ರದೇಶವನ್ನು ಸಂದರ್ಶಿಸುವುದು ಜನ್ಮಸಾಫಲ್ಯಕ್ಕೆ ಸಾಧಕವಾಗಿದೆ.

ದಂಡತೀರ್ಥ: ಇದು ಉಡುಪಿಯಿಂದ ಆರೇಳು ಮೈಲು ದಕ್ಷಿಣ

ದಲ್ಲಿದೆ. ಶ್ರೀಮದಾಚಾರ್ಯರು ತನ್ನ ಬಾಲ್ಯದ ವಿದ್ಯಾಗುರುಗಳಿಗೆ ದಕ್ಷಿಣಾ ರೂಪವಾಗಿ ಒಂದು ತೀರ್ಥವನ್ನು ನಿರ್ಮಿಸಿ ದಂಡದಿಂದ ಅವರ ಹೊಲಗಳಿಗೆ ನೀರು ಹರಿಯುವಂತೆ ಮಾಡಿದುದರಿಂದ ಇದಕ್ಕೆ ದಂಡತೀರ್ಥವೆಂಬ ಹೆಸರು ಪ್ರಸಿದ್ಧವಾಗಿದೆ. ಇಲ್ಲಿ ಶ್ರೀಕೃಷ್ಣಾಪುರಮಠದ ಶ್ರೀವಿದ್ಯಾಧೀಶತೀರ್ಥರು ಪ್ರತಿಷ್ಠಿಸಿದ ಶ್ರೀಪ್ರಾಣದೇವರುಳ್ಳ ಕೃಷ್ಣಾಪುರಮಠವಿದೆ.

ಒಡಭಾಂಡೇಶ್ವರ: ಉಡುಪಿಯಿಂದ ನಾಲ್ಕು ಮೈಲು ಪಶ್ಚಿಮದಲ್ಲಿ ಒಡಭಾಂಡೇಶ್ವರವೆಂಬ ಬಲರಾಮಕ್ಷೇತ್ರವಿದೆ. ಇಲ್ಲಿಯೆ ಶ್ರೀಮದಾಚಾರ್ಯರು ಸಮುದ್ರದಲ್ಲಿ ಬಿರುಗಾಳಿಗೆ ಸಿಕ್ಕ ಹಡಗವನ್ನು ಅಪಾಯದಿಂದ ಪಾರುಮಾಡಿ ಶ್ರೀಕೃಷ್ಣವಿಗ್ರಹವನ್ನು ಸಂಪಾದಿಸಿದರು. ಈ ಸ್ಥಳದಲ್ಲಿ ಸಮುದ್ರಸ್ನಾನವು ವಿಶೇಷ ಪುಣ್ಯಪ್ರದವಾಗಿದೆ. ಆಚಾರ್ಯರ ಅನುಗ್ರಹವಿಶೇಷವಿರುವುದರಿಂದಲೆ ಕರಾವಳಿ ಹಡಗು ಸಂಚಾರಕಾಲದಲ್ಲಿ ಅಪಾಯವೊದಗಿದಾಗ ಇಂದಿಗೂ ಈ ಸ್ಥಳದಲ್ಲಿ ಆಶ್ರಯಪಡೆಯುವುದು ಪ್ರತ್ಯಕ್ಷವಾಗಿದೆ. ಇದರ ಈ ನೈಸರ್ಗಿಕ ಮಹಾತ್ಮೆಯಿಂದಲೆ ಈ ಸ್ಥಳವು (ಮಲ್ಪೆ) ಪಶ್ಚಿಮಕರಾವಳಿಯ ಪ್ರಬುದ್ಧ ಬಂದರವಾಗುವ ಅರ್ಹತೆ ಪಡೆದಿದೆ.

ಸುಬ್ರಹ್ಮಣ್ಯ: ಗರುಡನ ಬಾಧೆಗಾಗಿ ವಾಸುಕಿಯು ತಪಸ್ಸುಮಾಡಿ ಮಹೇಶ್ವರನನ್ನು ಒಲಿಸಿಕೊಂಡು ಆತನ ವರಪ್ರದಾನದಿಂದ ಸುಬ್ರಹ್ಮಣ್ಯಾಂಶ ವನ್ನು ಪಡೆದು ಭಕ್ತಾಭೀಷ್ಟಪ್ರದನಾಗಿ ಇರುವ ಈ ಕ್ಷೇತ್ರವು ಪ್ರಸಿದ್ಧವಾಗಿದೆ. ಸುಧರ್ಮನೆಂಬ ರಾಜನು ಇಲ್ಲಿಯ ಕುಮಾರಧಾರಾನದಿಯಲ್ಲಿ ಸ್ನಾನಮಾಡಿ ವಾಸುಕಿಯನ್ನು ಆರಾಧಿಸಿ ತನ್ನ ದುರಿತಗಳನ್ನು ಪರಿಹರಿಸಿಕೊಂಡುದು ಸ್ಥಳ ಪುರಾಣದಲ್ಲಿ ಉಕ್ತವಾಗಿದೆ. ಶ್ರೀಕೃಷ್ಣ ಕುಮಾರನಾದ ಸಾಂಬನಿಗೆ ಈ ಕ್ಷೇತ್ರ ದಲ್ಲಿಯೆ ಕುಷ್ಠರೋಗ ನಿವೃತ್ತಿಯಾಯಿತೆಂದು ಸ್ಕಾಂದಪುರಾಣದಲ್ಲಿ ಉಕ್ತ ವಾಗಿದೆ. ಈ ಸ್ಥಳವು ಮಹಾರೋಗ ನಿವಾರಕವೂ, ಪಾಪಪರಿಹಾರಕವೂ ಆಗಿರು ವುದು ಪ್ರತ್ಯಕ್ಷವಾಗಿದೆ.

ಶ್ರೀಮನ್ಮಧ್ವಾಚಾರ್ಯರು ಈ ಕ್ಷೇತ್ರದಲ್ಲಿ ಹಿಂದೆ ಇದ್ದ ಭಾಟ್ಟ ಸನ್ಯಾಸಿ ಗಳೊಬ್ಬರನ್ನು ವಾದದಲ್ಲಿ ಸೋಲಿಸಿದುದರಿಂದ ಅವರು ತನ್ನ ಮಠವನ್ನು ಆಚಾರ್ಯರಿಗೆ ಒಪ್ಪಿಸಿದರು. ಶ್ರೀಮದಾಚಾರ್ಯರು ತನ್ನ ಪೂರ್ವಾಶ್ರಮದ ಸೋದರರೂ, ಶಿಷ್ಯರೂ ಆದ ಶ್ರೀ ವಿಷ್ಣುತೀರ್ಥಾಚಾರ್ಯರಿಗೆ ಈ ಸಂಸ್ಥಾನ ವನ್ನು ಕೊಟ್ಟು, ವ್ಯಾಸ-ವಿಠಲ-ಸಂಪುಟ ನರಸಿಂಹದೇವರ ಪೂಜಾಧಿಕಾರವನ್ನು ವಹಿಸಿಕೊಟ್ಟರು. ಇವರು ತಪಸ್ಸಿಗೆ ಹೋಗುವಾಗ ವ್ಯಾಸಸಂಪುಟವನ್ನು

ಒಯ್ದಿದ್ದರು. ಆದರೆ ಅವರ ಶಿಷ್ಯರಾದ ಶ್ರೀ ಅನಿರುದ್ಧತೀರ್ಥರು ಅದನ್ನು ಅಪೇಕ್ಷಿಸಲು, ಶ್ರೀವಿಷ್ಣುತೀರ್ಥರು ಅದನ್ನು ಜ್ಞಾನದೃಷ್ಟಿಯಿಂದರಿತು ಅದು ಕುಮಾರಧಾರೆಯಲ್ಲಿ ಹರಿದು ಬರುವುದಾಗಿ ಸ್ವಪ್ನಸೂಚನೆಯಿತ್ತರು. ಆ ಸೂಚನೆಯಂತೆ ಮರುದಿನ ದರ್ಪಣ, ಅಕ್ಷಯಪಾತ್ರೆಗಳೊಡನೆ ಆ ಸಂಪುಟವು ಬರಲು ಅವನ್ನು ಮಠದಲ್ಲಿರಿಸಿ ಪೂಜಿಸಿದರು. ಈ ಸ್ಥಳವು ಈಗಲೂ ದರ್ಪಣತೀರ್ಥವೆಂದು ಹೆಸರಾಗಿದೆ. ಇಲ್ಲಿಯೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ.

ನಡ್ಯಂತಾಡಿ: ಶ್ರೀಮದಾಚಾರ್ಯರು ಸುಬ್ರಹ್ಮಣ್ಯ – ಉಡುಪಿಗಳಿಗೆ ಹೋಗುವಾಗ ಮಧ್ಯದಲ್ಲಿ ಮಾಧ್ಯಾಹ್ನಿಕ ಕೃತ್ಯಕ್ಕೆ ಯುಕ್ತವಾಗಿದ್ದ ಸ್ಥಳವು ಮಧ್ಯವಾಟಮಠ (ನಡ್ಯಂತಾಡಿ) ಎಂದು ಪ್ರಸಿದ್ಧವಾಗಿದೆ. ಶ್ರೀಮದಾಚಾರ್ಯರು ವಿಶ್ರಮಿಸಿಕೊಂಡಿದ್ದ ಮಂಟಪವೂ, ಗೌತಮಕುಂಡ, ಗದಾತೀರ್ಥಗಳೂ ಇವೆ. ಇಲ್ಲಿಗೆ ಮಂಗಳೂರಿನಿಂದ ಚಾರ್ಮಾಡಿಗೆ ಹೋಗುವ ಬಸ್ಸು ದಾರಿಯಲ್ಲಿ ಕಾವಳಕಟ್ಟೆ ಎಂಬಲ್ಲಿ ಇಳಿದು ಎರಡು ಮೈಲು ನಡೆದುಹೋಗಬೇಕು.


ಶ್ರೀರಾಮ.

ಕಣ್ವತೀರ್ಥ: ಮಂಗಳೂರಿನಿಂದ ಹೋಗುವಾಗ ಮಂಜೇಶ್ವರವೆಂಬಲ್ಲಿರುವ ಈ ಪುಣ್ಯಕ್ಷೇತ್ರದಲ್ಲಿ ಶ್ರೀಮದಾಚಾರ್ಯರು ಚಾತುರ್ಮಾಸ್ಯವನ್ನು ಕಳೆದಿದ್ದರು. ಇಲ್ಲಿ ಒಂದು ಅಶ್ವತ್ಥಕಟ್ಟೆಯಿದ್ದು ಅಲ್ಲಿಯೆ ಶ್ರೀಮದಾಚಾರ್ಯರು ಉಡುಪಿಯ ಎಂಟು ಮಠಗಳ ಮೂಲ ಯತಿಗಳಿಗೆ ಆಶ್ರಮದೀಕ್ಷೆಯಿತ್ತರು. ಶ್ರೀವಿಜಯಧ್ವಜತೀರ್ಥರು ಪ್ರತಿಷ್ಠಿಸಿದ ಶ್ರೀಪ್ರಾಣದೇವರುಳ್ಳ ಮಠವು ಹತ್ತಿ

ರದಲ್ಲಿದೆ. ಕಣ್ವಮಹರ್ಷಿಗಳು ಪೂಜಿಸಿದ ಶ್ರೀ ರಾಮನ ವಿಗ್ರಹವು ಈ ಮಠದಲ್ಲಿದ್ದುದು ಈಗ ಪೇಜಾವರ ಮಠದಲ್ಲಿದೆ.

ಕಡ್ತಿಲ (ಸೇತುತಿಲ): ಶ್ರೀಮದಾಚಾರ್ಯರು ತನ್ನ ಗ್ರಂಥಗಳನ್ನು ಸ್ಥಾಪಿಸಿ ಶ್ರೀಗೋಪಾಲಕೃಷ್ಣದೇವರನ್ನು ಇರಿಸಿರುವ ಪವಿತ್ರಸ್ಥಳ. ಇಲ್ಲಿ ಮೂಲ ವಿಗ್ರಹವಿರುವ ಪೀಠವನ್ನು ಉಡುಪಿಯ ಅಷ್ಟಮಠದ ಯತಿಗಳಲ್ಲದವರು ಸ್ಪರ್ಶಿಸುವಂತಿಲ್ಲ. ಉಡುಪಿಯ ಯತಿಗಳು ಬಂದಾಗ ಮಾತ್ರವೆ ಪೀಠವನ್ನು ಮುಟ್ಟಿ ಪೂಜಾದಿಗಳನ್ನು ನೆರವೇರಿಸುತ್ತಾರೆ. ಇತರ ದಿನಗಳಲ್ಲಿ ಬ್ರಹ್ಮಚಾರಿಗಳು ದೂರದಲ್ಲಿಯೆ ಪೂಜೆ ನಡೆಸುವರು. ಈ ಪೂಜೆಯನ್ನೂ ಗೃಹಸ್ಥಾಶ್ರಮಿಗಳು ನಡೆಸುವಂತಿಲ್ಲ.

ಇವೇ ಅಲ್ಲದೆ ಶ್ರೀಮದಾಚಾರ್ಯರು ತನ್ನ ಅಮಾನುಷ ಲೀಲಾವೈಭವಗಳನ್ನು ಪ್ರದರ್ಶಿಸಿದ ಅನೇಕ ಪುಣ್ಯಸ್ಥಳಗಳು ಈ ಜಿಲ್ಲೆಯಲ್ಲಿ ಮಾತ್ರವೆ ಅಲ್ಲದೆ ಭಾರತವರ್ಷದ ಎಲ್ಲೆಡೆಗೂ ಇವೆ. ಅವನ್ನೆಲ್ಲಾ ಗುರುತಿಸಿಕೊಳ್ಳುವುದೂ ತಿಳಿದುಕೊಳ್ಳುವುದೂ ಅವಶ್ಯವಾಗಿದೆ.

೧೫. ಆಸುಪಾಸಿನ ಸ್ಥಳಗಳು

ದುರ್ಗಾಲಯಗಳು: ಉಡುಪಿಯ ಆಸುಪಾಸಿನಲ್ಲಿ ರಾಮಭೋಜರಾಜನಿಂದಲೆ ಪ್ರತಿಷ್ಠಿತವಾದುವೆಂದು ಹೆಸರ್ಗೊಂಡ ಕಡಿಯಾಳಿ, ಪುತ್ತೂರು, ಕನರ್ಪಾಡಿ, ಬೈಲೂರು ಎಂಬಲ್ಲಿ ದುರ್ಗಾದೇವಾಲಯಗಳಿವೆ.

ಸರ್ಪಾಲಯಗಳು: ರಾಮಭೋಜರಾಜನೆ ಪ್ರತಿಷ್ಠಿಸಿದನೆಂದು ಪ್ರಸಿದ್ಧಗಳಾಗಿರುವ ತಾಂಗೋಡು, ಮಾಂಗೋಡು, ಅರಿತೋಡು, ಮುಚ್ಲಿಲಕೋಡು, ಎಂಬಲ್ಲಿ ಸರ್ಪಾಲಯ (ಸುಬ್ರಹ್ಮಣ್ಯ)ಗುಡಿಗಳಿವೆ.

ಸುವರ್ಣಾನದಿ: ಉಡುಪಿಯಿಂದ ಸುಮಾರು ಎರಡು ಮೈಲು ಈಶಾನ್ಯದಲ್ಲಿ ಸುವರ್ಣಾನದಿಯಿದೆ. ಹಿಂದೆ ರಾಮಭೋಜರಾಜನು ಅಶ್ವಮೇಧ ಯಾಗವನ್ನು ಮಾಡಿ ಯಾಗಾಂತ್ಯದಲ್ಲಿ ಕೃಷ್ಣಪಕ್ಷದ ಚತುರ್ದಶಿ ಮಂಗಳವಾರ ದಿನ ಈ ಸಂಗಮಸ್ಥಳದಲ್ಲಿ ಅವಭೃಥ ಸ್ನಾನಮಾಡಿದನು. ಅಂದಿನಿಂದ ಇಂದಿಗೂ ಕೃಷ್ಣಾಂಗಾರ ಚತುರ್ದಶಿಯಂದು ಸ್ನಾನವು ಮಹಾಪುಣ್ಯಪ್ರದವೆನಿಸಿದೆ. ಇಲ್ಲಿ ಗಾಲವರ ಆಶ್ರಮವಿತ್ತು, ಎಂದು ಪ್ರಸಿದ್ಧಿಯಿದೆ.

ಇಂದ್ರಾಣಿ: ಶಚೀದೇವಿಯು ತಪಸ್ಸುಮಾಡಿ ಪಂಚದುರ್ಗೆಯರನ್ನೂ ಅವರ ಅಂತರ್ಯಾಮಿಯಾದ ಪ್ರದ್ಯುಮ್ನಾದಿ ವಿಷ್ಣುವಿನ ಐದು ರೂಪಗಳನ್ನೂ ಒಲಿಸಿಕೊಂಡ ಸ್ಥಳವೆ ಇಂದ್ರಾಣೀಕ್ಷೇತ್ರವೆಂದು ಪ್ರಸಿದ್ಧವಾಗಿದೆ. ತಪಸ್ಸು ಮಾಡಿದ ಸ್ಥಳದಲ್ಲಿ ಕುಂಡಿಕೆಯಿದೆ. ಇದು ಉಡುಪಿಯಿಂದ ೨ ಮೈಲು ಪೂರ್ವಕ್ಕಿದೆ.

ನೆಲ್ಲಿತೀರ್ಥ (ಆಮಲಕೀತೀರ್ಥ) ಬಜಪೆಯಿಂದ ೪ ಮೈಲು ಈಶಾನ್ಯದಲ್ಲಿ ಈ ಸ್ಥಳ ಸಿಗುವುದು. ಇದು ಗುಹೆಯೊಳಗೆ ಒಂದು ಫರ್ಲಾಂಗು ದೂರದಲ್ಲಿದ್ದು ಪುಣ್ಯಾಶ್ರಮದಂತಿದೆ. ತುಲಾಮಾಸದಲ್ಲಿ ಸ್ನಾನಮಾಡುವುದು ಪುಣ್ಯಕರವಾಗಿದೆ. ವರ್ಷದಲ್ಲಿ ಆರು ತಿಂಗಳು ಮಾತ್ರ ಇಲ್ಲಿಗೆ ಹೋಗಬಹುದಾಗಿದೆ.

ಗಂಗಾಮೂಲ: ತುಂಗಾ, ಭದ್ರಾನದಿಗಳು ವರಾಹದಂಷ್ಟ್ರಗಳಿಂದ ಉದ್ಭವಿಸುವ ಪುಣ್ಯಸ್ಥಳ, ಕಾರ್ಕಳದಿಂದ ೨೦ ಮೈಲು ದೂರ ಬೆಟ್ಟದ ದಾರಿಯಲ್ಲಿ ಹೋಗಬೇಕಾಗುವುದು. ಎಳ್ಳಮಾವಾಸ್ಯೆ, ಸೂರ್ಯಗ್ರಹಣ ದಿನಗಳಲ್ಲಿ ಸ್ನಾನವು ಮಹಾಪುಣ್ಯಪ್ರದವೆನಿಸಿದೆ.

ಸಪ್ತಕ್ಷೇತ್ರಗಳು: ಉಡುಪಿ, ಸುಬ್ರಹ್ಮಣ್ಯಗಳಲ್ಲದೆ ಕುಂಭಾಸೀ, ಕೋಟೇಶ್ವರ, ಶಂಕರನಾರಾಯಣ, ಗೋಕರ್ಣ, ಕೊಲ್ಲೂರು, ಈ ಕ್ಷೇತ್ರಗಳೂ ಪರಶುರಾಮಕ್ಷೇತ್ರದಲ್ಲಿ ಮುಕ್ತಿದಾಯಕಗಳಾದ ಸಪ್ತಕ್ಷೇತ್ರಗಳೆಂದು ಪರಿಗಣಿತವಾಗಿವೆ.

ಧರ್ಮಸ್ಥಳ: ಶ್ರೀಮದ್ವಾದಿರಾಜರು ಪ್ರತಿಷ್ಠಿಸಿದ (ಮಂಜುನಾಥನೆಂದು ಪ್ರಸಿದ್ಧನಾದ) ಶಿವಾಲಯವಿರುವ ಈ ಸ್ಥಳವು ದಕ್ಷಿಣ ಕನ್ನಡದ ಪ್ರಮುಖ ಯಾತ್ರಾಸ್ಥಳಗಳಲ್ಲಿ ಒಂದಾಗಿದೆ. ಇದು ಉಡುಪಿಯಿಂದ ೬೮ ಮೈಲು ದೂರದಲ್ಲಿ ನೇತ್ರಾವತೀ ತೀರದಲ್ಲಿದೆ.

ಉಪ್ಪಿನಂಗಡಿ: ಕುಮಾರಧಾರಾ ಮತ್ತು ನೇತ್ರಾವತೀ ಸಂಗಮಸ್ಥಳ.

ತಲಕಾವೇರಿ: ಭಾಗಮಂಡಲದಿಂದ ನಾಲ್ಕು ಮೈಲು ಬೆಟ್ಟವೇರಿದರೆ ಕಾವೇರಿಯ ಉಗಮಸ್ಥಾನವಿದೆ. ತುಲಾಸಂಕ್ರಾಂತಿ ಇಲ್ಲಿ ಸ್ನಾನಮಾಡುವುದು ಮಹಾಪುಣ್ಯಪ್ರದವಾಗಿದೆ.

೧೬. ಆಧುನಿಕ ಉಡುಪಿ ನಗರ

ಮೈಸೂರು ರಾಜ್ಯದ ಕರಾವಳಿಗೆ ಹೊಂದಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಉಡುಪಿಯು ಒಂದು ಪ್ರಮುಖವಾದ ನಗರವಾಗಿ ಮೆರೆಯುತ್ತಿದೆ.

ಶ್ರೀಮದಾಚಾರ್ಯರ ಕಾಲದಿಂದಲೂ ಧರ್ಮದ ಬೆಳಕನ್ನು ಬೀರುತ್ತಲಿದ್ದ ಈ ಪಟ್ಟಣವು ತನ್ನ ಪರಂಪರೆಯನ್ನು ಇಂದಿಗೂ ಕಾಯ್ದುಕೊಂಡು ಬಂದಿದೆ. ಒಪ್ಪ ಓರಣಗಳಲ್ಲಿ, ನಯನಾಜೂಕುಗಳಲ್ಲಿ, ಕಾರ್ಯಕೌಶಲ್ಯಗಳಲ್ಲಿ, ವ್ಯಾಪಾರ ವಹಿವಾಟುಗಳಲ್ಲಿ ಉಡುಪಿಯು ತನ್ನದೇ ಆದಒಂದು ವೈಶಿಷ್ಟ್ಯವನ್ನು ಪಡೆದಿದೆ. ಈ ಜಿಲ್ಲೆಯ ಐದು ಶೆಡ್ಯೂಲ್ಡ್ ಬೇಂಕುಗಳಲ್ಲಿ ಸಿಂಡಿಕೇಟ್ ಬೇಂಕಿನ ಪ್ರಧಾನ ಕಾರ್ಯಾಲಯವು ಮತ್ತು ವಿಮಾಕಾರ್ಪರೇಶನಿನ ಡಿವಿಜನಲ್ ಕಚೇರಿಯೂ ಉಡುಪಿಯಲ್ಲಿವೆ. ಮಲ್ಪೆಯಂಥ ಯೋಗ್ಯ ಬಂದರದ ಸೌಕರ್ಯವು ವ್ಯಾಪಾರೋದ್ಯಮಗಳ ಉನ್ನತ ಭವಿಷ್ಯವನ್ನು ಸಾರುತ್ತಿದೆ.

ಶೈಕ್ಷಣಿಕ ಪ್ರಪಂಚದಲ್ಲಿಯೂ ಉಡುಪಿಯ ಸ್ಥಾನ ಮೇಲ್ಮಟ್ಟದ್ದಲ್ಲಿದೆ· ಹಲವಾರು ಹೈಸ್ಕೂಲುಗಳೂ, ಹೆಣ್ಣುಮಕ್ಕಳ ತರಬೇತಿಶಾಲೆ ಇರುವುವಲ್ಲದೆ ಉನ್ನತ ವ್ಯಾಸಂಗಕ್ಕೆ ಸುಯೋಗ್ಯ ಅವಕಾಶವನ್ನೊದವಿಸುವ ಎಂ. ಜಿ. ಎಂ. ಕಾಲೇಜು, ಪೂರ್ಣಪ್ರಜ್ಞ ಕಾಲೇಜು, ಇಂಜಿನಿಯರಿಂಗ್ ಕಾಲೇಜು, ಲಾ ಕಾಲೇಜು, ಶೈಕ್ಷಣಿಕ ಕಾಲೇಜು ಮತ್ತು ಆಯುರ್ವೇದ ಕಾಲೇಜುಗಳೂ ಇವೆ. ಭಾರತ ದೇಶದಲ್ಲಿಯೆ ಆದರ್ಶ ರೀತಿಯಲ್ಲಿ ಕಟ್ಟಿ ಬೆಳೆಯಿಸಿದ ಕಸ್ತೂರ್ಬಾ ಮೆಡಿಕಲ್ ಕಾಲೇಜು (ಡೆಂಟಲ್ ಕಾಲೇಜು ಸಹಿತ) ಕರ್ನಾಟಕಕ್ಕೆ ಭೂಷಣಪ್ರಾಯವಾಗಿದೆ.

ದಕ್ಷಿಣಭಾರತದಲ್ಲಿಯೆ ಪ್ರಖ್ಯಾತವಾದ ಶ್ರೀಮನ್ಮಧ್ವಸಿದ್ಧಾಂತಪ್ರಬೋಧಿನೀ ಸಂಸ್ಕೃತ ಕಾಲೇಜು ಉಡುಪಿಯಲ್ಲಿದೆ. ಇದನ್ನು ಉಡುಪಿಯ ಅಷ್ಟಮಠಾಧೀಶರುಗಳು ಪ್ರಾಚೀನ ಸಂಸ್ಕೃತಿಯ ಹಾಗೂ ಧರ್ಮಜ್ಞಾನಗಳ ಸಂರಕ್ಷಣೆಗೆ ಮತ್ತು ಪ್ರಚಾರಕ್ಕಾಗಿ ಸ್ಥಾಪಿಸಿದರು. ಹಾಗೂ ಇಂದಿಗೂ ಪೋಷಿಸಿಕೊಂಡು ಬರುತ್ತಿರುವರು. ಇದು ಪ್ರಾರಂಭದಲ್ಲಿ ಅನಂತಾಸನ ಮತ್ತು ಚಂದ್ರಮೌಳೀಶ್ವರದೇವಾಲಯಗಳಲ್ಲಿ ನಡೆಯುತ್ತಿದ್ದು ಈಗ ಭವ್ಯವಾದ ಸ್ವಂತ ಭವನದಲ್ಲಿ ನಡೆಯುತ್ತಿದೆ.

№ 005936